


ಬಸವ ಯುಗದ ವಚನಕಾರರು

ಆಯ್ದ ವಚನಗಳ ಕಟ್ಟು

ಸಂಪಾದಕರು

ಸಿ.ಪಿ.ನಾಗರಾಜ

ಬಸವ ಯುಗದ ವಚನಕಾರರು

ಆಯ್ದ ವಚನಗಳ ಕಟ್ಟು

ಸಂಪಾದಕರು

ಸಿ.ಪಿ.ನಾಗರಾಜ

ನಾಗು ಸ್ಮಾರಕ ಪ್ರಕಾಶನ

೭೫, ೫ನೇ ಕ್ರಾಸ್, ಕ್ರಿಶ್ಣ ಗಾರ್ಡನ್, ಆರ್.ವಿ. ಕಾಲೇಜ್ ಪೋಸ್ಟ್

ಬೆಂಗಳೂರು – ೫೬೦ ೦೫೯

BASAVA YUGADA VACHANAKARARU
by C.P. Nagaraja, Published by Nagu Smaraka Prakashana, 75, `A' Block, 5th Cross, Krishna Garden, R.V. College Post, Bengaluru-560059, Mobile: 9986347521.

First Edition : 2022

Pages : 192

Price : Rs.200 /-

Paper : 80gsm NS Maplitho

Size : Demy 1/8

ಪುಟಗಳು : 192

ಬೆಲೆ : ರೂ. 200/-

ಪ್ರತಿಗಳು ದೊರೆಯುತ್ತವೆ:

ಹರಿವು ಬುಕ್ಸ್
ಬೆಂಗಳೂರು
ದೂರವಾಣಿ: 080-2660 3000

ಆರ್. ಸುಧೀಂದ್ರ ಕುಮಾರ್
ಮೈಸೂರು
ಮೊಬೈಲ್: 8892626269

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ಮುನ್ನುಡಿ

ಕನ್ನಡ ನಾಡಿನ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನವನ್ನು ಚಲನಶೀಲಯುಗವೆಂದು ಗುರುತಿಸಲಾಗಿದೆ. ಸಾವಿರಾರು ವರ್ಷಗಳಿಂದ ಪರಂಪರೆಯ ಅಧೀನದಲ್ಲಿ ಉಸಿರುಗಟ್ಟಿದ್ದ ಜನತೆಯ ಬದುಕಿಗೆ ಜೀವ ಚೈತನ್ಯ ದೊರೆತ ಅಪೂರ್ವ ಕಾಲವಿದು. ಕನ್ನಡ ನಾಡಿನಲ್ಲಿ ಆಗ ಕಾಣಿಸಿಕೊಂಡ ಶಿವಶರಣರು ಈ ಅಭೂತಪೂರ್ವ ಚಳುವಳಿಯ ನೇತಾರರು. ತಮ್ಮ ಕಾಲದ ಜಾತಿ ಭೇದ, ವರ್ಗ ಭೇದಗಳನ್ನು ಧಿಕ್ಕರಿಸಿ ಪರ್ಯಾಯವಾಗಿ ಹೊಸ ಸಮಾಜವನ್ನು ಕಟ್ಟಲು ಅವರು ಮುಂದಾದರು. ಈ ನೂತನ ಸಮಾಜದ ಬೆನ್ನೆಲುಬಾಗಿ ಶರಣರ ಸಾಮಾಜಿಕ ಚಿಂತನೆಗಳಿದ್ದವು. ದೇವಾಲಯ ಕೇಂದ್ರಿತ ವೈದಿಕ ಧರ್ಮದ ಪುರೋಹಿತಶಾಹಿ ಶೋಷಣೆ ಹಾಗೂ ಮೂಢನಂಬಿಕೆಗಳನ್ನು ಬುಡಸಮೇತ ಕಿತ್ತುಹಾಕಲು ಅವರು ಉದ್ಯುಕ್ತರಾದರು. ದೇವಾಲಯದ ಸ್ಥಾವರವನ್ನು ನಿರಾಕರಿಸಿದರು.

ಇಷ್ಟಲಿಂಗ ಪರಿಕಲ್ಪನೆಯ ಮೂಲಕ ದೇಹವೇ ದೇವಾಲಯವಾಯಿತು. ಕಾಯಕ ತತ್ವವನ್ನು ಪ್ರಚುರಪಡಿಸಿ ಆರ್ಥಿಕ ನೆಲೆಯಲ್ಲಿ ಕ್ರಾಂತಿಕಾರಿ ಸಮಸಮಾಜವನ್ನು ಕಟ್ಟಲು ಹೊರಟರು. ಸಮಾಜದ ಮೂಲಭೂತ ಬದಲಾವಣೆಗೆ ಮುಂದಾಗುವ ಯಾವುದೇ ಚಳುವಳಿ ಪಟ್ಟಭದ್ರರನ್ನು ಸಹಜವಾಗಿಯೇ ಕೆರಳಿಸುತ್ತದೆ. ಪರಿಣಾಮವಾಗಿ ಧರ್ಮಾಧಿಕಾರ ಮತ್ತು ರಾಜ್ಯಾಧಿಕಾರಗಳೆರಡೂ ಒಟ್ಟಾಗಿ ಶರಣರ ಸಾಮಾಜಿಕ ಆರ್ಥಿಕ ಕ್ರಾಂತಿಯನ್ನು ಬಗ್ಗುಬಡಿಯಲು ನಿರ್ಧರಿಸಿದವು. ವರ್ಣವ್ಯವಸ್ಥೆಗೆ ವಿರೋಧವಾಗಿ ಶರಣರು ನಿಶ್ಚಯಿಸಿದ ಮದುವೆಯ ನೆಪವಾಗಿ ವಧೂವರರ ಪಿತೃಗಳಾದ ಅಸ್ಪೃಶ್ಯ ಶರಣ ಹರಳಯ್ಯ ಮತ್ತು ಬ್ರಾಹ್ಮಣ ಮಧುವರಸರನ್ನು ಎಳಹೂಟೆ ಕಟ್ಟಿ ಕೊಲ್ಲಿಸಿದರು. ಪರಿಣಾಮವಾಗಿ ಶರಣರು ದಂಗೆಯೆದ್ದು ರಾಜ ಬಿಜ್ಜಳನ ಕೊಲೆಯಾಯಿತು. ಇದೆಲ್ಲ ಇತಿಹಾಸ.

ಅಂದು ಪುರೋಹಿತಶಾಹಿ ಮತ್ತು ರಾಜಶಾಹಿಗೆ ಜಯ ಸಿಕ್ಕಿತಾದರೂ ಶರಣರು ಬಿತ್ತಿದ ಕನಸು ಇಂದಿಗೂ ಕನ್ನಡ ನಾಡಿನಲ್ಲಿ ಜಾಗೃತವಾಗಿಯೇ ಉಳಿದಿದೆ. ಕನ್ನಡ ಸಂಸ್ಕೃತಿಯ ಉಜ್ವಲ ನೆನಪಿನ ಸ್ಫೂರ್ತಿ ಕೇಂದ್ರವಾಗಿದೆ. ಬಿಜ್ಜಳನ ರಾಜಧಾನಿ

ಕಲ್ಯಾಣದಲ್ಲಿ ಬಸವಣ್ಣನ ನೇತೃತ್ವದಲ್ಲಿ ಅಸಂಖ್ಯಾತ ಶರಣಶರಣೆಯರು ಅಂದು ಸೇರಿದ್ದರು. ಆಧ್ಯಾತ್ಮಿಕ ಬುನಾದಿಯ ಮೇಲೆ ಶರಣರು ಕಂಡ ಸಮಸಮಾಜದ ಕನಸನ್ನು ನನಸಾಗಿಸಲು, ಅವರು ವಾಗ್ವಾದ ಚರ್ಚೆ ಸಂವಾದಗಳಲ್ಲಿ ನಿರತರಾಗಿ ಆಡಿದ ಕಾವ್ಯಾತ್ಮಕ ಮಾತುಗಳೇ ವಚನಗಳೆಂದು ಖ್ಯಾತಿ ಹೊಂದಿದವು. ಕಲ್ಯಾಣದ ಕ್ರಾಂತಿಯ ನಂತರ ಅಳಿದುಳಿದ ವಚನಗಳೇ ಹತ್ತಾರು ಸಾವಿರವಿರುವಾಗ, ಬಹುಶಃ ಲಕ್ಷಾಂತರ ವಚನಗಳು ದುಷ್ಟರ ಧಾಳಿಗೆ ಸಿಲುಕಿ ಸುಟ್ಟು ಬೂದಿಯಾಗಿರಬಹುದು.

ಕನ್ನಡ ಸಾಹಿತ್ಯ ಪರಂಪರೆಯಲ್ಲಿಯೂ ವಚನಯುಗ ಒಂದು ಸ್ಥಿತ್ಯಂತರದ ಕಾಲ. ಚಂಪೂ ಯುಗದ ಪ್ರೌಢ ಕಾವ್ಯ ಪರಂಪರೆಯಿಂದ ಕನ್ನಡ ಕಾವ್ಯ ಜನಪ್ರಿಯ ನೆಲೆಗೆ ಬಂದು ಮುಟ್ಟಿದ್ದು, ಹನ್ನೆರಡನೆಯ ಶತಮಾನದ ವಚನಕಾರರಿಂದ. ಅಲ್ಲಿಂದ ಮುಂದೆ ಕನ್ನಡ ಸಾಹಿತ್ಯದ ದಿಕ್ಕೇ ಬದಲಾಯಿತು. ದೇಸಿ ಯುಗ ಆರಂಭವಾಯಿತು. ವಚನಕಾರರೇ ಇದಕ್ಕೆ ಸ್ಫೂರ್ತಿ ನೀಡಿದರು. ಯಾವುದೇ ಚಳುವಳಿಯ ನೇತಾರರು ಕೆಲವೇ ಕೆಲವು ಮಂದಿ ಇರಬಹುದಾದರೂ, ಅದರ ಒಡಲಿನಲ್ಲಿ ಸಾವಿರಾರು ಮಂದಿಯಿರುತ್ತಾರೆ. ಶಿವಶರಣರಲ್ಲಿಯೂ ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ, ಸಿದ್ಧರಾಮ, ಚೆನ್ನಬಸವಣ್ಣನವರಲ್ಲದೆ ನೂರಾರು ಶರಣಶರಣೆಯರ ವಚನಗಳು ಕಾಲದ ಪ್ರವಾಹದಲ್ಲಿ ಈಜಿ ಉಳಿದಿವೆ. ಇವರೆಲ್ಲರೂ ಅನುಭಾವದ ನೆಲೆಯಲ್ಲಿ ಸಮಾನರೇ ಎಂದು ಭಾವಿಸಬೇಕಾಗುತ್ತದೆ. ಮಡಿವಾಳ ಮಾಚಯ್ಯನ ಕೃಪೆಯಿಂದ ತಾವು ಬಸವಣ್ಣನನ್ನು ಕಂಡೆನೆಂದು ಪ್ರಭುದೇವರು ಸ್ಮರಿಸಿಕೊಳ್ಳುತ್ತಾರೆ. ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ ಮುಂತಾದ ಅಸ್ಪೃಶ್ಯ ನೆಲೆಯಿಂದ ಬಂದವರನ್ನು 'ಹಿರಿಯ ಮಾಹೇಶ್ವರರು... ಆದ್ಯರು' ಎಂದು ಉಳಿದವರು ಗೌರವಿಸುತ್ತಾರೆ. ಶಿವಶರಣೆಯರ ಬಗೆಗಂತೂ ಅತೀವ ಗೌರವವಿದೆ. ಹೀಗಿದ್ದರೂ ಜನಪ್ರಿಯ ನೆಲೆಯಲ್ಲಿ ಅಲ್ಲಮ, ಬಸವಣ್ಣ, ಅಕ್ಕಮಹಾದೇವಿಯ ವಚನಗಳಿಗೆ ಹೆಚ್ಚು ಪ್ರಚಾರ ಸಿಕ್ಕಿದೆ.

ಈ ದೃಷ್ಟಿಯಿಂದ ಡಾ. ಸಿ.ಪಿ.ನಾಗರಾಜ ಅವರು ಸಂಪಾದಿಸಿರುವ "ಬಸವಯುಗದ ವಚನಕಾರರು–ಆಯ್ದ ವಚನಗಳ ಕಟ್ಟು" ಗಮನಾರ್ಹವೆನಿಸುತ್ತದೆ. ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ–ಈ ಮೂವರನ್ನು ಹೊರತುಪಡಿಸಿ, ಉಳಿದ ಬಸವಯುಗದ ವಚನಕಾರರ ವಚನಗಳು ಇಲ್ಲಿ ಸೇರ್ಪಡೆಯಾಗಿವೆ. ಈ ಕಾಲದ ಅರವತ್ತ ನಾಲ್ಕು ಶರಣರು ಮತ್ತು ಹದಿನೆಂಟು ಶರಣೆಯರ ಒಟ್ಟು ಮುನ್ನೂರ ಒಂದು ವಚನಗಳು ಇಲ್ಲಿವೆ. ಅನುಭಾವ ಮತ್ತು ಸಾಹಿತ್ಯ – ಈ ಎರಡು ನೆಲೆಯಿಂದ ಇಲ್ಲಿ ಸೇರ್ಪಡೆಯಾಗಿರುವ ವಚನಗಳಿಗೆ ಮಹತ್ವವಿದೆ. ಈ ಸಂಕಲನದ ಹಿನ್ನೆಲೆ ಮತ್ತು ವೈಶಿಷ್ಟ್ಯವನ್ನು ನಾಗರಾಜ್ ವಿವೇಚಿಸಿದ್ದಾರೆ.

ಡಾ.ಸಿ.ಪಿ.ನಾಗರಾಜ ಅವರು ಕನ್ನಡ ಅಧ್ಯಾಪಕರಾಗಿ ನಿವೃತ್ತಿಯಾದ ಮೇಲೆ ನಿರಂತರವಾಗಿ ಕನ್ನಡ ಸಾಹಿತ್ಯದ ಓದು ಮತ್ತು ವ್ಯಾಖ್ಯಾನದಲ್ಲಿ ತೊಡಗಿಸಿಕೊಂಡಿದ್ದಾರೆ.

ನಾಟಕಕಾರ ಮತ್ತು ಅಂಕಣಕಾರರಾಗಿದ್ದ ಇವರು ನಿವೃತ್ತಿಯ ಬಳಿಕ ಸಂಪೂರ್ಣವಾಗಿ ಸಾಹಿತ್ಯ ವಿಮರ್ಶೆ ಮತ್ತು ವ್ಯಾಖ್ಯಾನದಲ್ಲಿ ನಿರತರಾಗಿದ್ದಾರೆ. ಪಂಪ, ಕುವೆಂಪು, ವಚನಕಾರರನ್ನು ಕುರಿತು ಹಲವು ಕೃತಿಗಳನ್ನು ರಚಿಸಿದ್ದಾರೆ. ವಿದ್ವಾಂಸರಿಗಿಂತ ಸಾಮಾನ್ಯ ಓದುಗರನ್ನು, ವಿದ್ಯಾರ್ಥಿಗಳನ್ನು ಮತ್ತು ಅಧ್ಯಾಪಕರನ್ನು ಲಕ್ಷ್ಯದಲ್ಲಿಟ್ಟುಕೊಂಡು ಕನ್ನಡ ಸಾಹಿತ್ಯ ಪ್ರಚಾರ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ.

ಜಿ.ಪಿ.ರಾಜರತ್ನಂ ಅವರಿಂದ ಮೊದಲಾಗಿ ಹಲವಾರು ಸಾಹಿತ್ಯದ ಅಧ್ಯಾಪಕರಿಂದ ಮತ್ತು ವಿದ್ವಾಂಸರಿಂದ ಬೆಳೆದಿರುವ ಈ ಪರಂಪರೆಯನ್ನು ಅತ್ಯಂತ ನಿಷ್ಠೆಯಿಂದ ಡಾ.ಸಿ.ಪಿ.ನಾಗರಾಜ್ ಮುಂದುವರಿಸುತ್ತಿದ್ದಾರೆ. ತನುಮನಧನವನ್ನೆಲ್ಲಾ ಅರ್ಪಿಸಿ ಅವರು ನಡೆಸುತ್ತಿರುವ ಈ ಸಾಹಿತ್ಯ ಸೇವೆಯು ಅಪೂರ್ವವಾದುದೆಂದು ಒಪ್ಪಿಕೊಂಡು, ಅವರಿಗೆ ತಮ್ಮ ಕೆಲಸ ಮುಂದುವರಿಸಲು ಬೇಕಾದ ನೆಮ್ಮದಿ ಮತ್ತು ಆರೋಗ್ಯ ಸಿಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಪ್ರೊ.ಕೆ.ಮರುಳಸಿದ್ದಪ್ಪ
ಬೆಂಗಳೂರು

ನನ್ನ ನುಡಿ

ಶಿವಶರಣಶರಣೆಯರ ವಚನಗಳನ್ನು ಕುರಿತ ನನ್ನ ಓದು ಬರಹವನ್ನು ಗಮನಿಸಿದ ಗುರುಗಳಾದ ಕೆ.ಮರುಳಸಿದ್ದಪ್ಪನವರು "ನಾಗರಾಜ್, ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ಪ್ರಮುಖರಾದ ಬಸವಣ್ಣ, ಅಲ್ಲಮ ಪ್ರಭು ಮತ್ತು ಅಕ್ಕಮಹಾದೇವಿಯವರನ್ನು ಹೊರತುಪಡಿಸಿ, ಆ ಶತಮಾನದಲ್ಲಿದ್ದ ಇನ್ನುಳಿದ ವಚನಕಾರರಲ್ಲಿ ನಿಮಗೆ ಮೆಚ್ಚುಗೆಯಾದ ಕೆಲವು ವಚನಗಳನ್ನು ಆಯ್ಕೆ ಮಾಡಿ, ಒಂದು ಸಂಕಲನವನ್ನು ತನ್ನಿ" ಎಂದು ಸಲಹೆಯನ್ನು ನೀಡಿದರು. ಅವರ ಸಲಹೆಯ ಮೇರೆಗೆ ನಾನು ಈ ವಚನ ಸಂಕಲನವನ್ನು ಸಿದ್ಧಪಡಿಸಿದ್ದೇನೆ.

ವಚನಗಳ ಆಯ್ಕೆ, ವಿಶ್ಲೇಷಣೆ ಮತ್ತು ನನ್ನ ಓದು ಬರಹಕ್ಕೆ ಗುರುಗಳಾದ ಕೆ.ವಿ.ನಾರಾಯಣ ಅವರು ಮಾರ್ಗದರ್ಶನ ನೀಡಿದ್ದಾರೆ. ಬಸವಯುಗದ ವಚನಕಾರರ ಪ್ರಾತಿನಿಧಿಕ ವಚನಗಳ ಆಯ್ಕೆಯಲ್ಲಿ ನನ್ನ ಗೆಳೆಯರಾದ ಮೂಡ್ನಾಕೂಡು ಚಿನ್ನಸ್ವಾಮಿ, ಆರ್.ಚಲಪತಿ, ಬಿ.ಎ.ಅನ್ನದಾನೇಶ್ ಮತ್ತು ಸುಬ್ರಮಣ್ಯಸ್ವಾಮಿ ಅವರು ನೆರವಾಗಿದ್ದಾರೆ.

ಎಂ.ಎಂ.ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡಿರುವ ವಚನ ಸಂಪುಟಗಳಿಂದ ವಚನಗಳನ್ನು ಆಯ್ದುಕೊಂಡಿದ್ದೇನೆ.

ಬಿ.ವ್ಹಿ.ಮಲ್ಲಾಪುರ (ಸಂಪಾದಕರು): ಚೆನ್ನಬಸವಣ್ಣನವರ ವಚನ ಸಂಪುಟ
ಎಸ್.ವಿದ್ಯಾಶಂಕರ (ಸಂಪಾದಕರು): ಸಿದ್ಧರಾಮೇಶ್ವರ ವಚನ ಸಂಪುಟ
ವೀರಣ್ಣ ರಾಜೂರ (ಸಂಪಾದಕರು) : ಶಿವಶರಣೆಯರ ವಚನ ಸಂಪುಟ
ಎಂ.ಎಂ.ಕಲಬುರ್ಗಿ (ಸಂಪಾದಕರು): ಸಂಕೀರ್ಣ ವಚನ ಸಂಪುಟ–ಒಂದು
ಎಸ್.ವಿದ್ಯಾಶಂಕರ (ಸಂಪಾದಕರು): ಸಂಕೀರ್ಣ ವಚನ ಸಂಪುಟ–ಎರಡು
ಬಿ.ಆರ್.ಹಿರೇಮಠ (ಸಂಪಾದಕರು): ಸಂಕೀರ್ಣ ವಚನ ಸಂಪುಟ–ಮೂರು
ಭಾನುಮತಿ(ಪ್ರಸ್ತುತ ಪರಿಷ್ಕರಣ ಸಂಪಾದಕರು)ಸಂಕೀರ್ಣ ವಚನ ಸಂಪುಟ–ನಾಲ್ಕು

"ಬಸವಯುಗದ ವಚನಕಾರರು–ಆಯ್ದ ವಚನಗಳ ಕಟ್ಟು" ಹೊತ್ತಿಗೆಯನ್ನು ಸಿದ್ಧಪಡಿಸಲು ನೆರವಾದ ಮೇಲ್ಕಂಡ ಎಲ್ಲಾ ಗುರುಹಿರಿಯರಿಗೆ, ಗೆಳೆಯರಿಗೆ ಮತ್ತು ಸಂಪಾದಕ ವರ್ಗದವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಸಿ ಪಿ ನಾಗರಾಜ

ಪ್ರಸ್ತಾವನೆ

ಎಂ.ಎಂ. ಕಲುಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಈ ಮೊದಲು ಪ್ರಕಟಗೊಂಡಿದ್ದ ಹದಿನೈದು ವಚನ ಸಂಪುಟಗಳನ್ನು ಜತೆಗೂಡಿಸಿ "ಬಸವಯುಗದ ವಚನ ಮಹಾಸಂಪುಟ-ಒಂದು" ಮತ್ತು "ಬಸವೋತ್ತರಯುಗದ ವಚನ ಮಹಾಸಂಪುಟ- ಎರಡು" ಎಂಬ ಹೆಸರಿನಲ್ಲಿ ಎರಡು ಸಂಪುಟಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ೨೦೧೬ ನೆಯ ಇಸವಿಯಲ್ಲಿ ಪ್ರಕಟಿಸಿದೆ. ಮೊದಲನೆಯ ಸಂಪುಟದಲ್ಲಿ ಹನ್ನೆರಡನೆಯ ಶತಮಾನದಲ್ಲಿ ೧೭೭ ಮಂದಿ ಶಿವಶರಣರು ಮತ್ತು ೩೩ ಮಂದಿ ಶಿವಶರಣೆಯರು ರಚಿಸಿದ ಒಟ್ಟು ೧೪,೮೯೫ ವಚನಗಳಿವೆ. ಇದರಲ್ಲಿ ೨೬೪ ವಚನಗಳನ್ನು ರಚಿಸಿರುವ ವಚನಕಾರರ ಹೆಸರು ತಿಳಿದುಬಂದಿಲ್ಲ. ಎರಡನೆಯ ಸಂಪುಟದಲ್ಲಿ ಹದಿನೈದರಿಂದ ಹದಿನೇಳನೆಯ ಶತಮಾನದ ಅವಧಿಯಲ್ಲಿ ೪೦ ಮಂದಿ ಶಿವಶರಣರು ರಚಿಸಿದ ೭,೯೫೧ ವಚನಗಳಿವೆ. ಈ ಎರಡು ಸಂಪುಟಗಳಲ್ಲಿ ಒಟ್ಟು ೨೫೦ ಮಂದಿ ವಚನಕಾರರು ರಚಿಸಿರುವ ೨೨,೮೪೬ ವಚನಗಳು ದೊರಕುತ್ತವೆ.

ಬಸವಯುಗದ ವಚನ ಸಂಪುಟ-ಒಂದರಲ್ಲಿ ಸಂಕಲನಗೊಂಡಿರುವ ಬಸವಣ್ಣನ ೧,೪೦೬ ವಚನಗಳನ್ನು, ಅಲ್ಲಮನ ೧,೬೧೩ ವಚನಗಳನ್ನು ಮತ್ತು ಅಕ್ಕಮಹಾದೇವಿಯ ೪೩೭ ವಚನಗಳನ್ನು ಹೊರತುಪಡಿಸಿ, ಇನ್ನುಳಿದ ೧೧,೧೮೦ ವಚನಗಳನ್ನು ನನ್ನ ಓದಿನ ವ್ಯಾಪ್ತಿಗೆ ಒಳಪಡಿಸಿಕೊಂಡಿದ್ದೇನೆ. ಬಸವಣ್ಣನವರ ಕಾಲದ ೬೪ ಮಂದಿ ಶಿವಶರಣರು ಮತ್ತು ೧೮ ಮಂದಿ ಶಿವಶರಣೆಯರ ವಚನಗಳಿಂದ ೩೦೧ ವಚನಗಳನ್ನು ಆಯ್ದುಕೊಂಡು "ಬಸವಯುಗದ ವಚನಕಾರರು-ಆಯ್ದ ವಚನಗಳ ಕಟ್ಟು" ಹೊತ್ತಿಗೆಯನ್ನು ಸಿದ್ಧಪಡಿಸಿದ್ದೇನೆ. ಶಿವಶರಣಶರಣೆಯರ ಪ್ರಾತಿನಿಧಿಕ ವಚನಗಳ ಆಯ್ಕೆಗೆ ಜಿ.ಎಸ್. ಶಿವರುದ್ರಪ್ಪನವರು **'ವಚನಕಾರರ ವಿಚಾರ ಕ್ರಾಂತಿ'** ಎಂಬ ಬರಹದಲ್ಲಿ ಹೇಳಿರುವ ಈ ಕೆಳಕಂಡ ನುಡಿಗಳು ನನಗೆ ಮಾರ್ಗದರ್ಶಕವಾಗಿವೆ.

"ಯಾವ ಯಾವ ಜಡ್ಡುಗಟ್ಟಿದ ಕಾಲಗಳಲ್ಲಿ ಸೂಕ್ಷ್ಮ ಸಂವೇದನೆ ಉಳ್ಳವರೂ, ವಿಚಾರವಂತರೂ ಆದ ಕೆಲವೇ ಜನ ತಮ್ಮ ಸುತ್ತಣ ಪರಿಸ್ಥಿತಿಯನ್ನೂ ಮತ್ತು ಅದನ್ನು ನಿಯಂತ್ರಿಸಿಕೊಂಡು ಬಂದ ರೂಢಿಗತವಾದ ವ್ಯವಸ್ಥೆ ಹಾಗೂ ಸಂಪ್ರದಾಯಗಳನ್ನೂ ಪ್ರಶ್ನಿಸಲು ತೊಡಗುತ್ತಾರೋ, ಪ್ರತಿಭಟಿಸಲು ತೊಡಗುತ್ತಾರೋ ಅಂತಹ ಕಾಲಗಳನ್ನು ಸಂಕ್ರಮಣ ಕಾಲಗಳೆಂದು ಕರೆಯಬಹುದು. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಇಂತಹ ಒಂದು ಸಂಕ್ರಮಣ

ಕಾಲ. ಹನ್ನೆರಡನೆಯ ಶತಮಾನದ ವಚನಕಾರರು ಅಥವಾ ಶಿವಶರಣಶರಣೆಯರು ಮೂಲತಃ ನಿಷ್ಠೂರ ವಿಮರ್ಶಕರು. ಪರಂಪರೆಯನ್ನು ಕುರಿತು, ಧರ್ಮವನ್ನು ಕುರಿತು, ದೇವರನ್ನು ಕುರಿತು, ತಮ್ಮ ಸುತ್ತಮುತ್ತಣ ಸಾಮಾಜಿಕ ಪರಿಸರವನ್ನು ಕುರಿತು, ಎಲ್ಲಕ್ಕೂ ಮಿಗಿಲಾಗಿ ತಮ್ಮನ್ನೇ ಕುರಿತು ವಸ್ತುನಿಷ್ಠವಾಗಿ ವಿಮರ್ಶೆ ಮಾಡಿದವರು." ಈ ನಿಲುವಿಗೆ ಪೂರಕವಾದ ವಚನಗಳನ್ನು ಆಯ್ಕೆ ಮಾಡಿ ಈ ಹೊತ್ತಿಗೆಯನ್ನು ಸಿದ್ಧಪಡಿಸಿದ್ದೇನೆ.

ಹನ್ನೆರಡನೆಯ ಶತಮಾನವೆಂದರೆ ಕ್ರಿ.ಶ.೧೧೦೧ ರಿಂದ ೧೨೦೦ ವರೆಗಿನ ಕಾಲಾವಧಿ. ಈ ಶತಮಾನದಲ್ಲಿದ್ದ ಬಸವಯುಗದ ವಚನಕಾರರಲ್ಲಿ ಕ್ರಿ.ಶ. ೧೧೨೦ ರಲ್ಲಿದ್ದ ಜೇಡರ ದಾಸಿಮಯ್ಯನನ್ನು ಆದ್ಯ ವಚನಕಾರನೆಂದು ಸಾಹಿತ್ಯ ಚರಿತ್ರಕಾರರು ಗುರುತಿಸಿದ್ದಾರೆ. ಕ್ರಿ.ಶ.೧೧೬೦ರಲ್ಲಿದ್ದ ಬಸವಣ್ಣ ಮತ್ತು ಅವನ ಸಮಕಾಲೀನರು ನಡೆಸಿದ ಸಾಮಾಜಿಕ ಆಂದೋಲನದಲ್ಲಿ ಪಾಲ್ಗೊಂಡ ಸಾವಿರಾರು ಶಿವಶರಣಶರಣೆಯರಲ್ಲಿ ಮತ್ತು ವಚನಗಳನ್ನು ರಚಿಸಿದ ನೂರಾರು ಮಂದಿ ವಚನಕಾರರಲ್ಲಿ ಬಸವಣ್ಣ, ಮಧುವರಸಯ್ಯ, ಪಂಡಿತಾರಾಧ್ಯ ಮುಂತಾದ ಬೆರಳೆಣಿಕೆಯ ವಚನಕಾರರನ್ನು ಬಿಟ್ಟರೆ ಉಳಿದವರೆಲ್ಲರೂ ಜೇಡರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಕದಿರ ರೆಮ್ಮವ್ವೆಯಂತಹ ಶೂದ್ರರು ಮತ್ತು ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯನಂತಹ ಪಂಚಮರೇ ಹೆಚ್ಚಾಗಿದ್ದಾರೆ.

ಹನ್ನೆರಡನೆಯ ಶತಮಾನದ ವಚನಕಾರ ಬಗ್ಗೆ ಕೆ.ವಿ.ನಾರಾಯಣ ಅವರು **"ವಚನ ಚಳುವಳಿ: ಟಿಪ್ಪಣಿಗಳು"** ಎಂಬ ಬರಹದಲ್ಲಿ ಈ ರೀತಿ ಹೇಳಿದ್ದಾರೆ.

"ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದ ಒಂದು ಭಾಗ ಅನುಭವಿಸಿದ ತಲ್ಲಣ ಸಾಮಾಜಿಕವಾಗಿ ಮಹತ್ವ ಪಡೆದಿದೆ. ಆಗ ನಡೆದ ಘಟನೆಗಳಿಗೆ ಮತ್ತು ಪರಿಣಾಮವಾಗಿ ಆದ ಸ್ಥಿತ್ಯಂತರಗಳಿಗೆ ಯಾವುದೇ ವ್ಯಕ್ತಿಯನ್ನು ಬೆರಳು ಮಾಡಿ ತೋರಿಸುವುದು ಸಲ್ಲದು. ಒಂದು ಸಮಾಜ ಸದಾಕಾಲವೂ ಪರಸ್ಪರ ವಿರೋಧವನ್ನುಳ್ಳ ಸಂಗತಿಗಳ ಮೊತ್ತವಾಗಿರುತ್ತದೆ. ಈ ವಿರೋಧಗಳು ಒಂದು ಕಾಲದಲ್ಲಿ ಪರಸ್ಪರ ಮುಖಾಮುಖಿಯಾಗುತ್ತವೆ. ಆಗಲೇ ಬದಲಾವಣೆಗಳು ನಡೆಯುವುದು. ಹನ್ನೆರಡನೆಯ ಶತಮಾನದ ಸಮಾಜವೂ ಇಂತಹ ಒಂದು ಸ್ಥಿತಿಯಲ್ಲಿ ಇತ್ತು. ಹಾಗಿದ್ದರೆ ಎದುರುಬದಿರಾಗಿ ನಿಂತ ವಿರೋಧಗಳು ಯಾವುವು? ಈ ಪ್ರಶ್ನೆಗೆ ಉತ್ತರ ಪಡೆಯಲು ನಾವು ವಚನಗಳಿಗೆ ಮೊರೆಹೋಗಬೇಕು."

ಉತ್ತರವನ್ನು ಪಡೆಯಲು ಹನ್ನೆರಡನೆಯ ಶತಮಾನದಲ್ಲಿ ಕನ್ನಡ ಜನಸಮುದಾಯದ ಧಾರ್ಮಿಕ ಆಚರಣೆ, ಸಾಮಾಜಿಕ ರಚನೆ, ರಾಜಕೀಯ ವ್ಯವಸ್ಥೆ ಮತ್ತು ಆರ್ಥಿಕ ಸ್ಥಿತಿಗತಿಯ ಸ್ವರೂಪಗಳು ಹೇಗಿದ್ದವು ಎಂಬುದನ್ನು

ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ ಅಂದಿನ ಜನಸಮುದಾಯದ ಬದುಕನ್ನು ಹೊರತುಪಡಿಸಿ ವಚನಗಳನ್ನು ಓದಲು ಆಗುವುದಿಲ್ಲ.

ತೀರ್ಥಂಕರರ ಆರಾಧನೆಯ ಜೈನ ಧರ್ಮ, ವಿಷ್ಣುವಿನ ಆರಾಧನೆಯ ವೈಷ್ಣವ ಧರ್ಮ ಮತ್ತು ಶಿವನ ಆರಾಧನೆಯ ಶೈವ ಧರ್ಮಗಳು ಸಮಾನಾಂತರವಾಗಿ ಜನಸಮುದಾಯದಲ್ಲಿ ನೆಲೆಸಿದ್ದವು. ಶೈವ ಧರ್ಮದಲ್ಲಿ ಏಕ ದೇವೋಪಾಸನೆಯಿದ್ದರೆ, ವೈಷ್ಣವ ಧರ್ಮದಲ್ಲಿ ವಿಷ್ಣುವಿನ ಅವತಾರಗಳ ನಂಬಿಕೆಯಿದ್ದುದರಿಂದ ಹಲವಾರು ದೇವರುಗಳ ಆರಾಧನೆಯು ನಡೆಯುತ್ತಿತ್ತು. ಇದರ ಜತೆಜತೆಗೆ ಮರಗಿಡಬಳ್ಳಿಗಳನ್ನು, ಕಲ್ಲು, ಮಣ್ಣು, ಮರ ಮತ್ತು ಲೋಹದ ಮೂರ್ತಿಗಳನ್ನೇ ದೇವರೆಂದು ನಂಬಿ ಪೂಜಿಸುತ್ತಿದ್ದ ಜನಪದವಿತ್ತು. ಜನಸಮುದಾಯದ ಹೆಚ್ಚಿನ ಭಾಗ ಮೇಲು ಕೀಳಿನ ಜಾತಿ ವ್ಯವಸ್ಥೆಗೆ ಒಳಪಟ್ಟಿದ್ದರು. ಜಾತಿಗಳಿಗೆ ಸೀಮಿತವಾದ ಕಸುಬುಗಳಿದ್ದವು. ಜಾತಿ ವ್ಯವಸ್ಥೆಯೇ ಜನರ ಬದುಕನ್ನು ನಿಯಂತ್ರಿಸುವ ಮತ್ತು ನಿರ್ದೇಶಿಸುವ ಶಕ್ತಿಯಾಗಿತ್ತು.

ರಾಜಕೀಯ ವ್ಯವಸ್ಥೆಯಲ್ಲಿ ಚಕ್ರವರ್ತಿ, ರಾಜ, ಸಾಮಂತ ಮತ್ತು ಪಾಳೆಯಗಾರರು ಬೇರೆ ಬೇರೆ ಹಂತಗಳಲ್ಲಿ ಅಧಿಕಾರದ ಹತೋಟಿಯನ್ನು ಜನಸಮುದಾಯದ ಮೇಲೆ ಹೊಂದಿದ್ದರು. ಊಳಿಗಮಾನ್ಯ ಪದ್ಧತಿಯಿಂದಾಗಿ ಉಳ್ಳವರು ಮತ್ತು ಇಲ್ಲದವರು ಎಂಬ ವರ್ಗಭೇದವಿತ್ತು. ಅಧಿಕಾರಸ್ಥರ ಗದ್ದುಗೆಯನ್ನು ಉಳಿಸುವುದಕ್ಕಾಗಿ ಮತ್ತು ಸಿರಿವಂತರ ಸಂಪತ್ತನ್ನು ಬೆಳೆಸುವುದಕ್ಕಾಗಿ ಆಸ್ತಿಪಾಸ್ತಿ ಮತ್ತು ಸಂಪತ್ತಿಲ್ಲದ ಜನಸಾಮಾನ್ಯರು ನಿರಂತರವಾಗಿ ದುಡಿಯುವುದಲ್ಲದೆ, ದುಡಿದದ್ದರಲ್ಲಿ ಬಗೆಬಗೆಯ ತೆರಿಗೆಗಳನ್ನು ಆಳುವ ದಣಿಗಳಿಗೆ ಕಟ್ಟುತ್ತಾ, ತೀವ್ರವಾದ ಶೋಷಣೆಗೆ ಗುರಿಯಾಗಿದ್ದರು. ಹನ್ನೆರಡನೆಯ ಶತಮಾನದಲ್ಲಿ ಜನಸಾಮಾನ್ಯರ ಬದುಕಿನ ರೀತಿಯನ್ನು ಎಂ. ಚಿದಾನಂದಮೂರ್ತಿಯವರು ಈ ರೀತಿ ವಿವರಿಸಿದ್ದಾರೆ.

"ಮನುಷ್ಯನಿಗೆ ಸಾಮಾಜಿಕ ಸ್ಥಾನ(Social Status), ಅಧಿಕಾರ(Power) ಮತ್ತು ಹಣ ಇವು ಮೂರು ಬೇಕು–ಇವುಗಳನ್ನು ಪಡೆಯಬಯಸುವವರು ಒಂದಲ್ಲ ಒಂದು ರೀತಿಯ, ಸೂಕ್ಷ್ಮವೂ ಕೆಲವೆಡೆ ಸ್ಪಷ್ಟವೂ ಆದ ಶೋಷಣೆಗೆ ಕೈಹಾಕುತ್ತಾರೆ. ಪ್ರಾಚೀನ ಕರ್ನಾಟಕದಲ್ಲಿ ಈ ಮೂರನ್ನು ಪಡೆದು ಶಿಷ್ಟ ಸಮಾಜದ ಭಾಗಗಳೆನ್ನಿಸಿಕೊಂಡಿದ್ದವರು ಬ್ರಾಹ್ಮಣರು, ದೊರೆಗಳು ಮತ್ತು ವರ್ತಕರು. ಬ್ರಾಹ್ಮಣರಿಗೆ ಹುಟ್ಟಿನಿಂದಲೇ ಒಂದು ಸ್ಥಾನ ಲಭ್ಯವಾಗುತ್ತದೆ. ಜ್ಞಾನದ ಕೀಲಿಯನ್ನು ಹಿಡಿದಿದ್ದ ಇವರ ಸಲಹೆ, ಸೂಚನೆ, ಮಾರ್ಗದರ್ಶನಗಳು ಆಳುವವರಿಗೆ ಬೇಕು. ರಾಜರು ಅವರಿಗೆ ಸಮೃದ್ಧವಾಗಿ ದತ್ತಿಗಳನ್ನು ಕೊಡುವುದರ ಮೂಲಕ ಮತ್ತು ಅವರಿಗೆ ರಾಜ್ಯದಲ್ಲಿ ಬಹುಮುಖ್ಯ ಅಧಿಕಾರ ಸ್ಥಾನಗಳನ್ನು ಕೊಡುವುದರ ಮೂಲಕ ಅವರ ಸಹಕಾರವನ್ನು ಗೆದ್ದುಕೊಳ್ಳುತ್ತಿದ್ದರು. ಆಸ್ಥಾನಗಳಲ್ಲಿದ್ದುಕೊಂಡು, ರಾಜಾಶೀರ್ವಾದವನ್ನೂ ರಾಜ ಪ್ರಶಂಸೆಯನ್ನೂ ಮಾಡಿ ಬ್ರಾಹ್ಮಣರು ತಮಗೆ ದೊರೆತ ದತ್ತಿಗಳ ಸಹಾಯದಿಂದ

ಜೀವಿತವನ್ನು ನಡೆಸುತ್ತಿದ್ದರು. ರಾಜ್ಯಾದಾಯದ ದೃಷ್ಟಿಯಿಂದ ವರ್ತಕರು ದೇಶದ ಬಹು ಮುಖ್ಯ ಭಾಗವಾಗುತ್ತಾರೆ.

ಈ ಮೂರು ವರ್ಗಗಳೂ ತಮಗೆ ಮುಖ್ಯವಾಗಿ ಬೇಕಾದ ಸಾಮಾಜಿಕ ಸ್ಥಾನ, ಅಧಿಕಾರ ಮತ್ತು ಹಣಕ್ಕೆ ಪರಸ್ಪರ ಸಹಾಯಕರಾಗಿ ನಿಲ್ಲುವುದರಲ್ಲಿ ಆಶ್ಚರ್ಯವೇನಿದೆ? ಆದರೆ ಈ ಮೂವರೂ ತಮ್ಮ ಸೌಲಭ್ಯವನ್ನು ಬೆಳೆಸಿಕೊಳ್ಳುವುದು ಬಹು ಸಂಖ್ಯಾತರಾಗಿದ್ದ ಸಾಮಾನ್ಯವರ್ಗದವರಿಂದ. ಕರ್ನಾಟಕದ ಸಾವಿರಾರು ಶಾಸನಗಳನ್ನು ನೋಡಿದರೆ ಅಲ್ಲೆಲ್ಲ ತುಂಬಿರುವುದು ಅಥವಾ ಎದ್ದು ಕಾಣುವುದು ಮೇಲಿನ ಮೂರು ವರ್ಗಗಳ ಕತೆಯೇ. ಬೌದ್ಧಿಕ ಅಥವಾ ಧಾರ್ಮಿಕ ಚಟುವಟಿಕೆಗಳಿಂದ, ಅಧಿಕಾರ, ಐಶ್ವರ್ಯಗಳಿಂದ ದೂರವಾದ ಸಾಮಾನ್ಯ ಜನತೆಯು ಇರುವುದು ಯಾರಾದರೂ ಶ್ರೀಮಂತರು ದೇವಸ್ಥಾನ ಕಟ್ಟಿಸಿದರೆ ಅದಕ್ಕೆ ತಮ್ಮ ಕೈಲಾದಷ್ಟು ದತ್ತಿ ಕೊಡುವುದಕ್ಕೆ; ದುಡಿದು ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕೆ; ಮತ್ತು ಯುದ್ಧಗಳಲ್ಲಿ ಹೋರಾಡಿ ಸಾಯುವುದಕ್ಕೆ. ಈ ಸಾಮಾನ್ಯರೇ ನಿಜವಾಗಿಯೂ ದೇಶದ ಆಸ್ತಿ ಅಥವಾ ಅವರೇ ನಿಜವಾಗಿ ದೇಶ. ಆದರೆ ಅವರ ಸೌಲಭ್ಯಗಳನ್ನು ತಮ್ಮ ಸುಖಕ್ಕೆ ಹರಿಸಿಕೊಂಡ ರಾಜರ, ದಂಡನಾಯಕರ, ಮಂತ್ರಿಗಳ, ಪುರೋಹಿತರ, ವರ್ತಕರ ಕತೆಗಳನ್ನು ದಾನ ಶಾಸನಗಳು ಸುದೀರ್ಘವಾಗಿ ಬಣ್ಣಿಸುತ್ತವೆ. ಚಿಕ್ಕ ಚಿಕ್ಕ ಪಾಠವಿರುವ(Text) ವೀರಗಲ್ಲುಗಳಲ್ಲಿ ಸಾಮಾನ್ಯರ ಕತೆ ದೊರಕುತ್ತದೆ. ಸುಖಪಡಲು ಅವರು; ದುಡಿದು ಸಾಯಲು ಇವರು. ಇದು ಅಂದಿನ ಕರ್ನಾಟಕದ ಕತೆ." **(ಎಂ. ಚಿದಾನಂದಮೂರ್ತಿ ೧೯೭೫ ವಚನ ಸಾಹಿತ್ಯ)**

ಉಳ್ಳವರು ತಿನ್ನುವ ಆಹಾರವನ್ನು ಬೆಳೆಯುವ, ಉಡುವ ಬಟ್ಟೆಯನ್ನು ನೆಯ್ಯುವ ಮತ್ತು ವಾಸಿಸುವ ಮನೆಯನ್ನು ಕಟ್ಟುವ ಕಾಯಕದಲ್ಲಿ ತೊಡಗಿರುವ ಸಾಮಾನ್ಯರೆಲ್ಲರೂ ಜಾತಿ ಶ್ರೇಣಿಯಲ್ಲಿ ಕೆಳವರ್ಗದ ಶೂದ್ರರಾಗಿದ್ದರು ಮತ್ತು ಪಂಚಮರಾಗಿದ್ದರು. ತಮ್ಮ ದುಡಿಮೆಯಿಂದಲೇ ಉತ್ಪಾದನೆಗೊಳ್ಳುತ್ತಿರುವ ಅನ್ನ, ಬಟ್ಟೆ ಮತ್ತು ವಸತಿಯಲ್ಲಿ ತಾವು ನೆಮ್ಮದಿಯಿಂದ ಬಾಳುವುದಕ್ಕೆ ಅಗತ್ಯವಾದಷ್ಟು ಪಾಲನ್ನು ಪಡೆಯಲಾಗದೆ, ಕಡುಬಡತನದಲ್ಲಿಯೇ ಬೇಯುತ್ತಿದ್ದ ಸಾಮಾನ್ಯರು ತಮ್ಮ ಹೀನ ಸ್ಥಿತಿಗತಿಗಳಿಗೆ ಕಾರಣವಾದ ಸನ್ನಿವೇಶ ಮತ್ತು ವ್ಯಕ್ತಿಗಳ ಬಗ್ಗೆ ಚಿಂತಿಸತೊಡಗಿದಾಗ, ಪರಸ್ಪರ ವಿರೋಧವುಳ್ಳ ಸಂಗತಿಗಳು ಅವರಿಗೆ ಮನದಟ್ಟಾಗತೊಡಗಿದವು.

ಅದೇನೆಂದರೆ ಸಮಾಜದ ಸಂಪತ್ತನ್ನು ಜಾತಿ, ಧರ್ಮ ಮತ್ತು ದೇವರ ಹೆಸರಿನಲ್ಲಿ ತಮ್ಮ ವಶದಲ್ಲಿಟ್ಟುಕೊಂಡು ಬಾಳುತ್ತಿರುವ ಮೇಲು ಜಾತಿ ಮತ್ತು ಮೇಲು ವರ್ಗದವರ ವಂಚನೆ, ಕ್ರೌರ್ಯ ಮತ್ತು ಅಟ್ಟಹಾಸದ ನಡೆನುಡಿಗಳು ಎದ್ದು ಕಾಣತೊಡಗಿದವು. ಯಾವ ಜಾತಿ, ಧರ್ಮ, ದೇವರುಗಳು ಉಳ್ಳವರಿಗೆ ಎಲ್ಲ ಬಗೆಯ ಸಂಪತ್ತನ್ನು ನೀಡಿವೆಯೆಂದು ಹೇಳಲಾಗುತ್ತಿದೆಯೋ, ಅದೇ ಜಾತಿ, ಧರ್ಮ ಮತ್ತು ದೇವರುಗಳಿಂದ ತಾವು ನಿರ್ಗತಿಕರಾಗಿ ಬಾಳುತ್ತಿರುವ ಸಾಮಾಜಿಕ ವಾಸ್ತವದ ಅರಿವಾಯಿತು. ಉಳ್ಳವರು

ಮಾಡುತ್ತಿರುವ ಶೋಷಣೆಗೆ ಹತಾರಗಳಾಗಿ, ತಮ್ಮ ಬದುಕಿನ ದುರಂತಗಳಿಗೆ ಕಾರಣವಾಗಿರುವ ಈ ಮೂರು ಶಕ್ತಿಗಳ ವಿರುದ್ಧ ದುಡಿಯುವ ವರ್ಗದ ಜನರು ಒಗ್ಗೂಡಿ ಹೋರಾಡಲು ಅಣಿಯಾದಾಗ ನಡೆದ ಆಂದೋಲನದ ಸಂದರ್ಭದಲ್ಲಿ ಹೊರಹೊಮ್ಮಿದ ವಿಚಾರ ಸರಣಿಯೇ ವಚನಗಳ ರಚನೆಗೆ ಕಾರಣವಾಗಿದೆ.

ವಚನಗಳನ್ನು **'ಸೂಳ್ನುಡಿ'** ಎಂದು ಕರೆಯುತ್ತಾರೆ. **ಸೂಳ್** ಮತ್ತು **ನುಡಿ** ಎಂಬ ಎರಡು ಪದಗಳು ಸೇರಿ **'ಸೂಳ್ನುಡಿ'** ಎಂದಾಗಿದೆ. **'ಸೂಳ್'** ಎಂದರೆ ಸರದಿ, ವ್ಯಕ್ತಿಯ ಪಾಲಿಗೆ ದೊರೆತ ಅವಕಾಶ. ನುಡಿ ಎಂದರೆ ಮಾತು, ಸೊಲ್ಲು. ಸರದಿಯ ಪ್ರಕಾರ ಆಡಿದ ಮಾತಿಗೆ ಸೂಳ್ನುಡಿ ಎಂದು ಹೆಸರು. ಶಿವಶರಣಶರಣೆಯರು ಸಾಮಾಜಿಕ ಆಂದೋಲನದ ಸಂದರ್ಭದಲ್ಲಿ ತಮ್ಮ ವ್ಯಕ್ತಿಗತವಾದ ನಡೆನುಡಿಗಳನ್ನು ಒರೆಹಚ್ಚಿ ನೋಡಿಕೊಳ್ಳುವಾಗ ಮತ್ತು ಸಮಾಜದ ಅರೆಕೊರೆಗಳನ್ನು ಕುರಿತು ಒಬ್ಬರು ಮತ್ತೊಬ್ಬರೊಡನೆ ಚರ್ಚಿಸುವಾಗ ಆಡಿದ ನುಡಿಗಳೇ ವಚನಗಳಾಗಿ ರೂಪುಗೊಂಡಿರಬಹುದು ಎಂಬುದನ್ನು **ಸೂಳ್ನುಡಿ** ಎಂಬ ಪದ ಸೂಚಿಸುತ್ತದೆ.

೧೯೪೮ರಲ್ಲಿ **"ಮಹಾರಾಷ್ಟ್ರದ ಸಂತರ ಚಾರಿತ್ರಿಕ ಕಾರ್ಯ"** ಎಂಬ ಹೊತ್ತಿಗೆಯನ್ನು ಬಾ.ರಂ.ಸುಂಠಣಕರ್ ಎಂಬುವರು ರಚಿಸಿದ್ದರು. ಅದನ್ನು **"ಸಂತ ಚಳವಳಿ"** ಎಂಬ ಹೆಸರಿನಲ್ಲಿ ಚಂದ್ರಕಾಂತ ಪೋಕಳೆ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಹೊತ್ತಿಗೆಯಲ್ಲಿ ಬಾ.ರಂ.ಸುಂಠಣಕರ್ ಅವರು ೧೩ ರಿಂದ ೧೭ನೆಯ ಶತಮಾನದ ಅವಧಿಯ ಮಹಾರಾಷ್ಟ್ರದಲ್ಲಿ ಜ್ಞಾನದೇವನಿಂದ ತುಕಾರಾಮನವರೆಗೆ ಸಂತರ ಪರಂಪರೆಯಲ್ಲಿ ನಡೆದ ಸಂತರ ಚಳವಳಿಯ ಆಗುಹೋಗುಗಳನ್ನು ಕುರಿತು ಈ ರೀತಿ ವಿಶ್ಲೇಷಣೆ ಮಾಡಿದ್ದಾರೆ.

"ಜನಸಾಮಾನ್ಯರು ಸಂತರನ್ನು ಕೇವಲ ಭಕ್ತಿಯ ದೃಷ್ಟಿಯಿಂದ ನೋಡುತ್ತಾರೆ. ಸಂತರು ಐತಿಹಾಸಿಕ ಕಾರ್ಯ ಮಾಡಿದ್ದಾರೆ ಎಂಬ ಕಲ್ಪನೆಯೂ ಅವರ ಮನವನ್ನು ಸ್ಪರ್ಶಿಸುವುದಿಲ್ಲ. ತಮ್ಮನ್ನು ಕ್ರಾಂತಿಕಾರಿ ಎಂದು ಭಾವಿಸುವ ಕೆಲ ಲೇಖಕರು ಸಂತರನ್ನು ಪ್ರತಿಕ್ರಾಂತಿಕಾರಕರೆಂದು ಹಣೆಪಟ್ಟಿ ಕಟ್ಟಿ ಮುಕ್ತರಾಗುತ್ತಾರೆ. ಸಮಾಜಶಾಸ್ತ್ರದ ದೃಷ್ಟಿಯಿಂದ ಸಂತರು ತಮ್ಮ ಕಾಲದಲ್ಲಿ ಯಾವ ಕಾರ್ಯವನ್ನು ಕೈಗೊಂಡರು, ಯಾವ ಸ್ಥಿತ್ಯಂತರವನ್ನು ತಂದರು ಎಂಬ ವಿವೇಚನೆ ಈವರೆಗೂ ಆಗಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಸಂತರ ಕಾರ್ಯದ ಬಗೆಗೆ ಯೋಚಿಸುವಾಗ ಸಂತರು ಯಾವ ಕಾಲದಲ್ಲಿ ಬಾಳಿ ಬದುಕಿದರೋ, ಆಗ ಅವರು ವ್ಯವಹರಿಸಿದ ಸಮಾಜದ ಅವಸ್ಥೆ ಹೇಗಿತ್ತು, ಆ ಸಮಾಜದ ಅಗತ್ಯವೇನಿತ್ತು, ಆ ಅಗತ್ಯವನ್ನು ಪೂರೈಸಲು ಸಂತರು ನೀಡಿದ ಪಾಲೇನು, ಅದರಿಂದ ಸಮಾಜದ ಮೇಲಾದ ಪರಿಣಾಮವೇನು, ಚರಿತ್ರೆಯ ಪ್ರವಾಹವನ್ನು ಅವರಿಂದ ಬದಲಾಯಿಸುವುದು ಸಾಧ್ಯವಾಯಿತೇ ಇಲ್ಲವೇ - ಮುಂತಾದ ವಿಷಯಗಳ ಬಗೆಗೆ ಪ್ರಮುಖವಾಗಿ ಯೋಚಿಸುವಂತಾಗಬೇಕು. ಅಂದರೆ ಸಂತರ ಕಾಲದ ಐತಿಹಾಸಿಕ

ಕ್ರಮ, ಆ ಕ್ರಮವನ್ನು ಅನುಸರಿಸಿ ಸಂತರು ಮಾಡಿದ ಸಾಮಾಜಿಕ ಕಾರ್ಯದ ಬಗೆಗೆ ವಿವೇಚನೆಯಾಗಬೇಕು."

ಈ ಹೊತ್ತಿಗೆಯಲ್ಲಿ ಬಾ.ರಂ.ಸುಂಠಣಕರ್ ಹೇಳಿರುವ ಈ ಮೇಲ್ಕಂಡ ನುಡಿಗಳು ಹನ್ನೆರಡನೆಯ ಶತಮಾನದ ಶಿವಶರಣಶರಣೆಯರ ಚಳವಳಿಯನ್ನು ತಿಳಿದುಕೊಳ್ಳುವುದಕ್ಕೆ ನೆರವಾಗುತ್ತವೆ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಒಡನಾಡಿಗಳಾಗಿದ್ದ ಶಿವಶರಣಶರಣೆಯರ ಹೆಸರುಗಳ ಜತೆಜತೆಯಲ್ಲಿಯೇ ಅವರ ಮಾಡುತ್ತಿದ್ದ ಕಸುಬು ಇಲ್ಲವೇ ಜಾತಿ ಸೂಚಕ ಸಂಗತಿಗಳು ಸೇರಿಕೊಂಡಿವೆ. ಅಂಬಿಗರ ಚೌಡಯ್ಯ, ಒಕ್ಕಲಿಗ ಮುದ್ದಣ್ಣ, ಕನ್ನಡಿ ಕಾಯಕದ ಅಮ್ಮಿದೇವ, ಎಲೆಗಾರ ಕಾಮಣ್ಣ, ಮಡಿವಾಳ ಮಾಚಿದೇವ, ಮೇದರ ಕೇತಯ್ಯ, ಜೇಡರ ದಾಸಿಮಯ್ಯ, ಕದಿರ ರೆಮ್ಮವ್ವೆ, ಕೊಟ್ಟಣದ ಸೋಮಮ್ಮ, ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ಬಾಚಿಕಾಯಕದ ಬಸವಣ್ಣ, ಹಡಪದ ಅಪ್ಪಣ್ಣ ಮುಂತಾದ ನೂರಾರು ಮಂದಿ ಶಿವಶರಣಶರಣೆಯರೆಲ್ಲರೂ ಜನಸಮುದಾಯದ ಬದುಕಿಗೆ ಅಗತ್ಯವಾದುದೆಲ್ಲವನ್ನೂ ಉತ್ಪಾದನೆಯ ಮಾಡುವ ಮತ್ತು ಒದಗಿಸುವ ಹಂತದಲ್ಲಿ ದುಡಿಯುತ್ತಿರುವ ವ್ಯಕ್ತಿಗಳಾಗಿದ್ದಾರೆ. ಸಾಮಾಜಿಕ ವ್ಯವಸ್ಥೆಯಲ್ಲಿ ಇವರೆಲ್ಲರೂ ಕೆಳಜಾತಿ ಮತ್ತು ಕೆಳವರ್ಗಕ್ಕೆ ಸೇರಿದವರಾಗಿದ್ದಾರೆ. ಜಾತಿ ಎಂಬುದು ಇವರೆಲ್ಲರ ಪಾಲಿಗೆ ಅಧಿಕಾರ ಮತ್ತು ಸಂಪತ್ತನ್ನು ಪಡೆದು ಸಾಮಾಜಿಕವಾಗಿ ಒಳ್ಳೆಯ ಸ್ಥಾನಮಾನಗಳನ್ನು ಪಡೆಯದಂತೆ ತಡೆಗಟ್ಟಿರುವ ಸಾಧನವಾಗಿದೆ. ಕೆಳಜಾತಿ ಎಂಬುದು ಬಡತನಕ್ಕೆ ಕಾರಣವಾಗಿರುವಂತೆಯೇ ಅಪಮಾನದ ಬದುಕಿಗೂ ಕಾರಣವಾಗಿದೆ.

ಇಂತಹ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ಅಂದರೆ ಜೇಡರ ದಾಸಿಮಯ್ಯನ ಕಾಲದಲ್ಲಿಯೇ ಪ್ರಾರಂಭವಾಗಿದ್ದ ಭಕ್ತಿ ಚಳುವಳಿಯು ಇಷ್ಟಲಿಂಗವನ್ನು ಕೊರಳಲ್ಲಿ ಕಟ್ಟಿಕೊಂಡು ಶಿವಭಕ್ತರಾದವರೆಲ್ಲರೂ, ಅವರು ಬ್ರಾಹ್ಮಣನಾಗಿರಲಿ ಇಲ್ಲವೇ ಪಂಚಮನಾಗಿರಲಿ ಅವರೆಲ್ಲಾ 'ಒಂದೇ ಕುಲಜರು' ಎಂಬ ಘೋಷಣೆಯೊಡನೆ ಜಾತಿ ವ್ಯವಸ್ಥೆಯ ವಿರುದ್ಧ ಸಮರವನ್ನು ಸಾರಿತ್ತು. ಜಾತಿ ವಿರುದ್ಧದ ಹೋರಾಟವು "ವ್ಯಕ್ತಿಯ ಮನದಲ್ಲಿ ಬೇರುಬಿಟ್ಟಿರುವ ಜಾತಿಯ ಬಗೆಗಿನ ಮೇಲರಿಮೆ ಇಲ್ಲವೇ ಕೀಳರಿಮೆಯ ಭಾವನೆಯನ್ನು ಕಿತ್ತೊಗೆದು, ಮನುಷ್ಯರಾದ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಬಿತ್ತುವುದಕ್ಕೆ ನೆರವಾಯಿತು."

ವಚನಗಳಲ್ಲಿ **'ಭಕ್ತ'** ಮತ್ತು **'ಭವಿ'** ಎಂಬ ಪದಗಳು ಮತ್ತೆ ಮತ್ತೆ ಬಳಕೆಯಾಗುತ್ತವೆ. ಭಕ್ತ ಎಂದರೆ **"ಜಾತಿ ವ್ಯವಸ್ಥೆಯಿಂದ ಹೊರಬಂದು, ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸುವಂತೆಯೇ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಬಯಸುವವನು."**

ಭವಿ ಎಂದರೆ **"ಮೇಲು ಕೀಳಿನ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡು, ಮಾನವ ಬದುಕಿನ ಆಗುಹೋಗುಗಳಿಗೆ ಕರ್ಮಸಿದ್ಧಾಂತ ಮತ್ತು ಹಿಂದಿನ ಜನ್ಮದ ಪಾಪಪುಣ್ಯಗಳೇ**

ಕಾರಣವೆಂದು ನಂಬಿಕೊಂಡಿರುವ ವ್ಯಕ್ತಿ." ಆದ್ದರಿಂದಲೇ ಒಮ್ಮೆ ಜಾತಿಯ ಬಂಧನದಿಂದ ಹೊರಬಂದು ಭಕ್ತನಾದ ವ್ಯಕ್ತಿಯು ಮತ್ತೆ ಯಾವುದೇ ಕಾರಣದಿಂದಲೂ ಭವಿಯ ಜತೆಯಲ್ಲಿ ನಂಟನ್ನು ಹೊಂದಬಾರದೆಂಬ ನಿಯಮವನ್ನು ವಚನಕಾರರು ವಿಧಿಸಿದ್ದಾರೆ.

ಎಲ್ಲಾ ವಚನಕಾರರು ಗುಡಿಗೋಪುರಗಳಲ್ಲಿ ಪ್ರತಿಷ್ಠಾಪನೆಗೊಂಡಿರುವ ಸ್ಥಾವರಲಿಂಗದ ಪೂಜೆಯನ್ನು ವಿರೋಧಿಸುತ್ತಾರೆ. ಶಿವನನ್ನು ದೇವರನ್ನಾಗಿ ಒಪ್ಪಿಕೊಂಡಿರುವ ಶಿವಶರಣಶರಣೆಯರು ದೇಗುಲವನ್ನು ನಿರಾಕರಿಸುವುದಕ್ಕೆ ಅನೇಕ ಕಾರಣಗಳಿವೆ.

ವಿಗ್ರಹ ರೂಪದಲ್ಲಿ ಕಡೆದಿರುವ ದೇವರನ್ನು ದೇಗುಲದ ಒಳಗುಡಿಯಲ್ಲಿ ನೆಲೆಗೊಳಿಸುತ್ತಿದ್ದಂತೆಯೇ, ವಿಗ್ರಹದ ಹತ್ತಿರಕ್ಕೆ ಹೋಗಿ ಪೂಜಿಸಲು ಪೂಜಾರಿಯು ಮಾತ್ರ ತಕ್ಕವನಾಗುತ್ತಾನೆ. ಇನ್ನುಳಿದವರು ಒಳಗುಡಿಯಿಂದ ಹೊರನಿಲ್ಲಬೇಕಾಗುತ್ತದೆ. ಇಲ್ಲಿಂದಲೇ ಮಾನವರಲ್ಲಿ ಮೇಲು ಕೀಳಿನ ವಿಂಗಡಣೆಯು ಮೊದಲಾಗುತ್ತದೆ. ಮೇಲು ಕೀಳಿನ ಜಾತಿ ಮೆಟ್ಟಿಲುಗಳಿಂದ ಕೂಡಿರುವ ನಮ್ಮ ಸಮಾಜದ ಜಾತಿರಚನೆಯ ಕಟ್ಟುಪಾಡುಗಳನ್ನು ದೇಗುಲದಲ್ಲಿ ನಡೆಯುವ ಆಚರಣೆಗಳು ಮುಂದುವರಿಸಿಕೊಂಡು ಬರುತ್ತಿವೆ.

ಮೇಲು ಜಾತಿಯವರಿಗೆ ಮತ್ತು ಮೇಲು ವರ್ಗದವರಿಗೆ ಅಂದರೆ ಸಿರಿವಂತರಿಗೆ ಹಾಗೂ ದೊಡ್ಡ ದೊಡ್ಡ ಗದ್ದುಗೆಯಲ್ಲಿರುವವರಿಗೆ ಮೊದಲ ಮನ್ನಣೆಯನ್ನು ನೀಡುವ ದೇಗುಲದ ಆಚರಣೆಗಳು, ಕೆಳಜಾತಿ ಮತ್ತು ಕೆಳವರ್ಗದ ಅಂದರೆ ಹಣವಿಲ್ಲದ, ಸಂಪತ್ತಿಲ್ಲದ, ಅಧಿಕಾರವಿಲ್ಲದ ಜನಸಮುದಾಯವನ್ನು ಕಡೆಗಣಿಸಿವೆ. ಈ ರೀತಿ ಮೇಲು ಕೀಳಿನ ತರತಮವು ಮುಂದುವರಿದುಕೊಂಡು ಹೋಗಲು ಕಾರಣವಾಗಿರುವ ಮತ್ತು ನೆರವಾಗುತ್ತಿರುವ ದೇಗುಲದ ನೆಲೆಯಿಂದ ಶಿವಶರಣಶರಣೆಯರು ದೂರಸರಿದಿದ್ದಾರೆ.

ಶಿವಶರಣಶರಣೆಯರು ತಮ್ಮ ಅಂಗೈ ಮೇಲಿಟ್ಟುಕೊಂಡು ಪೂಜಿಸುತ್ತಿದ್ದ ಇಷ್ಟಲಿಂಗ ಇಲ್ಲವೇ ತಮ್ಮ ಕೊರಳಲ್ಲಿ ಕಟ್ಟಿಕೊಂಡಿದ್ದ ಶಿವಲಿಂಗ ಅವರ ಪಾಲಿಗೆ ಸಾಂಕೇತಿಕ ದೇವರು ಮಾತ್ರವಾಗಿತ್ತು. ನಿಜಜೀವನದಲ್ಲಿ ಅವರ ಪಾಲಿನ ದೇವರು ಕಲ್ಲು, ಮಣ್ಣು, ಲೋಹ, ಮರದಿಂದ ಮಾಡಿದ ಮೂರ್ತಿಯಾಗಿರಲಿಲ್ಲ. ಜನಸಮುದಾಯಕ್ಕೆ ಒಳಿತನ್ನು ಉಂಟುಮಾಡುವ ನಡೆನುಡಿಗಳನ್ನು ತಮ್ಮ ದೇವರೆಂದು ನಂಬಿದ್ದರು. ಆದ್ದರಿಂದಲೇ **ಶಿವಭಕ್ತರಾದವರಲ್ಲಿ ಒಳ್ಳೆಯ ನಡೆನುಡಿಗಳು ಕಡ್ಡಾಯವಾಗಿ ಇರಲೇಬೇಕು** ಎಂಬ ಮಾನದಂಡವನ್ನು ಹಾಕಿಕೊಂಡಿದ್ದರು. ಒಳ್ಳೆಯ ನಡೆನುಡಿಗಳು ಎಂದರೆ "**ವ್ಯಕ್ತಿಯು ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ನಡೆನುಡಿಗಳನ್ನು ಹೊಂದಿರುವುದು.**" ಇಷ್ಟಲಿಂಗದ ಪೂಜೆಯು ಅವರ ಪಾಲಿಗೆ ಮೈ ಮನದಲ್ಲಿ ನಿರಂತರವಾಗಿ ಮೂಡುತ್ತಿರುವ

ಒಳ್ಳೆಯ ಮತ್ತು ಕೆಟ್ಟ ಭಾವನೆಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು ಸಾಮಾಜಿಕವಾಗಿ ಒಳ್ಳೆಯ ನಡೆನುಡಿಗಳಿಂದ ಬಾಳಲು ಅಗತ್ಯವಾದ ಅರಿವನ್ನು ನೀಡುವುದರ ಸಂಕೇತವಾಗಿತ್ತು.

ಉಳ್ಳವರು, ಮೇಲುಜಾತಿಯವರು ಮತ್ತು ಅಕ್ಷರವಂತರು ದೇವರ ಹೆಸರಿನಲ್ಲಿ ದುಡಿಯುವ ಬಡಜನರ ಮನದಲ್ಲಿ ತಲೆತಲಾಂತರಗಳಿಂದ ಕೀಳರಿಮೆ ಮತ್ತು ತಪ್ಪು ತಿಳುವಳಿಕೆಯನ್ನು ನಾಟಿಸಿದ್ದರು. ಅದೇನೆಂದರೆ ಬಡವರಾಗಿರುವ ಜನರ ಸಂಕಟಗಳಿಗೆ ಅವರು ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪ ಪುಣ್ಯಗಳೇ ಕಾರಣವೆಂಬ ನಂಬಿಕೆಯನ್ನು ದೇವರು ಮತ್ತು ಧರ್ಮದ ಹೆಸರಿನಲ್ಲಿ, ಕಲೆ, ಸಾಹಿತ್ಯ, ಸಂಗೀತಗಳ ಮೂಲಕ ಜನಮನದಲ್ಲಿ ಬಿತ್ತಿದ್ದರು. ವಚನಕಾರರು ಜನಮನದಲ್ಲಿ ಬೇರೂರಿದ್ದ ಇಂತಹ ಕೀಳರಿಮೆಯನ್ನು ಮತ್ತು ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿ, ಒಳ್ಳೆಯ ನಡೆನುಡಿ ಮತ್ತು ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವುದರ ಮೂಲಕ ವ್ಯಕ್ತಿಯು ತನ್ನ ಒಳಿತಿನ ಜತೆಜತೆಗೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬಹುದೆಂಬುದನ್ನು ಮನಗಾಣಿಸಿದರು.

ಜನರ ಆಸೆಗಳನ್ನು ಈಡೇರಿಸುವ ಜಡವಸ್ತುವನ್ನಾಗಿ ದೇವರನ್ನು ಕಾಣದೆ, ಜನರಿಗೆ ಸತ್ಯ, ನೀತಿ, ನ್ಯಾಯದಿಂದ ಬಾಳಲು ಅಗತ್ಯವಾದ ಅರಿವನ್ನು ನೀಡುವ ಚೇತನವನ್ನಾಗಿ ಶಿವಶರಣಶರಣೆಯರು ದೇವರನ್ನು ಕಂಡರು. ಕಲ್ಲುಚಪ್ಪಡಿಗಳ ತಳಹದಿಯ ಮೇಲೆ ಕಟ್ಟಿರುವ ದೇಗುಲದ ಬದಲು, ಒಳ್ಳೆಯ ನಡೆನುಡಿಗಳಿಂದ ಕೂಡಿದ ಸಾಮಾಜಿಕ ವ್ಯಕ್ತಿತ್ವದ ತಳಹದಿಯ ಮೇಲೆ ದೇವರನ್ನು ನೆಲೆಗೊಳಿಸಿದರು.

ಶಿವಶರಣಶರಣೆಯರು ವೇದ, ಪುರಾಣ, ಶಾಸ್ತ್ರ ಮತ್ತು ತರ್ಕದ ವಿಚಾರಗಳ ಬಗ್ಗೆ ತೀವ್ರವಾದ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕಾರಣವೇನೆಂದರೆ ಋಗ್ವೇದದ ಪುರುಷ ಸೂಕ್ತದಲ್ಲಿ ಉಲ್ಲೇಖಿಸಿರುವ “ಭಗವಂತನ ಮುಖದಿಂದ ಬ್ರಾಹ್ಮಣರು, ತೋಳುಗಳಿಂದ ಕ್ಷತ್ರಿಯರು, ತೊಡೆಗಳಿಂದ ವೈಶ್ಯರು ಮತ್ತು ಪಾದಗಳಿಂದ ಶೂದ್ರರು ಹುಟ್ಟಿದರು. ಅಧ್ಯಯನ ಮತ್ತು ಅಧ್ಯಾಪನಕ್ಕೆ ಬ್ರಾಹ್ಮಣರು, ನಾಡನ್ನಾಳುವುದಕ್ಕೆ ಕ್ಷತ್ರಿಯರು, ವ್ಯಾಪಾರ ಮತ್ತು ವ್ಯವಸಾಯಕ್ಕೆ ವೈಶ್ಯರು ಮತ್ತು ಈ ಮೂರು ಮಂದಿಯ ಸೇವೆಯನ್ನು ಮಾಡುವುದಕ್ಕೆ ಶೂದ್ರರು ಅರ್ಹರಾಗಿದ್ದಾರೆ. ವಿದ್ಯೆ, ಅಧಿಕಾರ ಮತ್ತು ಸಂಪತ್ತನ್ನು ಪಡೆಯುವುದಕ್ಕೆ ಶೂದ್ರರು ಯೋಗ್ಯರಲ್ಲ” ಎಂಬ ವರ್ಣ ವ್ಯವಸ್ಥೆಯನ್ನು ದೃಢಗೊಳಿಸಿರುವ ಮಾತುಗಳನ್ನು ಶಿವಶರಣಶರಣೆಯರು ತಿರಸ್ಕರಿಸಿದರು. ವೇದಗಳಲ್ಲಿ ಹೇಳಿರುವ ಯಜ್ಞಯಾಗಾದಿಗಳ ಆಚರಣೆಯಿಂದ ಯಾವುದೇ ಬಗೆಯ ಒಳಿತಾಗುವುದಿಲ್ಲವೆಂಬ ನಿಲುವು ವಚನಕಾರರಲ್ಲಿತ್ತು. ಪೂಜೆ, ತಪಸ್ಸು, ಉಪವಾಸ, ಯಜ್ಞದಲ್ಲಿ ನೀಡುವ ಬಲಿ ಮುಂತಾದ ಆಚರಣೆಗಳಿಗಿಂತ ವ್ಯಕ್ತಿಯು ತನ್ನ ಒಳಿತಿನ ಜತೆಗೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳೇ ದೊಡ್ಡದೆಂಬ ಅರಿವನ್ನು ಶಿವಶರಣಶರಣೆಯರು ಪ್ರತಿಪಾದಿಸಿದ್ದರು.

ದೇವ ದೇವಿಯರ ಅವತಾರಗಳನ್ನು ಮತ್ತು ಪವಾಡಗಳನ್ನು ಬಣ್ಣಿಸುವ ನೆಪದಲ್ಲಿ ಪುರಾಣದಲ್ಲಿನ ಸಂಗತಿಗಳು ಜಾತಿ ವ್ಯವಸ್ಥೆ, ಕರ್ಮಸಿದ್ಧಾಂತ ಮತ್ತು ಪುನರ್ ಜನ್ಮದ ಭಾವನೆಗಳನ್ನು ಜನಮನದಲ್ಲಿ ಬಿತ್ತುತ್ತಾ, ಜನರನ್ನು ಮಾನಸಿಕವಾಗಿ ಗುಲಾಮರನ್ನಾಗಿ ಮಾಡುತ್ತಿದ್ದವು.

ಯಜ್ಞಯಾಗಾದಿಗಳನ್ನು ಮಾಡುವಾಗ ಮತ್ತು ದೇವತೆಗಳ ಪೂಜೆಯ ಸಂದರ್ಭಗಳಲ್ಲಿ ಪಾಲಿಸಬೇಕಾದ ಆಚರಣೆಗಳನ್ನು ಶಾಸ್ತ್ರದಲ್ಲಿನ ನಿಯಮಗಳು ಕಡ್ಡಾಯಗೊಳಿಸುತ್ತಿದ್ದವು.

ಮಾತಿನ ಮೋಡಿಯಿಂದ ವೇದ, ಪುರಾಣ, ಶಾಸ್ತ್ರಗಳಲ್ಲಿನ ಸಂಗತಿಗಳನ್ನೇ ತರ್ಕದಲ್ಲಿನ ನುಡಿಗಳು ಸತ್ಯವೆಂದು ಸಾರುತ್ತ, ಜನರು ತಮ್ಮ ಪಾಲಿನ ಬಡತನವನ್ನು, ಸಂಕಟವನ್ನು ಮತ್ತು ಅಪಮಾನವನ್ನು ಮರುಮಾತಿಲ್ಲದೆ ಒಪ್ಪಿಕೊಂಡು ಬಾಳುವಂತೆ ಮಾಡಿದ್ದವು. ಸಾಮಾನ್ಯರ ಬದುಕು ಆರ್ಥಿಕವಾಗಿ ಬದಲಾವಣೆಗೊಳ್ಳದೆ, ಜಾತಿವ್ಯವಸ್ಥೆಯಲ್ಲಿನ ಮೇಲರಿಮೆ ಮತ್ತು ಕೀಳರಿಮೆಯನ್ನು ತೊರೆಯದೆ ಯಥಾವತ್ತಾಗಿ ಮುಂದುವರಿಯುವಂತೆ ಮಾಡುವಲ್ಲಿ ವೇದ, ಪುರಾಣ, ಶಾಸ್ತ್ರ ಮತ್ತು ತರ್ಕದ ವಿಚಾರಗಳು ಬಹು ದೊಡ್ಡ ಪ್ರಭಾವ ಮತ್ತು ಪರಿಣಾಮವನ್ನು ಉಂಟುಮಾಡುತ್ತಿದ್ದ ಕಾರಣದಿಂದಾಗಿ ಇವುಗಳನ್ನು ಶಿವಶರಣಶರಣೆಯರು ನಿರಾಕರಿಸಿ, ವ್ಯಕ್ತಿಯು ಒಳ್ಳೆಯ ನಡೆನುಡಿ ಮತ್ತು ಪ್ರಾಮಾಣಿಕತನದಿಂದ ದುಡಿಮೆಯನ್ನು ಮಾಡುವುದರ ಮೂಲಕ ತನ್ನ ಮತ್ತು ಸಮಾಜದ ಬದುಕನ್ನು ಉತ್ತಮಗೊಳಿಸಿಕೊಳ್ಳಬೇಕು ಎಂಬ ಅರಿವನ್ನು ಜನಮನದಲ್ಲಿ ಮೂಡಿಸಿದರು.

ಒಳ್ಳೆಯ ಕಾಯಕದ ಮೂಲಕ ವ್ಯಕ್ತಿಯು ಹಣವನ್ನು ಸಂಪಾದಿಸಿ, ಅದರಿಂದ ತನ್ನ ಮತ್ತು ತನ್ನ ಕುಟುಂಬದ ಹಿತವನ್ನು ಕಾಯ್ದುಕೊಳ್ಳುವಂತೆಯೇ, ಗುರು ಲಿಂಗ ಜಂಗಮದ ಸೇವೆಯಲ್ಲಿ ತೊಡಗುವುದು ಪ್ರತಿಯೊಬ್ಬ ಶಿವಭಕ್ತನ ಜೀವನದ ಗುರಿಯಾಗಿರಬೇಕೆಂದು ಬಯಸಿದ್ದರು.

ಉನ್ನತವಾದ ಗದ್ದುಗೆಗಳಲ್ಲಿ ಕುಳಿತು ಸಮಾಜಕ್ಕೆ ಒಳಿತನ್ನು ಮಾಡಬೇಕಾದ ವ್ಯಕ್ತಿಗಳ ಡಾಂಬಿಕತನವನ್ನು ಕುರಿತು ತೀವ್ರವಾದ ವಿರೋಧವನ್ನು ಶಿವಶರಣಶರಣೆಯರು ವ್ಯಕ್ತಪಡಿಸಿದ್ದಾರೆ. ಒಳ್ಳೆಯ ನುಡಿಯಂತೆಯೇ ವ್ಯಕ್ತಿಯ ನಡೆಯು ಅಂದರೆ ಮಾಡುವ ಕೆಲಸವೂ ಒಳ್ಳೆಯ ಉದ್ದೇಶದಿಂದ ಕೂಡಿರಬೇಕು. ಒಳ್ಳೆಯ ನಡೆನುಡಿಗಳು ಒಂದಾದಾಗ ಮಾತ್ರ ಸಮಾಜ ಉಳಿಯುತ್ತದೆ, ಬೆಳೆಯುತ್ತದೆ ಮತ್ತು ಬಾಳುತ್ತದೆ ಎಂಬ ನಿಲುವನ್ನು ವಚನಕಾರರು ಹೊಂದಿದ್ದರು.

ಹನ್ನೆರಡನೆಯ ಶತಮಾನದ ಶಿವಶರಣಶರಣೆಯರ ನಡೆನುಡಿಯು ಮೇಲು ನೋಟಕ್ಕೆ ಭಕ್ತಿ ಚಳುವಳಿಯಂತೆ ಕಂಡುಬಂದರೂ, ಅದರ ಒಡಲಾಳದಲ್ಲಿ

ಜನಸಮುದಾಯದ ಬಡತನ, ಅಜ್ಞಾನ ಮತ್ತು ನೋವಿಗೆ ಕಾರಣವಾಗಿದ್ದ ಸಂಗತಿಗಳನ್ನು ಗುರುತಿಸಿ, ಅವುಗಳನ್ನು ತೊಲಗಿಸಿ, ಜನರ ಬದುಕನ್ನು ಹಸನುಗೊಳಿಸಲು ಪ್ರಯತ್ನಿಸಿದ ಜನಪರ ಆಂದೋಲನವಾಗಿದೆ. ಜಪ ತಪ ವ್ರತ ನೇಮಗಳ ಬದಲಾಗಿ ದೇವರನ್ನು ಒಳ್ಳೆಯ ನಡೆನುಡಿಗಳ ಮೂಲಕ ಒಲಿಸಿಕೊಳ್ಳಬೇಕೆಂಬ ನಿಲುವನ್ನು ವ್ಯಕ್ತಪಡಿಸುವುದರ ಜತೆಗೆ, ವ್ಯಕ್ತಿಯು ಸಾಮಾಜಿಕ ವ್ಯವಹಾರದ ನಡೆನುಡಿಗಳಿಗೆ ತನ್ನ ಮನಸ್ಸನ್ನೇ ಒಂದು ಸಾಕ್ಷಿಯಾಗಿ ಇಟ್ಟುಕೊಳ್ಳಬೇಕೆಂಬ ಕರೆಯನ್ನು ನೀಡಿದ್ದಾರೆ. "ವಚನಕಾರರು ತಮ್ಮ ಎಲ್ಲಾ ಮಾತುಗಳನ್ನು ಅಂತರಂಗದ ಸಾಕ್ಷಿಯಲ್ಲಿ ಅಥವಾ ಇಷ್ಟದೈವದ ಹಾಜರಿಯಲ್ಲಿ ಹೇಳುತ್ತಾರೆ." (ಕೆ.ವಿ.ನಾರಾಯಣ. ವಚನ ಚಳುವಳಿ : ಟಿಪ್ಪಣಿಗಳು).

ವಚನಕಾರರು ಬಳಸಿರುವ ಕನ್ನಡ ನುಡಿರಚನೆಯು ಇತ್ತ ಛಂದೋಬದ್ಧವಾದ ಪದ್ಯವೂ ಅಲ್ಲದ, ಅತ್ತ ಛಂದೋರಹಿತವಾದ ಗದ್ಯವೂ ಅಲ್ಲದ, ಜನಮನವನ್ನು ತನ್ನತ್ತ ಸೆಳೆಯುವಂತಹ ಶೈಲಿಯಿಂದ ಕೂಡಿದೆ. ಜನಪದರ ಆಡುನುಡಿಯು ವಚನಗಳಲ್ಲಿ ಬಳಕೆಯಾಗಿರುವುದರಿಂದ ರೂಪಕದ ನುಡಿಗಟ್ಟುಗಳು ಹೆಚ್ಚಾಗಿ ಕಂಡುಬರುತ್ತವೆ.

ಶಿವಶರಣಶರಣೆಯರಲ್ಲಿ ಬಹುತೇಕ ಮಂದಿ ತಾವು ರಚಿಸಿದ ವಚನಗಳಲ್ಲಿ ಶಿವನ ಹೆಸರನ್ನು ಅಂಕಿತನಾಮವನ್ನಾಗಿ ಬಳಸಿದ್ದಾರೆ. ವಚನಕಾರರು ಹುಟ್ಟಿ ಬೆಳೆದ ಇಲ್ಲವೇ ಬೇರೊಂದು ಊರಿಗೆ ಹೋಗಿ ನೆಲೆಸಿದ ತಾಣದಲ್ಲಿ ಶಿವನಿಗೆ ಇದ್ದ ಹೆಸರುಗಳನ್ನು ಇಟ್ಟುಕೊಂಡಿದ್ದಾರೆ. ಆದಯ್ಯನ ವಚನದಲ್ಲಿ ಕಂಡುಬರುವ "ಸೌರಾಷ್ಟ್ರ ಸೋಮೇಶ್ವರ" ಎಂಬ ಅಂಕಿತನಾಮ ಆದಯ್ಯನು ಹುಟ್ಟಿದ ನಾಡಿನ ಹೆಸರನ್ನು ಒಳಗೊಂಡಿದೆ. ಅಂಬಿಗರ ಚೌಡಯ್ಯನು ತನ್ನ ಹೆಸರನ್ನೇ ಅಂಕಿತನಾಮವನ್ನಾಗಿ ಬಳಸಿದ್ದಾನೆ. ನಾಗಲಾಂಬಿಕೆಯು ತನ್ನ ಮೆಚ್ಚಿನ ದೇವರ ಜತೆಯಲ್ಲಿ ಬಸವಣ್ಣನವರನ್ನು ನೆನೆಯುತ್ತಾ "ಬಸವಣ್ಣಪ್ರಿಯ ಚೆನ್ನಸಂಗಯ್ಯ" ಎಂಬ ಅಂಕಿತನಾಮವನ್ನು ಬಳಸಿದ್ದಾಳೆ.

ಸಿ.ಪಿ. ನಾಗರಾಜ

ಪರಿವಿಡಿ

೧. **ಅಂಗಸೋಂಕಿನ ಲಿಂಗತಂದೆ** ... ೨೯

ಮರದೊಳಗಣ ಬೆಂಕಿ–೧

೨. **ಅಂಬಿಗರ ಚೌಡಯ್ಯ** ... ೩೦

ಅಯ್ಯಾ ಪಾಷಾಣಕ್ಕೆ ಗಿರಿ ಸವೆದವು–೨
ಅರಳೆಯ ಮರನು ವಿಷ್ಣುಕಾಂತಿ–೩
ಅರಿಯದ ಗುರು ಅರಿಯದ ಶಿಷ್ಯಂಗೆ–೪
ಆಳಾಪದ ಸೊಬಗು–೫
ಈಶ ಲಾಂಛನವ ತೊಟ್ಟು–೬
ಈಶ್ವರನ ಕಾಬುದೊಂದಾಸೆಯುಳ್ಳೊಡೆ–೭
ಉಂಡರೆ ಭೂತನೆಂಬರು–೮
ಓದಿಹೆನೆಂಬ ಒಡಲು–೯
ಕಂಥೆ ತೊಟ್ಟವ ಗುರುವಲ್ಲ–೧೦
ಕಟ್ಟಿದ ಲಿಂಗವ ಕಿರಿದು ಮಾಡಿ–೧೧
ಕಲ್ಲದೇವರ ಪೂಜೆಯ ಮಾಡಿ–೧೨
ಕುಲ ಹಲವಾದಡೇನು–೧೩
ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ–೧೪
ಕೇಳು ನೀನೆಲೊ ಮಾನವಾ–೧೫
ಗಾಳಿಯ ಹಡೆದಲ್ಲಿ ತೂರಿಕೊಳ್ಳಯ್ಯಾ–೧೬
ಜಾತಿ ಭ್ರಮೆ ನೀತಿ ಭ್ರಮೆ–೧೭
ದೇಹಾರವ ಮಾಡುವಣ್ಣಗಳಿರಾ–೧೮
ನೇಮಸ್ಥನೆಂಬವ ಕ್ರೂರಕರ್ಮಿ–೧೯
ಬರೆದು ಓದಿಸುವ ಆಕರಿಗಳೆಲ್ಲ–೨೦
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ–೨೧
ಮಾತುಗಂಟಿತನದಿಂದ ಎಷ್ಟು ಮಾತನಾಡಿದಡೇನು–೨೨
ವೇದದಲುಳ್ಳಡೆ ಪ್ರಾಣಿವಧೆಯಪ್ಪುದೆ–೨೩
ವೇದವನೋದಿದವರು ವಿಧಿಗೊಳಗಾದರಲ್ಲದೆ–೨೪
ಸಮಯವ ಮಾಡಿ–೨೫
ಸ್ವಲ್ಪ ಅಮೃತಾನ್ನವನೊಯ್ದು–೨೬
ಹೊಡವಡಲೇಕೆ ಹಿಡಿದು ಪೂಜಿಸಲೇಕೆ–೨೭

೩. **ಅಕ್ಕಮ್ಮ** ... ೩೯
ಅಕ್ಕಿ ಬೇಳೆ ಬೆಲ್ಲ ಉಪ್ಪು ಮೆಣಸು–೨೮
ಗುರುವಾದಡೂ ಆಚಾರ ಭ್ರಷ್ಟನಾದಡೆ–೨೯
ಚಿನ್ನ ಒಡೆದಡೆ ಕರಗಿದಡೆ ರೂಪಪ್ಪುದಲ್ಲದೆ–೩೦
ಬಸವಣ್ಣ ಚೆನ್ನಬಸವಣ್ಣ ಪ್ರಭು ವೀರಮಡಿವಳ–೩೧
ಮಾಡಿ ನೀಡುವ ಭಕ್ತನನರಸಿಕೊಂಡು ಹೋಗಿ–೩೨
ವ್ರತವನಾಶ್ರಿಯಿಸದ–೩೩
ವ್ರತವೆಂಬುದೇನು–೩೪
ಹೋತಿನ ಗಡ್ಡದಂತೆ ಗಡ್ಡದ ಹಿರಿಯರ ನೋಡಾ–೩೫
೪. **ಅಘವಣಿ ಹಂಪಯ್ಯ** ... ೪೩
ಹುಸಿಯ ನುಡಿಯನು ಭಕ್ತ–೩೬
೫. **ಅಜಗಣ್ಣತಂದೆ** ... ೪೪
ಗುರುಲಿಂಗದ ಕೃಪೆಯಿಂದ–೩೭
೬. **ಅಮುಗಿ ದೇವಯ್ಯ** ... ೪೫
ಕಕ್ಕಯ್ಯನ ಪ್ರಸಾದವ ಕೊಂಡೆನ್ನ–೩೮
ಜ್ಞಾನದಲರಿದಡೇನಯ್ಯ ಕ್ರೀಯನಾಚರಿಸದನ್ನಕ್ಕ–೩೯
ಶಿವನ ನೆನೆದಡೆ ಭವ ಹಿಂಗೂದೆಂಬ–೪೦
೭. **ಅಮುಗೆ ರಾಯಮ್ಮ** ... ೪೭
ಆಸೆಯುಳ್ಳವಂಗೆ ಮಾಟಕೂಟವಲ್ಲದೆ–೪೧
ಎನ್ನ ಕಣ್ಣೊಳಗಣ ಕಟ್ಟಿಗೆಯ–೪೨
ಒಡೆಯರ ಕಂಡಡೆ–೪೩
ಕನ್ನವಿಕ್ಕುವ ಕಳ್ಳನು–೪೪
ಕಾವಿ ಕಾಷಾಂಬರವ ಹೊದ್ದು–೪೫
ಮಂಡೆ ಬೋಳಾಗಿ ತುಂಡುಗಂಬಳಿ ಹೊದ್ದ ಬಳಿಕ–೪೬
ಶೀಲವಂತನಾದಡೆ ಜಾತಿಯ ಬಿಡಬೇಕು–೪೭
ಹೊನ್ನ ಬಿಟ್ಟಡೇನು ಹೆಣ್ಣ ಬಿಟ್ಟಡೇನು–೪೮
೮. **ಅರಿವಿನ ಮಾರಿತಂದೆ** ... ೫೦
ಕಲ್ಲು ಕಲ್ಲು ತಾಕಿದಲ್ಲಿ ಕಿಚ್ಚಿನ ಕಿಡಿಯಲ್ಲದೆ–೪೯
ಕ್ರೀಯಲ್ಲಿ ಕಾಬುದ ಕ್ರೀಯಲ್ಲಿ ಕಂಡು–೫೦
ಕೆಯಿ ಬೆಳೆವಲ್ಲಿ ಸದೆಗೆ ಮುನಿವರಲ್ಲದೆ–೫೧
ಭರಿತಾರ್ಪಣವೆಂಬುದು ಲಿಂಗಕ್ಕೊ ನಿನಗೊ–೫೨
ವಂದಿಸಿ ನಿಂದಿಸಬಾರದೆಂಬುದೆ–೫೩
ವೇಷದಲ್ಲಿ ತಿರುಗುವುದು ಸಮಯದ ಹಂಗು–೫೪
ಹರಿವ ಶಕಟಂಗೆ ಕಡೆಗೀಲು ಕಡೆಯಾದಲ್ಲಿ–೫೫
ಹಾಲು ಬತ್ತಿದ ಹಸುವಿಂಗೆ ಕರುವ ಬಿಟ್ಟಡೆ–೫೬

೯. **ಅವಸರದ ರೇಕಣ್ಣ** ... ೫೩
ದಾಕ್ಷಿಣ್ಯದ ಭಕ್ತಿ ಕಲಿಕೆಯ ವಿರಕ್ತಿ–೫೭
ದಾರಿಯಲ್ಲಿ ಬೀದಿಯಲ್ಲಿ ಮನೆಗಳಲ್ಲಿ–೫೮
೧೦. **ಆದಯ್ಯ** ... ೫೪
ಕಳವು ಪಾರದ್ವಾರ ಜೀವಹಿಂಸೆಯೆಂಬಿವನತ್ತತ್ತಲೆ–೫೯
ಕಾಮದ ಸೀಮೆಯ ಕಳೆಯದನ್ನಕ್ಕ–೬೦
ಚೌಷಷ್ಠಿ ವಿದ್ಯೆಗಳ ಕಲಿತಡೇನೊ–೬೧
ಜಪತಪ ನೇಮವಲ್ಲ–೬೨
ಮರ್ಕಟ ದರ್ಪಣವ ಹಿಡಿದು ನೋಡಿ–೬೩
ಮಾತ ಕಲಿತು ಮಂಡೆಯ ಬೋಳಿಸಿ–೬೪
ವೇದಂಗಳ ಹಿಂದೆ ಹರಿಯದಿರು ಹರಿಯದಿರು–೬೫
ವೇದವಿತ್ತುಗಳು ಅಗ್ನಿಪುರುಷನೆ ದೇವರೆಂಬರಯ್ಯಾ–೬೬
ಶಬ್ದಶಾಸ್ತ್ರ ತರ್ಕಾಗಮಂಗಳ ಹೇಳಿ ಕೇಳಿ–೬೭
ಸತ್ಯವೆ ಜಲ ಸಮತೆಯೆ ಗಂಧ ಅರಿವೆ ಅಕ್ಷತೆ–೬೮
ಹಣ ಬಂಗಾರ ವಸ್ತ್ರ ಕಪ್ಪಡ–೬೯
ಹಾಲ ಹಿಡಿದು ಬೆಣ್ಣೆಯನರಸಲುಂಟೆ–೭೦
ಹಿಂದಣ ಕಥೆಯ ಮುಂದೆ ಪೇಳುವ ಕಾವ್ಯವಲ್ಲ–೭೧
೧೧. **ಆಯ್ದಕ್ಕಿ ಮಾರಯ್ಯ** ... ೫೯
ಅಹಂಕಾರವರತಲ್ಲದೆ ಗುರುಭಕ್ತನಲ್ಲ–೭೨
ಕಾಯಕದಲ್ಲಿ ನಿರತನಾದಡೆ–೭೩
ನೇಮವ ಮಾಡಿಕೊಂಡು–೭೪
೧೨. **ಆಯ್ದಕ್ಕಿ ಲಕ್ಕಮ್ಮ** ... ೫೧
ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ–೩೬
ಆಸೆಯೆಂಬುದು ಅರಸಿಂಗಲ್ಲದೆ–೭೬
ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ–೭೭
ಸಂದಣಿಗೊಂಡು ಮನ ಹರುಷದಿಂದ–೭೮
ಕೈದ ಕೊಡುವರಲ್ಲದೆ ಕಲಿತನವ ಕೊಡುವರುಂಟೆ ಮಾರಯ್ಯಾ–೭೯
ಗರ್ವದಿಂದ ಮಾಡುವ ಭಕ್ತಿ–೮೦
ಸಸಿಗೆ ನೀರೆರೆದಡೆ ಎಳಕುವುದಲ್ಲದೆ–೮೧
೧೩. **ಉಗ್ಘಡಿಸುವ ಗಬ್ಬಿದೇವಯ್ಯ** ... ೬೪
ಜ್ಞಾನ ಬಾ ಮಾಯೆ ಹೋಗೆಂದು ಕಳುಹುತ್ತಿದ್ದೇನೆ–೮೨
ಭಾವಭ್ರಮೆವಂತರು ಬಾರದಿರಿ–೮೩
೧೪. **ಉರಿಲಿಂಗದೇವ** ... ೬೫
ತೀರ್ಥಯಾತ್ರೆಯಲ್ಲಿ ಕೂಡೆಹೆನೆಂದು–೮೪

೧೫. ಉರಿಲಿಂಗಪೆದ್ದಿ ... ೬೬
ಅಮೃತ ಸರ್ವರಿಗೂ ಅಮೃತವಾಗಿಪ್ಪುದಲ್ಲದೆ–೮೫
ಅಷ್ಟಾಷಷ್ಠಿ ತೀರ್ಥಂಗಳ ಮೀಯಲ್ಕೆ–೮೬
ಪುತ್ರ ಮಿತ್ರ ಕಳತ್ರಕ್ಕೆ ಸ್ನೇಹಿಸುವಂತೆ–೮೭
ವೇದ ಶಾಸ್ತ್ರ ಪುರಾಣಾಗಮ ಗ್ರಂಥಗಳ–೮೮
ಸಕಲ ಜನರು ಹೇಸಿದ ಉದಾನವ ಶ್ವಾನ ಭುಂಜಿಸಿ–೮೯
ಹೊನ್ನ ಬಿಟ್ಟು ಹೆಣ್ಣ ಬಿಟ್ಟು ಮಣ್ಣ ಬಿಟ್ಟು–೯೦
೧೬. ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ... ೭೦
ಕುರಿ ಕೋಳಿ ಕಿರಿಮೀನು ತಿಂಬವರಿಗೆಲ್ಲ–೯೧
ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ–೯೨
೧೭. ಉಳಿಯುಮೇಶ್ವರ ಚಿಕ್ಕಣ್ಣ ... ೭೨
ವಾರಣಾಸಿ ಅವಿಮುಕ್ತಿ ಇಲ್ಲಿಯೇ ಇದ್ದಾನೆ–೯೩
೧೮. ಎಚ್ಚರಿಕೆ ಕಾಯಕದ ಮುಕ್ತನಾಥಯ್ಯ ... ೭೩
ನಾಲ್ಕು ಜಾವಕ್ಕೆ ಒಂದು ಜಾವ–೯೪
೧೯. ಏಕಾಂತರಾಮಿತಂದೆ ... ೭೪
ಅಶನ ವ್ಯಸನ ಸರ್ವ ವಿಷಯಾದಿಗಳಲ್ಲಿ ಹುಸಿದು–೯೫
೨೦. ಏಲೇಶ್ವರ ಕೇತಯ್ಯ ... ೭೫
ಆವ ವ್ರತ ನೇಮವ ಹಿಡದಡೂ–೯೬
ಕ್ರೀಯ ಅನುವನರಿದಾತ ಗುರುವೆಂಬೆ–೯೭
ಮನಕ್ಕೆ ವ್ರತವ ಮಾಡಿ–೯೮
೨೧. ಒಕ್ಕಲಿಗ ಮುದ್ದಣ್ಣ ... ೭೭
ಅಂಗವೆ ಭೂಮಿಯಾಗಿ ಲಿಂಗವೆ ಬೆಳೆಯಾಗಿ–೯೯
ಪೈರಿಗೆ ನೀರು ಬೇಕೆಂಬಲ್ಲಿ–೧೦೦
ವೇದ ಶಾಸ್ತ್ರವನೋದುವುದಕ್ಕೆ ಹಾರುವನಲ್ಲ–೧೦೧
೨೨. ಕಂಬದ ಮಾರಿತಂದೆ ... ೭೯
ಕಾಯದಿಂದ ಸತ್ಕ್ರೀಯ ಕಂಡೆ–೧೦೨
೨೩. ಕದಿರ ರೆಮ್ಮವ್ವೆ ... ೮೦
ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ–೧೦೩
೨೪. ಕಾಳಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ ... ೮೧
ಬಂಜೆಯಾವಿಂಗೆ ಕ್ಷೀರವುಂಟೆ–೧೦೪
೨೫. ಕೊಟ್ಟಣದ ಸೋಮಮ್ಮ ... ೮೨
ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ–೧೦೫
೨೬. ಕೋಲ ಶಾಂತಯ್ಯ ... ೮೩
ಎನಗುಣಲಿಕ್ಕಿದರಯ್ಯ ಸಿರಿಯಾಳ ಚೆಂಗಳೆಯರು–೧೦೬
ಜಡೆ ಮುಡಿ ಬೋಳು ಹೇಗಾದಡಾಗಲಿ–೧೦೭
ಮಾಡಿ ಆಡಲೇತಕ್ಕೆ ಸಲಹಿ ಕೊಲಲೇತಕ್ಕೆ–೧೦೮

ಮಾತಬಲ್ಲವನಾದಡೆ ಸರ್ವ ಜೀವದ ನೀತಿಯನರಿಯಬೇಕು–೧೧೯
ಬಿತ್ತಿದ ಬೆಳೆ ಕಟ್ಟಿದ ಕೆರೆ–೧೧೦
೨೭. ಗಜೇಶ ಮಸಣಯ್ಯ ... ೮೫
ಒಲಿದವರ ಕೊಲುವಡೆ ಮಸೆದ ಕೂರಲಗೇಕೆ–೧೧೧
ಕೂಪರನಗಲುವುದು ಆತ್ಮಘಾತಕವಪ್ಪಾ–೧೧೨
ದೇವರ ನೆನೆದು ಮುಕ್ತರಾದೆವೆಂಬ–೧೧೩
೨೮. ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ... ೮೭
ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು–೧೧೪
೨೯. ಗಾವುದಿ ಮಾಚಯ್ಯ ... ೮೮
ಎನ್ನಂತರಂಗವೆ ಬಸವಣ್ಣನಯ್ಯಾ–೧೧೫
೩೦. ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ ... ೮೯
ಹದ ಮಣ್ಣಲ್ಲದೆ ಮಡಕೆಯಾಗಲಾರದು–೧೧೬
೩೧. ಗುಪ್ತ ಮಂಚಣ್ಣ ... ೯೦
ಉಳಿಯ ಹಿಡಿಯಲ್ಲಿ ಕಲೆ ಮಾಡಿಸಿಕೊಂಡ ದೇವರಿಗೆ–೧೧೭
ಕಳವು ಹಾದರಕ್ಕೆ ಗುಪ್ತ–೧೧೮
ಕೀರ್ತಿಗೆ ಜಗವ ಕೊಂಡು ಮಾಡುವಾತ ಭಕ್ತನೆ–೧೧೯
ಕುರುಡ ಕೈಯ ಕೋಲ ಹಿಂಗಿದಾಗ–೧೨೦
ಡಂಬಕದ ಪೂಜೆ ಹೋಹ ಹೊತ್ತಿನ ಕೇಡು–೧೨೧
೩೨. ಗುರುಪುರದ ಮಲ್ಲಯ್ಯ ... ೯೨
ಹೊತ್ತಿಗೊಂದು ಪರಿಯಹ ಮನವ ಕಂಡು–೧೨೨
೩೩. ಗೊಗ್ಗವ್ವೆ ... ೯೩
ಮೊಲೆ ಮುಡಿ ಬಂದಡೆ ಹೆಣ್ಣೆಂಬರು–೧೨೩
೩೪. ಗೋರಕ್ಷ ... ೯೪
ವಿಷಕ್ಕೆ ಅಂಜುವರಲ್ಲದೆ ಸರ್ಪಂಗೆ ಅಂಜುವರುಂಟೆ–೧೨೪
೩೫. ಘಟ್ಟಿವಾಳಯ್ಯ ... ೯೫
ಒಡೆದ ಮಡಕೆಗೆ ಸರಿಯಿಂದ ಸಂದು ಕೂಡುವುದೆ–೧೨೫
ತಪವೆಂಬುದು ಬಂಧನ–೧೨೬
೩೬. ಚಂದಿಮರಸ ... ೯೬
ಅರಿಯದ ಗುರು ಅರಿಯದ ಶಿಷ್ಯಂಗೆ–೧೨೭
ಕವಿ ಗಮಕಿ ವಾಗ್ಮಿಯೆಂಬವರ ಮಾತಿಗಿಲ್ಲ–೧೨೮
ಕಿಚ್ಚು ದೈವವೆಂದು ಹವಿಯ ಬೇಳುವರು–೧೨೯
ತನ್ನದಾದಡೇನೋ ಕನ್ನಡಿ–೧೩೦
ಬಟ್ಟೆಗೊಂಡು ಹೋಗುತಿಪ್ಪ ಮನುಜನೊಬ್ಬ–೧೩೧
ಹಾವ ಹೊತ್ತುಕೊಂಡು ಹೋಗುತ್ತ ಹಾವಾಡಿಗ–೧೩೨
ಹುಲ್ಲ ಮನುಷ್ಯನ ಕಂಡು–೧೩೩
೩೭. ಚೆನ್ನಬಸವಣ್ಣ ... ೯೯

ಅರ್ಥ ಮದ ಅಹಂಕಾರ ಮದ–೧೩೪
ಓದಿದರೇನು ಕೇಳಿದರೇನು–೧೩೫
ಕುಲಹೀನ ಶಿಷ್ಯಂಗೆ ಅನುಗ್ರಹವ ಕೊಟ್ಟು–೧೩೬
ಜೈನನ ಮನದ ಕೊನೆಯ ಮೊನೆಯ ಮೇಲೆ–೧೩೭
ತನು ಮನ ಬಳಲದೆ–೧೩೮
ತಪವೆಂಬುದು ಬಂಧನ–೧೩೯
ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೆ–೧೪೦
ಭಕ್ತ ಶಾಂತನಾಗಿರಬೇಕು–೧೪೧
ಮಡಿಲಲ್ಲಿ ಸುತ್ತಿದ ಹಾವಿನಂತೆ–೧೪೨
ಮಾತ ಕಲಿತು ಮಂಡೆಯ ಬೋಳಿಸಿಕೊಂಡಡೇನು–೧೪೩

೩೮. ಜಗಳಗಂಟ ಕಾಮಣ್ಣ ... ೧೦೩

ಸಾವ ದೇವರನೊಲ್ಲೆ–೧೪೪

೩೯. ಜೇಡರ ದಾಸಿಮಯ್ಯ ... ೧೦೪

ಅಂಬಲಿ ಅಳೆಯಾಗಿ–೧೪೫
ಅಗ್ನಿ ಸುಡಲಲ್ಲದೆ ಸುಳಿಯಲರಿಯದು–೧೪೬
ಆಚಾರಸಹಿತವಿದ್ದಡೆ ಗುರುವೆಂಬೆ–೧೪೭
ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ–೧೪೮
ಎಡರಡಸಿದಲ್ಲಿ ಮೃಡ–೧೪೯
ಎಳ್ಳಿಲ್ಲದ ಗಾಣದಲ್ಲಿ ಎಣ್ಣೆಯುಂಟೆ–೧೫೦
ಒಡಲುಗೊಂಡವ ಹಸಿವ–೧೫೧
ಕಡೆಗೀಲಿಲ್ಲದ ಬಂಡಿ–೧೫೨
ಕರಿಯನಿತ್ತಡೆ ಒಲ್ಲೆ–೧೫೩
ಕೀಲು ಡೋಹರ ಕಕ್ಕ–೧೫೪
ಕುಲ ಛಲವ ಬಿಟ್ಟು ನಿಮ್ಮನೊಲಿಸಿದ ಶರಣರಿಗೆ–೧೫೫
ತೊಡೆಯಲ್ಲಿ ಮುದ್ರೆಯನೊತ್ತಿದಡೇನು–೧೫೬
ಬರು ಸಠಗನ ಭಕ್ತಿ–೧೫೭
ಭಕ್ತಿಯ ಬಲ್ಲವರಿಗೆ–೧೫೮
ಭವಿಯ ಕಳೆದು ಭಕ್ತನಾದ ಬಳಿಕ–೧೫೯
ಮಡದಿಯ ಪ್ರಾಣಕ್ಕೆ–೧೬೦
ಮೆಳೆಯ ಮೇಲಣ ಕಲ್ಲು–೧೬೧
ಮೊಲೆ ಮುಡಿ ಬಂದಡೆ–೧೬೨
ವೇಷವ ಹೊತ್ತ ಹಿರಿಯರು–೧೬೩
ಸತ್ಯದ ನುಡಿ ತೀರ್ಥ–೧೬೪
ಸತಿಯರ ಸಂಗವನು–೧೬೫
ಹರಿದ ಗೋಣಿಯಲ್ಲೊಬ್ಬ–೧೬೬
ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ–೧೬೭
ಹೊಲಬನರಿಯದ ಗುರು–೧೬೮

೪೦. **ಜೋದರ ಮಾಯಣ್ಣ** ... ೧೧೦
ಕಾಮ ಹೊದ್ದಲಮ್ಮದು–೧೭೯
೪೧. **ಡಕ್ಕೆಯ ಬೊಮ್ಮಣ್ಣ** ... ೧೧೧
ಕವಿಯ ಹುಗತೆ ಗಮಕಿಯ ಸಂಚ–೧೭೦
ತಾನರಿಯದೆ ಮಾಡಿದ ದೋಷಕ್ಕೆ–೧೭೧
ಸತಿಯ ಗುಣವ ಪತಿ ನೋಡಬೇಕಲ್ಲದೆ–೧೭೨
೪೨. **ಡೋಹರ ಕಕ್ಕಯ್ಯ** ... ೧೧೩
ಆಸೆಯಾಮಿಷವಳಿದು–೧೭೩
ಎನ್ನ ಕಷ್ಟ ಕುಲದಲ್ಲಿ ಹುಟ್ಟಿದನೆಂಬ–೧೭೪
೪೩. **ತಳವಾರ ಕಾಮಿದೇವಯ್ಯ** ... ೧೧೪
ವ್ಯವಹಾರವ ಮಾಡಿದಲ್ಲಿ–೧೭೫
೪೪. **ತುರುಗಾಹಿ ರಾಮಣ್ಣ** ... ೧೧೫
ಅಯ್ಯಾ ಏನನಹುದೆಂಬೆ ಏನನಲ್ಲಾ ಎಂಬೆ–೧೭೬
ಕ್ರೀ ಶುದ್ಧತೆಯಾದಲ್ಲಿ–೧೭೭
ಕೋಲೊಂದರಲ್ಲಿ ಹಲವು ಕುಲದ ಗೋವುಗಳ–೧೭೮
೪೫. **ದಾಸೋಹದ ಸಂಗಣ್ಣ** ... ೧೧೭
ತನಗೆ ಉಂಟಾಗಿ ಶಿಷ್ಯನ ಮನೆಗೆ ಹೋಗಿ–೧೭೯
೪೬. **ನಗೆಯ ಮಾರಿತಂದೆ** ... ೧೧೮
ಎನ್ನ ಕೈಯಲ್ಲಿ ಕೊಟ್ಟುದ ದೇವರೆಂದಿದ್ದೆ–೧೮೦
ಕಲ್ಲಿಯ ಹಾಕಿ ನೆಲ್ಲವ ತುಳಿದು–೧೮೧
ಕುಣಿವ ಕುದುರೆಯ ಮೇಲೆ ಕುಳಿತು–೧೮೨
ಸಮತೆಯ ಸಮಾಧಾನವ ಹೇಳುವ–೧೮೩
೪೭. **ನಾಗಲಾಂಬಿಕೆ** ... ೧೨೦
ಎನ್ನ ಕುಲಸೂತಕವ ಕಳೆದಾತ ಬಸವಣ್ಣ–೧೮೪
ಬಸವಣ್ಣಾ ನೀವು ಮರ್ತ್ಯಕ್ಕೆ ಬಂದು ನಿಂದಡೆ–೧೮೫
೪೮. **ನಿವೃತ್ತಿ ಸಂಗಯ್ಯ** ... ೧೨೨
ಪರಧನ ಪರಾನ್ನ ಪರಸ್ತ್ರೀಯರಾಸೆ ಬಿಡದು–೧೮೬
ಬ್ರಾಹ್ಮಣ ಶಿವಭಕ್ತನಾದ ಬಳಿಕ ಬ್ರಾಹ್ಮಣರ ಬೆರಸಲಾಗದು–೧೮೭
೪೯. **ನೀಲಮ್ಮ** ... ೧೨೩
ಅಲ್ಲಮನ ವಂಶದವಳು ನಾನು–೧೮೮
೫೦. **ನುಲಿಯ ಚಂದಯ್ಯ** ... ೧೨೪
ಕಂದಿಸಿ ಕುಂದಿಸಿ ಬಂಧಿಸಿ–೧೮೯
ಗುರುವ ಕುರಿತು ಮಾಡುವಲ್ಲಿ–೧೯೦
ಗುರುವನರಿತು ಮಾಡುವಲ್ಲಿ–೧೯೧
ನುಡಿದ ಮಾತಿಂಗೆ ತಡಬಡ ಬಂದಲ್ಲಿ–೧೯೨
ಭಾವ ಶುದ್ಧವಾಗಿಪ್ಪುದೇ ಗುರು ಪೂಜೆ–೧೯೩

೫೧. **ಪ್ರಸಾದಿ ಭೋಗಣ್ಣ** ... ೧೨೬
ಕಲ್ಲಿನಲ್ಲಿ ಹುಟ್ಟಿದ ಕಿಡಿ ಕಲ್ಲ ಸುಡಬಲ್ಲುದೆ–೧೯೪
ನಾನಾ ವೇದ ಶಾಸ್ತ್ರ ಪುರಾಣ ಆಗಮ ಪಾತಕನಾದಲ್ಲಿ–೧೯೫
೫೨. **ಬಹುರೂಪಿ ಚೌಡಯ್ಯ** ... ೧೨೮
ಆಡುವಡೆ ಸದಾಚಾರಿಗಳ ಕೂಡೆ ಆಡುವುದು–೧೯೬
ಇನ್ನಾಡುವೆ ಜಂಗಮ ಬಹುರೂಪ–೧೯೭
ಲಿಂಗ ನಿಷ್ಠೆಯಿಲ್ಲದವರಂಗಳವ ಮೆಟ್ಟಲಾಗದು–೧೯೮
೫೩. **ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ** ... ೧೩೦
ಕಾಯಕ ತಪ್ಪಿದಡೆ ಸೈರಿಸಬಾರದು–೧೯೯
ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ–೨೦೦
೫೪. **ಬಾಹೂರ ಬೊಮ್ಮಣ್ಣ** ... ೧೩೧
ಸದ್ಭಕ್ತಿಯಿಲ್ಲದ ವಿಶ್ವಾಸಹೀನನು–೨೦೧
೫೫. **ಬಿಬ್ಬಿ ಬಾಚಯ್ಯ** ... ೧೩೨
ಬಸವಣ್ಣನ ಪ್ರಸಾದವ ಕೊಂಡ ಕಾರಣ–೨೦೨
೫೬. **ಬೊಂತಾದೇವಿ** ... ೧೩೩
ಊರ ಹೊರಗಣ ಬಯಲು–೨೦೩
೫೭. **ಭೋಗಣ್ಣ** ... ೧೩೪
ಮನವನ್ಯಾಯಪಾತಕದೊಳಗೆ ಸಿಲುಕಿಹುದು–೨೦೪
೫೮. **ಮಡಿವಾಳ ಮಾಚಿದೇವ** ... ೧೩೫
ಅಂಗದ ಮೇಲೆ ಲಿಂಗವ ಧರಿಸಿ–೨೦೫
ಅಯ್ಯಾ ತನ್ನ ತಾನರಿಯದೆ–೨೦೬
ಅರಸಿನ ಭಕ್ತಿ ಅಹಂಕಾರದಲ್ಲಿ ಹೋಯಿತ್ತು–೨೦೭
ಆ ಜಾತಿ ಈ ಜಾತಿಯವರೆನಬೇಡ–೨೦೮
ಆಶಾ ಪಾಶವ ಬಿಟ್ಟಡೇನಯ್ಯಾ–೨೦೯
ಇಷ್ಟಲಿಂಗವ ಬಿಟ್ಟು–೨೧೦
ಉಡಿಯ ಲಿಂಗವ ಬಿಟ್ಟು–೨೧೧
ಊರ ಕಲ್ಲಿಗೆ ಉರದ ಲಿಂಗವಡಿಯಾಗಿ ಬೀಳುವ–೨೧೨
ಒಟ್ಟಿರ್ದ ಮಣ್ಣಿಗೂ ನಟ್ಟಿರ್ದ ಕಲ್ಲಿಗೂ–೨೧೩
ಗುರು ಕೊಟ್ಟ ಲಿಂಗ–೨೧೪
ಪರಧನ ಪರಸತಿಗಳುಪಿದಡೆ–೨೧೫
ಪರಮ ವಿಭೂತಿಯ ಹಣೆಯಲ್ಲಿ ಧರಿಸಿ–೨೧೬
ಪಾಪಿಗೆ ಪ್ರಾಯಶ್ಚಿತ್ತವುಂಟು–೨೧೭
ವಚನದ ರಚನೆಯ ನುಡಿವ ಬಯಲುರಂಜಕರೆಲ್ಲ–೨೧೮
ವೇದದಿಂದ ವೆಗ್ಗಳವಿಲ್ಲವೆಂಬಿರಿ–೨೧೯
ವೇದವನೋದಿದಡೇನು ಶಾಸ್ತ್ರವ ಕಲಿತಡೇನು–೨೨೦
ವೇದ ವಿಪ್ರರ ಬೋಧೆ–೨೨೧
ಹೊನ್ನು ಹೆಣ್ಣು ಮಣ್ಣನಾವರಿಸಿಕೊಂಡು–೨೨೨

ಕಟ್ಟಿದ ಲಿಂಗವ ಕಿರಿದು ಮಾಡಿ
ಬೆಟ್ಟದ ಲಿಂಗವ ಹಿರಿದು ಮಾಡುವ
ಪರಿಯ ನೋಡ
ಇಂತಪ್ಪ ಲೊಟ್ಟಿಮೂಳರ ಕಂಡರೆ
ಗಟ್ಟಿವುಳ್ಳ ಪಾದರಕ್ಷೆಯ ತೆಗೆದುಕೊಂಡು
ಲೊಟಲೊಟನೆ ಹೊಡೆಯೆಂದಾತ
ನಮ್ಮ ಅಂಬಿಗರ ಚೌಡಯ್ಯ. (೧೧)

ಕಲ್ಲ ದೇವರ ಪೂಜೆಯ ಮಾಡಿ
ಕಲಿಯುಗದಿ ಕತ್ತೆಗಳಾಗಿ ಹುಟ್ಟಿದರು
ಮಣ್ಣ ದೇವರ ಪೂಜಿಸಿ ಮಾನಹೀನರಾದರು
ಮರನ ದೇವರೆಂದು ಪೂಜಿಸಿ ಮಣ್ಣ ಕೂಡಿದರು
ದೇವರ ಪೂಜಿಸಿ ಸ್ವರ್ಗಕ್ಕೇರದೆ ಹೋದರು
ಜಗದ್ಭರಿತವಾದ ಪರಶಿವನೊಳಗೆ
ಕಿಂಕರನಾದ ಶಿವಭಕ್ತನೆ ಶ್ರೇಷ್ಠನೆಂದಾತ
ನಮ್ಮ ಅಂಬಿಗರ ಚೌಡಯ್ಯ. (೧೨)

ಕುಲ ಹಲವಾದಡೇನು
ಉತ್ಪತ್ಯ ಸ್ಥಿತಿ ಲಯ ಒಂದೆ ಭೇದ
ಮಾತಿನ ರಚನೆಯ ಬೇಕಾದಂತೆ ನುಡಿದಡೇನು ಬಿಡುಮುಡಿಯಲ್ಲಿ
ಎರಡನರಿಯಬೇಕೆಂದನಂಬಿಗ ಚೌಡಯ್ಯ. (೧೩)

ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ
ತಿರುಗಿ ಅವನ ಮನೆಯಲ್ಲಿ ಉಣ್ಣಬಾರದೆಂದು
ಅಕ್ಕಿ ಕಣಕವ ಕೊಂಡುಹೋಗುವ
ಗುರುವಿನ ಕಂಡರೆ
ಕೆಡವಿ ಹಾಕಿ ಮೂಗನೆ ಕೊಯ್ದು
ಇಷ್ಟಂಗಿಯ ಕಲ್ಲಿಲೆ ತಿಕ್ಕಿ
ಸಾಸಿವೆಯ ಹಿಟ್ಟನೆ ತಳಿದು
ಮೇಲೆ ಲಿಂಬಿಯ ಹುಳಿಯನೆ ಹಿಂಡಿ

ಪಡುವ ಗಾಳಿಗೆ ಹಿಡಿಯೆಂದಾತ
ನಮ್ಮ ಅಂಬಿಗರ ಚೌಡಯ್ಯ. (೧೪)
ಕೇಳು ನೀನೆಲೊ ಮಾನವಾ
ಸೋಮವಾರ ಅಮಾವಾಸ್ಯೆ ಹುಣ್ಣಿಮೆ ಎಂಬ
ದೊಡ್ಡ ಹಬ್ಬಗಳು ಬಂದಿಹವೆಂದು
ಮನೆಯ ಸಾರಿಸಿ ರಂಗವೋಲೆಯನಿಕ್ಕಿ
ಆಸನವ ಬಲಿದು ಪತ್ರೆ ಪುಷ್ಪ ಮೊದಲಾದ
ಅನಂತ ಸೌರಂಭವ ಸವರಿಸಿ
ವಿರಕ್ತನ ಕರೆತಂದು ಪೂಜೆಯ ಮಾಡುವುದಕ್ಕಿಂತಲೂ
ಹೊರೆಯಲ್ಲಿ ಚರಿಸಾಡುವ ಕಾಳ ಶುನಕನ ತಂದು
ಆ ಗದ್ದುಗೆಯಲ್ಲಿ ಪೂಜೆ ಮಾಡುವುದು
ಮಹಾ ಲೇಸಯ್ಯಾ
ಅದೇನು ಕಾರಣವೆಂದರೆ
ಆಣವಮಲ ಮಾಯಾಮಲ ಕಾರ್ಮಿಕಮಲಕ್ಕೆ ಹೊರತೆಂದು
ಅಷ್ಟಮದ ವಿರಹಿತನೆಂದು
ಷಡ್ಗುಣವ ಸಂಹರಿಸಿದವನೆಂದು
ಶಾಸ್ತ್ರದಲ್ಲಿ ಸಂಪನ್ನನೆಂದು
ಕ್ರಿಯೆಯಲ್ಲಿ ವೀರಶೈವನೆಂದು ನಿರಾಭಾರಿಯೆಂದು
ಬಾಯಿಲೆ ಬೊಗಳಿ ಲೌಕಿಕದಲ್ಲಿ
ಮಠವ ಮಾಡಿಕೊಂಡು
ಮಾನ್ಯವ ಸಂಪಾದಿಸಿಕೊಂಡು
ಅಶನಕ್ಕಾಶ್ರಯನಾಗಿ ವ್ಯಸನಕ್ಕೆ ಹರಿದಾಡಿ
ವಿಷಯದಲ್ಲಿ ಕೂಡಿ
ಸರ್ವವು ಎನಗೆ ಬೇಕೆಂದು
ತಮೋಗುಣದಿಂದ ದ್ರವ್ಯವ ಕೂಡಿಸಿ
ವಿರತಿಸ್ಥಲವು ಹೆಚ್ಚೆಂದು ಕಾವಿಯ ಹೊದೆದು
ಕೌಪೀನವ ಕಟ್ಟಿ
ವೇಷ ಡಂಭಕದಿಂದ ತಿರುಗುವ
ಭ್ರಷ್ಟರ ಮುಖವ ನೋಡಲಾಗದು
ಇಂತಪ್ಪ ವಿರತರ ಪೂಜೆಯ ಮಾಡುವುದಕ್ಕಿಂತಲೂ

ಅರಿಯದ ಗುರು ಅರಿಯದ ಶಿಷ್ಯಂಗೆ
ಅನುಗ್ರಹವ ಮಾಡಿದಡೇನಪ್ಪುದೆಲವೋ
ಅಂಧಕನ ಕೈಯನಂಧಕ ಹಿಡಿದಡೆ
ಮುಂದನಾರು ಕಾಬರು ಹೇಳಲೆ ಮರುಳೆ
ತೊರೆಯಲದ್ದವನನೀಸಲರಿಯದವ
ತೆಗೆವ ತೆರನಂತೆಂದನಂಬಿಗ ಚೌಡಯ್ಯ. (೪)

ಆಳಾಪದ ಸೊಬಗು
ಘಂಟೆ ವಾದ್ಯದ ಕೂಗಿನ ಕೊರಚು
ಪರಿಚಾರಕರ ಎಡೆಯಾಟದಿಂದ
ಸೊಬಗು ಮೆರೆದಿತ್ತು
ಎನಗೆ ಇನ್ನಾವುದು ಇಲ್ಲ
ಇನ್ನೇವೆನೆಂದನಂಬಿಗ ಚೌಡಯ್ಯ. (೫)

ಈಶ ಲಾಂಛನವ ತೊಟ್ಟು
ಮನ್ಮಥವೇಷ ಲಾಂಛನವ ತೊಡಲೇತಕ್ಕೆ
ಇದು ನಿಮ್ಮ ನುಡಿ ನಡೆಗೆ ನಾಚಿಕೆಯಲ್ಲವೇ
ಅಂದಳ ಛತ್ರ ಆಭರಣ
ಕರಿ ತುರಗಂಗಳ ಗೊಂದಣವೇತಕ್ಕೆ
ಅದು ಘನಲಿಂಗದ ಮೆಚ್ಚಲ್ಲ
ಎಂದನಂಬಿಗ ಚೌಡಯ್ಯ. (೬)

ಈಶ್ವರನ ಕಾಬುದೊಂದಾಸೆಯುಳ್ಳೊಡೆ
ಪರದೇಶಕ್ಕೆ ಹೋಗಿ ಬಳಲದಿರು
ಕಾಶಿಯಲ್ಲಿ ಕಾಯವ ವಿನಾಶವ ಮಾಡಲುಬೇಡ
ನಿನ್ನಲ್ಲಿ ನೀ ತಿಳಿದು ನೋಡಾ
ಸರ್ವೇಶ ಮುಳ್ಳಗುತ್ತ ತೆರಹಿಲ್ಲೆಂದಡೆ
ಒಂದು ಗೋಂಟ ಸಾರಿರ್ದನೆ
ಎಂದನಂಬಿಗ ಚೌಡಯ್ಯ. (೭)

ಉಂಡರೆ ಭೂತನೆಂಬರು
ಉಣದಿದ್ದರೆ ಚಾತಕನೆಂಬರು
ಭೋಗಿಸಿದರೆ ಕಾಮಿಯೆಂಬರು
ಭೋಗಿಸದಿದ್ದರೆ ಮುನ್ನ ಮಾಡಿದ ಕರ್ಮಿ ಎಂಬರು
ಊರೊಳಗಿದ್ದರೆ ಸಂಸಾರಿ ಎಂಬರು
ಅಡವಿಯೊಳಗಿದ್ದರೆ ಮೃಗಜಾತಿ ಎಂಬರು
ನಿದ್ರೆಗೈದರೆ ಜಡದೇಹಿ ಎಂಬರು
ಎದ್ದಿದ್ದರೆ ಚಕೋರನೆಂಬರು
ಇಂತೀ ಜನಮೆಚ್ಚಿ ನಡೆದವರ
ಎಡದ ಪಾದ ಕಿರಿ ಕಿರುಗುಣಿಯಲ್ಲಿ
ಮನೆ ಮಾಡು ಮನೆ ಮಾಡು
ಎಂದಾತ ನಮ್ಮ ಅಂಬಿಗರ ಚೌಡಯ್ಯ. (೮)

ಓದಿಹೆನೆಂಬ ಒಡಲು
ಕಂಡೆಹೆನೆಂಬ ಭ್ರಾಂತು
ಸರ್ವರಿಗೆ ಹೇಳಿಹೆನೆಂಬ ತೇಜಸ್ಸು
ಇಂತಿವೆಲ್ಲವು ಇದಿರಿಗೆ ಹೇಳೆ
ತನ್ನ ಉದರದ ಕಕ್ಕುಲತೆಯಲ್ಲದೆ
ಆತ ಅರಿವಿಂಗೆ ಒಡಲಲ್ಲ
ಎಂದನಂಬಿಗ ಚೌಡಯ್ಯ. (೯)

ಕಂಥೆ ತೊಟ್ಟವ ಗುರುವಲ್ಲ
ಕಾವಿ ಹೊತ್ತವ ಜಂಗಮವಲ್ಲ
ಶೀಲ ಕಟ್ಟಿದವ ಶಿವಭಕ್ತನಲ್ಲ
ನೀರು ತೀರ್ಥವಲ್ಲ
ಕೂಳು ಪ್ರಸಾದವಲ್ಲ
ಹೌದೆಂಬವನ ಬಾಯ ಮೇಲೆ
ಅರ್ಧಮಣದ ಪಾದರಕ್ಷೆಯ ತೆಗೆದುಕೊಂಡು
ಮಾಸಿ ಕಡಿಮೆಯಿಲ್ಲದೆ
ತೂಗಿ ತೂಗಿ ಟೊಕಟೊಕನೆ ಹೊಡೆ ಎಂದಾತ
ನಮ್ಮ ಅಂಬಿಗರ ಚೌಡಯ್ಯ. (೧೦)

ಅಂಗಸೋಂಕಿನ ಲಿಂಗತಂದೆ

ಅಂಕಿತನಾಮ : ಭೋಗಬಂಕೇಶ್ವರಲಿಂಗ
ದೊರೆತಿರುವ ವಚನಗಳು : ೧೧

ಮರದೊಳಗಣ ಬೆಂಕಿ
ತನ್ನ ತಾನೇ ಉರಿಯಬಲ್ಲುದೆ
ಶಿಲೆಯೊಳಗಣ ದೀಪ್ತಿ
ಆ ಬೆಳಗ ತನ್ನ ತಾನೇ ಬೆಳಗಬಲ್ಲುದೆ
ಆ ತೆರನಂತೆ

ಕುಟಿಲನ ಭಕ್ತಿ
ಕಿಸುಕುಳನ ವಿರಕ್ತಿ
ಮಥನಿಸಿಯಲ್ಲದೆ ದಿಟ ಹುಸಿಯ ಕಾಣಬಾರದು
ಸತ್ಯವನು ಅಸತ್ಯವನು ಪ್ರತ್ಯಕ್ಷ ಪ್ರಮಾಣಿಸಿದಲ್ಲದೆ
ನಿಶ್ಚಯವನರಿಯಬಾರದು

ಗುರುವಾದಡೂ ಲಿಂಗವಾದಡೂ ಜಂಗಮವಾದಡೂ
ಪರೀಕ್ಷಿಸಿ ಹಿಡಿಯದವನ ಭಕ್ತಿ ವಿರಕ್ತಿ
ತೂತಕುಂಭದಲ್ಲಿಯ ನೀರು
ಸೂತ್ರ ತಪ್ಪಿದ ಬೊಂಬೆ
ನಿಜನೇತ್ರ ತಪ್ಪಿದ ದೃಷ್ಟಿ

ಬೇರು ಮೇಲಾದ ಸಸಿಗೆ
ನೀರಿನಾರೈಕೆಯುಂಟೆ
ಇಂತು ಆವ ಕ್ರೀಯಲ್ಲಿಯೂ
ಭಾವಶುದ್ಧಾತ್ಮನಾಗಿ ಆರೈಕೆ ಬೇಕು
ಭೋಗಬಂಕೇಶ್ವರನ ಸಂಗದ ಶರಣನ ಸುಖ. (೧)

೦

ಅಂಬಿಗರ ಚೌಡಯ್ಯ

ಊರು : ಚೌಡದಾನಪುರ, ರಾಣಿಬೆನ್ನೂರು ತಾಲ್ಲೂಕು, ಧಾರವಾಡ ಜಿಲ್ಲೆ.
ಕಸುಬು : ನದಿಯಲ್ಲಿ ದೋಣಿಯನ್ನು ನಡೆಸುವುದು.
ಅಂಕಿತನಾಮ : ಅಂಬಿಗರ ಚೌಡಯ್ಯ
ದೊರೆತಿರುವ ವಚನಗಳು : ೨೭೩

ಅಯ್ಯಾ ಪಾಷಾಣಕ್ಕೆ ಗಿರಿ ಸವೆದವು
ಪತ್ರೆಗೆ ತರು ಸವೆದವು
ಸಪ್ತಸಾಗರಂಗಳು ಮಜ್ಜನಕ್ಕೆ ಸವೆದವು
ಅಗ್ನಿ ಧೂಪಕ್ಕೆ ಸವೆಯಿತ್ತು
ವಾಯು ಕಂಪಿತಕ್ಕೆ ಸವೆಯಿತ್ತು
ಉಘೇ ಚಾಂಗು ಭಲಾ ಎಂಬ ಶಬ್ದ ಸವೆಯಿತ್ತು
ಎನ್ನಗಿನ್ನೆಂತೊ
ಉಮೇಶನ ಶರಣರು ಮಹಾಮನೆಯಲ್ಲಿ
ಶಿವಲಿಂಗಾರ್ಚನೆಗೆ ಕುಳ್ಳಿದ್ದಡೆ
ನಾನವರ ಪಾದರಕ್ಷೆಯ
ಕಾಯ್ದುಕೊಂಡಿದ್ದೇನೆಂದನಂಬಿಗ ಚೌಡಯ್ಯ. (೨)

ಅರಳೆಯ ಮರನು ವಿಷ್ಣುಕಾಂತಿ
ಬನ್ನಿ ಮುತ್ತಕ ತೊಳಚಿ
ಹರಿ ಹರಿಯೆಂದು ಹೊಡವಡುವಿರಿ
ಎಲ್ಲಿ ಭೋ ಎಲ್ಲಿ ಭೋ
ನಿಮ್ಮ ನಿಮ್ಮ ಹೊಡವಡುವ ದೈವಗಳೆಲ್ಲಾ
ಗಿಡು ಮರನಾಗಿ ಹೋದವಲ್ಲಾ
ನಿಮ್ಮ ನಡೆಯೆಲ್ಲಾ ಅನಾಚಾರ
ನುಡಿಯೆಲ್ಲಾ ಶಿವದ್ರೋಹ
ಇವದಿರ ಗಡಣ
ಬೇಡೆಂದನಂಬಿಗ ಚೌಡಯ್ಯ. (೩)

೭೫. **ಸುಂಕದ ಬಂಕಣ್ಣ** ... ೧೬೭
ನಿಂದಿಸುವನೊಬ್ಬ ಸ್ತುತಿಸುವನೊಬ್ಬ–೨೭೬
೭೬. **ಸೂಳೆ ಸಂಕವ್ವೆ** ... ೧೬೮
ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ–೨೭೭
೭೭. **ಸೊಡ್ಡಳ ಬಾಚರಸ** ... ೧೬೯
ಆ ಪತ್ರೆಗೀ ಫಲ ಈ ಪುಷ್ಪಕೀ ಫಲ–೨೭೮
ಉದ್ದವಾಗಿ ಕೂದಲು ನಿಮಿರ್ದು ಗಡ್ಡಂಗಳು ಬೆಳೆದಡೇನು–೨೭೯
ಭಕ್ತರಲ್ಲದವರೊಡನೆ ಆಡದಿರು ಆಡದಿರು–೨೮೦
ವೇದದವರನೊಲ್ಲದೆ ನಮ್ಮ ಮಾದಾರ ಚನ್ನಯ್ಯಂಗೊಲಿದ–೨೮೧
೭೮. **ಹಡಪದ ಅಪ್ಪಣ್ಣ** ... ೧೭೧
ಅಯ್ಯಾ ನಿಮ್ಮ ಶರಣರು–೨೮೨
ಉಟ್ಟರೆ ತೊಟ್ಟರೇನಯ್ಯ ನಟ್ಟುವರಂತೆ–೨೮೩
ತನ್ನ ತಾನರಿಯದೆ ತನ್ನ ತಾ ನೋಡದೆ–೨೮೪
ನುಡಿದರೇನಯ್ಯ ನಡೆ ಇಲ್ಲದನ್ನಕ್ಕ–೨೮೫
ಪುರಾತರು ಪುರಾತರು ಎಂದು–೨೮೬
ಮನವನರಿದಂಗೆ ಮತದ ಹಂಗೇಕೊ–೨೮೭
ವಂದನೆಗೆ ನಿಲ್ಲಬೇಡ ನಿಂದೆಗಂಜಿ ಓಡಲಿಬೇಡ–೨೮೮
ಸಾವಾಗ ದೇವನೆಂದರೆ ಸಾವು ಬಿಡುವುದೇ–೨೮೯
ಹರಿವ ಜಲಧಿಯಂತೆ ಚರಿಸಿ ಬಹ ಮನವ–೨೯೦
ಹಾವ ಹಿಡಿವುದ ಹಾವಾಡಿಗ ಬಲ್ಲನಲ್ಲದೆ–೨೯೧
೭೯. **ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ** ... ೧೭೫
ಆಸೆಯುಳ್ಳನ್ನಕ್ಕ ರೋಷ ಬಿಡದು–೨೯೨
ಕಾಮವಿಲ್ಲ ಕ್ರೋಧವಿಲ್ಲ ಲೋಭವಿಲ್ಲ–೨೯೩
ನೆನೆವುತ್ತಿದೆ ಮನ ದುರ್ವಾಸನೆಗೆ ಹರಿವುತ್ತಿದೆ ಮನ–೨೯೪
ಮದ ಮತ್ಸರ ಬಿಡದು–೨೯೫
ಮನವ ಗೆದ್ದೆಹೆನೆಂದು ತನುವ ಕರಗಿಸಿ–೨೯೬
೮೦. **ಹಾವಿನಹಾಳ ಕಲ್ಲಯ್ಯ** ... ೧೭೮
ಜಾತಿಯಲ್ಲಿ ಅಧಿಕವೆಂದು ನುಡಿವರು ವಿಪ್ರ ಜನರು–೨೯೭
ತನ್ನ ಗುಣವ ಹೊಗಳಬೇಡ–೨೯೮
ಬ್ರಾಹ್ಮಣ ಮೊದಲಾಗಿ ಶ್ವಪಚ ಕಡೆಯಾಗಿ–೨೯೯
೮೧. **ಹುಂಜಿನ ಕಾಳಗದ ದಾಸಯ್ಯ** ... ೧೮೦
ಹುಂಜ ಸೋತಡೆ ಹಿಡಿವೆ–೩೦೦
೮೨. **ಹೆಂಡದ ಮಾರಯ್ಯ** ... ೧೮೧
ಶಾಸ್ತ್ರ ಮದ ಸಂಪದ ಮದ
ಉಭಯಕೂಡಿಕೊಂಡಾತ್ಮಮದ–೩೦೧

೫೯. **ಮಧುವಯ್ಯ** ... ೧೪೨
ಅರಿವುಳ್ಳವನಂತೆ ಭವದಲ್ಲಿ–೨೨೩
ಅಸಿ ಕೃಷಿ ಮಸಿ ಯಾಚಕ ವಾಣಿಜ್ಯತ್ವವ–೨೨೪
ತನು ನಿರ್ವಾಣ ಮನ ಸಂಸಾರ–೨೨೫
೬೦. **ಮನಸಂದ ಮಾರಿತಂದೆ** ... ೧೪೩
ಖ್ಯಾತಿ ಲಾಭಕ್ಕೆ ಮಾಡುವಾತ ಭಕ್ತನಲ್ಲ–೨೨೬
ಡಂಭಕದ ಪೂಜೆ ಹೋಹ ಹೋತಿನ ಕೇಡು–೨೨೭
ಭಕ್ತರು ನಾವೆಂದು ನಿತ್ಯ ನೇಮವ ಮಾಡಿಕೊಂಡೆವೆಂದು–೨೨೮
ವಾಚಕ ಚಪಳತ್ವದಿಂದ ಮಾತನಾಡಿದಡೇನು–೨೨೯
ವೇದವ ಕಲಿತಲ್ಲಿ ಪಾತಕನಲ್ಲದೆ ಜ್ಞಾನಿಯಲ್ಲ–೨೩೦
೬೧. **ಮಾದಾರ ಧೂಳಯ್ಯ** ... ೧೪೫
ಎನ್ನ ತನುವ ನಿರ್ಮಲ ಮಾಡಿದನಯ್ಯಾ ಬಸವಣ್ಣನು–೨೩೧
ಸತ್ಯ ಶುದ್ಧ ಕಾಯಕವ ಮಾಡಿ ತಂದು–೨೩೨
೬೨. **ಮಾರೇಶ್ವರೊಡೆಯ** ... ೧೪೬
ಅಪ್ಪುವಿನ ಶಿಲೆಯ ಉಳಿಯ ಮೊನೆಯಲ್ಲಿ ಚಿತ್ರಿಸಬಹುದೆ–೨೩೩
ಊರೆಲ್ಲರೂ ನೆರೆದು ಕಳ್ಳನ ಬೆಳ್ಳನೆಂದಡೆ–೨೩೪
೬೩. **ಮುಕ್ತಾಯಕ್ಕ** ... ೧೪೭
ತನ್ನ ತಾನರಿದವಂಗೆ ಅರಿವೆ ಗುರು–೨೩೫
ತೊರೆಯ ಕಟ್ಟೆಯ ಕಟ್ಟಿ ನಿಲಿಸಲುಬಹುದೆ–೨೩೬
ನುಡಿಯಲುಬಾರದು ಕೆಟ್ಟ ನುಡಿಗಳ–೨೩೭
೬೪. **ಮೆರೆಮಿಂಡಯ್ಯ** ... ೧೪೮
ಅಶನದಾಸೆಗಾಗಿ ಆಚಾರವ ತಪ್ಪಿ–೨೩೮
ಅಸಿಯಾಗಲಿ ಕೃಷಿಯಾಗಲಿ–೨೩೯
ಐಶ್ವರ್ಯವುಳ್ಳವಂಗೆ ನಿಜ ಭಕ್ತಿಯಿಲ್ಲ–೨೪೦
ತನ್ನ ತಾನರಿದಡೆ ತನ್ನರಿವೆ ಗುರು–೨೪೧
ನರ ದೇಹವ ತೊಟ್ಟು–೨೪೨
ವ್ರತಭ್ರಷ್ಟನ ಗುರುಘಾತಕನ–೨೪೩
೬೫. **ಮೇದರ ಕೇತಯ್ಯ** ... ೧೫೦
ಎನ್ನ ಕಾಯದ ಕಳವಳವ ನಿಲಿಸಿ–೨೪೪
೬೬. **ಮೈದುನ ರಾಮಯ್ಯ** ... ೧೫೧
ಮಳಲಲ್ಲಿ ರಸ ಉಂಟೆ–೨೪೫
೬೭. **ಮೋಳಿಗೆ ಮಾರಯ್ಯ** ... ೧೫೨
ಅದ್ವೈತವ ಹೇಳುವ ಹಿರಿಯರೆಲ್ಲರೂ–೨೪೬
ಅರಿವ ಕತ್ತಿ ಹರಣದ ಇರವ ಬಲ್ಲುದೆ–೨೪೭

ಆದ್ಯರ ವಚನವ ನೋಡಿ–೨೪೮
ಕದ್ದ ಕಳವ ಮರೆಸಿಕೊಂಡು–೨೪೯
ತಾವು ಸತ್ಯರೆಂದು ನುಡಿಯದಿಪ್ಪುದೆ ಶೀಲ–೨೫೦
ಭೂಮಿಯಲ್ಲಿ ಪೂಜಿಸಿಕೊಂಬ ಅರುಹಿರಿಯರೆಲ್ಲರೂ–೨೫೧
ಮಾತನಳಿವ ಮಾತು ಬಂದಡೆ–೨೫೨
ಮಾತಿಗೆ ಮಾತು ಕೊಟ್ಟು–೨೫೩
ವೇದವ ಕಲಿತು ಶಾಸ್ತ್ರವನೋದಿ–೨೫೪
ಸದ್ಭಕ್ತಿಯೆ ದೈವವೆಂದು ಅರ್ಚಿಸುವ ಠಾವಿನಲ್ಲಿ–೨೫೫
೧೮. ಲದ್ದೆಯ ಸೋಮಯ್ಯ ... ೧೫೬
ಆವ ಕಾಯಕವಾದಡೂ ಸ್ವಕಾಯಕವ ಮಾಡಿ–೨೫೬
೧೯. ಶಂಕರ ದಾಸಿಮಯ್ಯ ... ೧೫೭
ಎನ್ನ ಕಾಯಕ್ಕೆ ಗುರುವಾದನಯ್ಯಾ ಬಸವಣ್ಣನು–೨೫೭
೨೦. ಶಿವಲೆಂಕ ಮಂಚಣ್ಣ ... ೧೫೮
ಗುರು ವೈಭವಕ್ಕೆ ಸಿಕ್ಕಿದಾಗಲೆ–೨೫೮
ಪರಧನವನೊಲ್ಲದಿಪ್ಪುದೆ ವ್ರತ–೨೫೯
ಪರಸ್ತ್ರೀಯರ ಬಿಟ್ಟಾಗಲೆ–೨೬೦
೨೧. ಸಕಳೇಶ ಮಾದರಸ ... ೧೫೯
ಇದಿರೆನ್ನ ಹಳಿವವರು ಮತಿಯ ಬೆಳಗುವರು–೨೬೧
ಎನ್ನ ಮನದಲ್ಲಿ ದಿಟವಿಲ್ಲ ಪೂಜಿಸಿ ಏವೆನು–೨೬೨
ಕಂಡುದ ನುಡಿದಡೆ ಕಡುಪಾಪಿಯೆಂಬರು–೨೬೩
ಜನ ಮೆಚ್ಚೆ ಶುದ್ಧನಲ್ಲದೆ–೨೬೪
೨೨. ಸಗರದ ಬೊಮ್ಮಣ್ಣ ... ೧೬೧
ಗೆಲ್ಲ ಸೋಲ ಬಲ್ಲವರಿಗೇಕೆ–೨೬೫
೨೩. ಸತ್ಯಕ್ಕ ... ೧೬೨
ಅರ್ಚನೆ ಪೂಜನೆ ನೇಮವಲ್ಲ–೨೬೬
ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ–೨೬೭
ಲಂಚವಂಚನಕ್ಕೆ ಕೈಯಾನದ ಭಾಷೆ–೨೬೮
೨೪. ಸಿದ್ಧರಾಮೇಶ್ವರ ... ೧೬೪
ಒಬ್ಬರ ಮನವ ನೋಯಿಸಿ–೨೬೯
ಕುಲವೆಂದು ಹೋರಾಡುವ ಅಣ್ಣಗಳಿರಾ–೨೭೦
ನಡೆನುಡಿಗಳೊಂದಾದವರಿಗೊಲಿವೆ ಕಂಡಯ್ಯ–೨೭೧
ನುಡಿಯಬಹುದೆ ಅದ್ವೈತವನೊಂದು ಕೋಟಿ ವೇಳೆ–೨೭೨
ಪುಣ್ಯವ ಮಾಡಬೇಕೆಂದು ಮರುಗಬೇಡ–೨೭೩
ಮನದ ಮಲಿನವನು ಕಳೆಯಾ ಅಯ್ಯಾ–೨೭೪
ವೇಷದಲ್ಲಿ ಭಕ್ತನಾದಡೇನು–೨೭೫

ಕರೇನಾಯಿಯ ತಂದು ಪೂಜೆಯ ಮಾಡುವುದು
ಮಹಾ ಲೇಸು ಕಂಡಯ್ಯ
ಪಂಚಾಮೃತವ ಮುಂದಿಟ್ಟರೆ ಕಣ್ಣು ನೋಡುವುದು
ದ್ರವ್ಯ ಮುಂದಿಟ್ಟರೆ ಕೈಯು ಮುಟ್ಟುವುದು
ಎಂದು ಪೇಳುವ ವಿರತರ ನಾಲಗೆಯು
ಆ ನಾಯ ಬಾಲಕ್ಕಿಂತಲು ಕರ ಕಷ್ಟವು
ಇಂತಹ ವಿರತರ ಪೂಜೆಯ ಮಾಡುವಾತನು ಆ ಜಂಗಮವು
ಉಭಯತರ ಮೂಗು ಸವರಿ ಕತ್ತೆಯನೇರಿಸಿ ಪಡಿಹಾರಿಕೆಗಳ
ಪಾದುಕೆಯಿಂದ ಪಡಪಡ ಹೊಡಿ ಎಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜ ಶರಣನು. (೧೫)

ಗಾಳಿಯ ಹಡೆದಲ್ಲಿ ತೂರಿಕೊಳ್ಳಯ್ಯಾ
ಗಾಳಿ ನಿನ್ನಾಧೀನವಲ್ಲಯ್ಯಾ
ನಾಳೆ ತೂರಿಹೆನೆಂದಡೆ ಇಲ್ಲಯ್ಯಾ
ಶಿವಶರಣೆಂಬುದೊಂದು ಗಾಳಿಯ ಹಡೆದಲ್ಲಿ
ಬೇಗ ತೂರೆಂದನಂಬಿಗ ಚೌಡಯ್ಯ. (೧೬)

ಜಾತಿ ಭ್ರಮೆ ನೀತಿ ಭ್ರಮೆ
ಎಂಬ ಕರ್ಮಂಗಳನು
ಘಾತಿಸಿ ಕಳೆಯಬಲ್ಲಡಾತ ಯೋಗಿ
ಕ್ಷೇತ್ರ ಭ್ರಮೆ ತೀರ್ಥ ಭ್ರಮೆ ಪಾಷಾಣ ಭ್ರಮೆ
ಎಂಬ ಕರ್ಮಂಗಳನು
ನಿಃಕರಿಸಿ ಕಳೆಯಬಲ್ಲಡಾತ ಯೋಗಿ
ಲೋಕಕ್ಕಂಜಿ ಲೌಕಿಕವ ಮರೆಗೊಂಡು
ನಡೆವಾತ ತೂತಯೋಗಿ
ಎಂದಾತನಂಬಿಗ ಚೌಡಯ್ಯ. (೧೭)

ದೇಹಾರವ ಮಾಡುವಣ್ಣಗಳಿರಾ
ಒಂದು ತುತ್ತು ಆಹಾರವನಿಕ್ಕಿರೆ
ದೇಹಾರಕ್ಕೆ ಆಹಾರವೆ ನಿಚ್ಚಣಿಕೆ

ದೇಹಾರವ ಮಾಡುತ್ತ ಆಹಾರವನಿಕ್ಕದಿರ್ದಡೆ
ಆ ಹರನಿಲ್ಲೆಂದನಂಬಿಗ ಚೌಡಯ್ಯ. (೧೮)

ನೇಮಸ್ಥನೆಂಬವ ಕ್ರೂರಕರ್ಮಿ
ಶೀಲವಂತನೆಂಬವ ಸಂದೇಹಧಾರಿ
ಭಾಷೆವಂತನೆಂಬವ ಬ್ರಹ್ಮೇತಿಕಾರ
ಇವರು ಮೂವರು ಕುಳ್ಳಿರ್ದಲ್ಲಿ ಕುಳ್ಳಿರಲಾಗದು
ಇವರು ಹೋದ ಬಟ್ಟೆಯ ಹೊಗಲಾಗದು
ಇವರು ಮೂವರಿಗೂ ಗುರುವಿಲ್ಲ
ಲಿಂಗವಿಲ್ಲೆಂದಾತನಂಬಿಗ ಚೌಡಯ್ಯ. (೧೯)

ಬರೆದು ಓದಿಸುವ ಆಕರಿಗಳೆಲ್ಲ
ನೀವು ಕೇಳಿರೋ
ತರ್ಕ ವ್ಯಾಕರಣ ಛಂದಸ್ಸು ನಿಘಂಟು
ವೇದಶಾಸ್ತ್ರವನೋದಿ ಕೇಳಿ
ಗಂಗೆಗೆ ಹರಿವವರನೇನೆಂಬೆ
ಪರವಧುವೆಂಬುದನರಿಯಿರಲ್ಲಾ
ನೆರೆದಿರ್ದ ಪಾಪವ ಹೊನಲಿನಲ್ಲಿ ಕಳೆದೆನೆಂಬ
ಅಣ್ಣಗಳ ಬೆಡಗು ಬೇಡೆಂದಾತನಂಬಿಗ ಚೌಡಯ್ಯ. (೨೦)

ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಕೊರಳಿಗೆ ಕವಡೆಯ ಕಟ್ಟಿ ನಾಯಾಗಿ ಬೊಗಳುವರು
ಅದಾವ ವಿಚಾರವಯ್ಯ
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಬೇವಿನುಡಿಗೆಯನುಟ್ಟು ಹಡಲಿಗೆಯ ಹೊತ್ತು
ಉಧೋ ಉಧೋ ಎಂಬರು
ಅದಾವ ವಿಚಾರವಯ್ಯ
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಹಗ್ಗಹುರಿ ಬೆನ್ನಸಿಡಿ ಬಾಯಬೀಗದಲ್ಲಿ ಹೋಗುವರು
ಅದಾವ ವಿಚಾರವಯ್ಯ
ಇಂಥ ಭವಿಮಾರ್ಗದಲ್ಲಿ ಚರಿಸುವ

ಶಿವದ್ರೋಹಿಗಳಿಗೆ ಲಿಂಗಧಾರಣವ ಮಾಡುವನೊಬ್ಬ ಗುರುದ್ರೋಹಿ
ಅವರಿಗೆ ಚರಣೋದಕವ ತಾ ಧರಿಸುವ ವಿಭೂತಿ ರುದ್ರಾಕ್ಷಿಯ
ಕೊಡುವನೊಬ್ಬ ಲಿಂಗದ್ರೋಹಿ
ಅವನು ಭಕ್ತನೆಂದು
ಅವನ ಮನೆಯ ಹೊಕ್ಕು ಮಂತ್ರವ ಹೇಳಿ
ಅನ್ನವ ತಿಂದವನೊಬ್ಬ ಜಂಗಮದ್ರೋಹಿ
ಇಂತೀ ನಾಲ್ವರಿಗೆ ಸೂರ್ಯಚಂದ್ರರುಳ್ಳನ್ನಕ್ಕ
ಎಕ್ಕಲಕೊಂಡದಲ್ಲಿಕ್ಕದೆ ಮಾಣ್ಬನೆ ಅಂಬಿಗರ ಚೌಡಯ್ಯನು. (೨೧)

ಮಾತುಗಂಟಿತನದಿಂದ ಎಷ್ಟು ಮಾತನಾಡಿದಡೇನು
ಕಾಮಿನಿಯರ ಕಾಲದೆಸೆ ಸಿಕ್ಕಿ
ಕ್ರೋಧದ ದಳ್ಳುರಿಯಲ್ಲಿ ಬೆಂದು
ಆಸೆಯೆಂಬ ಪಾಶ ಕೊರಳಲ್ಲಿ ಸುತ್ತಿ
ಅದೇಕೊ ಅದೇತರ ಮಾತೆಂದನಂಬಿಗ ಚೌಡಯ್ಯ. (೨೨)

ವೇದದಲುಳ್ಳಡೆ ಪ್ರಾಣಿವಧೆಯಪ್ಪುದೆ
ಶಾಸ್ತ್ರದಲುಳ್ಳಡೆ ಸಮಯವಾದವಪ್ಪುದೆ
ಪರ್ವತದಲುಳ್ಳಡೆ ಹೋದವರು ಬಹರೆ
ನಿರ್ಬುದ್ಧಿ ಮಾನವರನೇನೆಂಬೆ
ಮನ ವಚನ ಕಾಯಶುದ್ಧಿಯಾಗಿಪ್ಪಾತನ ಹೃದಯದಲಿ
ನಿಮ್ಮ ಕಂಡೆನೆಂದನಂಬಿಗ ಚೌಡಯ್ಯ. (೨೩)

ವೇದವನೋದಿದವರು ವಿಧಿಗೊಳಗಾದರಲ್ಲದೆ
ದೇವರಿಹ ಠಾವನರಿದಿಪ್ಪುದಿಲ್ಲ
ಶಾಸ್ತ್ರವನೋದಿದವರು ಸಂಶಯಕ್ಕೊಳಗಾದವರಲ್ಲದೆ
ಸದ್ಗುರುವನರಿದುದಿಲ್ಲ
ಆಗಮವನೋದಿದವರೆಲ್ಲರು ಆಗುಚೇಗಿಗೆ ಒಳಗಾದರಲ್ಲದೆ
ಆದಿ ಅನಾದಿಯಿಂದತ್ತಣ ಶರಣ ಲಿಂಗ ಸಂಬಂಧವನರಿದುದಿಲ್ಲ
ಪುರಾಣವನೋದಿದವರೆಲ್ಲರು ಪೂರ್ವದ ಬಟ್ಟೆಗೊಳಗಾದವರಲ್ಲದೆ
ಪೂರ್ವದ ಕರ್ಮವ ಹರಿದು ಪುರಾತನರನರಿದುದಿಲ್ಲ

ಇಂತಿವರೆಲ್ಲರು ಚರಶೇಷವ ಲಿಂಗಕ್ಕರ್ಪಿಸಲರಿಯರಾಗಿ
ಇವರಿಗೆ ಲಿಂಗವು ಕಾಣಿಸದೆಂದಾತ
ನಮ್ಮ ಅಂಬಿಗರ ಚೌಡಯ್ಯ. (೨೪)

ಸಮಯವ ಮಾಡಿ
ಹಣವ ತೆಗೆಯಲೇತಕ್ಕೆ
ಆಚಾರಕ್ಕೂ ಹಣದಾಸೆಗೂ ಸರಿಯೆ
ಎಂದನಂಬಿಗ ಚೌಡಯ್ಯ. (೨೫)

ಸ್ವಲ್ಪ ಅಮೃತಾನ್ನವನೊಯ್ದು
ಹುತ್ತವೆಂದು ಬಿಲದ್ವಾರದಲ್ಲಿ ಹೊಯ್ವ
ತೊತ್ತಿಂಗೆಲ್ಲಿಯದೊ ಶಿವಾಚಾರ
ಅದೆಂತೆಂದಡೆ
ಕಲ್ಲನಾಗರ ಕಂಡಡೆ ಹಾಲು ಹೊಯ್ಯೆಂಬಳು
ಬದುಕಿದ ನಾಗರ ಕಂಡಡೆ ಕೊಲ್ಲು ಕೊಲ್ಲೆಂಬಳು
ಉಂಬ ದೇವರು ಬಂದಡೆ ಇಲ್ಲವೆಂದಟ್ಟುವಳು
ಉಣ್ಣದ ಕಲ್ಲು ಪ್ರತಿಮೆಯ ಮುಂದಿಟ್ಟು ಉಣ್ಣೆಂಬಳು
ಇಂತಹ ವೇಷದ ಡಂಬ ತೊತ್ತಿಂಗೆ
ವಿಚಾರಿಸದೆ ಲಿಂಗವ ಕೊಡಲಾಗದೆಂದಾತನಂಬಿಗ ಚೌಡಯ್ಯ. (೨೬)

ಹೊಡವಡಲೇಕೆ ಹಿಡಿದು ಪೂಜಿಸಲೇಕೆ
ಎಡೆಯಾಡಲೇಕೆ ದೇಗುಲಕ್ಕಯ್ಯಾ
ಬಡವರಂಧಕರಿಂಗೆ ಒಡಲಿಗನ್ನವನಿಕ್ಕಿದಡೆ
ಹೊಡವಂಟನಾದ ಮೂರು ಲೋಕಕ್ಕೆ
ಬಡವರಂಧಕರಿಗೆ ಒಡಲಿಗನ್ನವನಿಕ್ಕದಿದ್ದರೆ
ಹೊಡೆವಡಲಿಕೆ ಹುರುಳಿಲ್ಲವೆಂದನಂಬಿಗ ಚೌಡಯ್ಯ. (೨೭)

ಅಕ್ಕಮ್ಮ

ಅಂಕಿತನಾಮ : ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ
ದೊರೆತಿರುವ ವಚನಗಳು : ೧೫೫

ಅಕ್ಕಿ ಬೇಳೆ ಬೆಲ್ಲ ಉಪ್ಪು ಮೆಣಸು
ಅಡಕೆ ಫಲ ರಸ ದ್ರವ್ಯ ಮುಂತಾದ ದ್ರವ್ಯಕ್ಕೆ ವ್ರತವೊ
ಮುಟ್ಟುವ ತಟ್ಟುವ ಸೋಂಕುವ ಚಿತ್ತಕ್ಕೆ ವ್ರತವೊ
ಇವು ಬಾಹ್ಯದಲ್ಲಿ ಮಾಡುವ ಸೌಕರಿಯವಲ್ಲದೆ ವ್ರತಕ್ಕೆ ಸಲ್ಲ
ವ್ರತವಾವುದೆಂದಡೆ
ತನ್ನಯ ಸ್ವಪ್ನದಲ್ಲಿ ತನಗಲ್ಲದುದ ಕಂಡಡೆ
ತಾ ಮುಟ್ಟದುದ ಮುಟ್ಟಿದಡೆ
ತಾ ಕೊಳ್ಳದುದ ಕೊಂಡಡೆ
ಆ ಸೂಕ್ಷ್ಮ ತನುವಿನಲ್ಲಿ ಆ ತನುವಂ ಬಿಟ್ಟು ನಿಂದುದು ವ್ರತ
ಸ್ಥೂಲ ತನುವಿನಲ್ಲಿ ಸರ್ವರ ನಿಂದೆಗೊಡಲಾಗದೆ
ಮಾಡಿಕೊಂಡ ನೇಮಕ್ಕೆ ಕೇಡುಬಂದಲ್ಲಿ
ಆ ಅಂಗಕ್ಕೆ ಓಸರಿಸದೆ ನಿಂದುದು ಆಚಾರ
ಇಂತೀ ಅಂತರಂಗದಲ್ಲಿ ವ್ರತ
ಬಹಿರಂಗದಲ್ಲಿ ಆಚಾರ
ಇಂತೀ ಉಭಯ ಸಿದ್ಧವಾಗಿ ನಡೆವುದೆ ವ್ರತ ಆಚಾರ
ಇಂತಿವನರಿದು ಮರೆದಲ್ಲಿ
ತಾ ಮಾಡಿಕೊಂಡ ಕುತ್ತಕ್ಕೆ ಹಾಡಿ ಮದ್ದನರೆದಂತೆ
ಜಗಕ್ಕೆ ಭಕ್ತನಾಗಿ ಆತ್ಮಂಗೆ ಅನುಸರಣೆಯಾದಲ್ಲಿ
ಆಚಾರವೆ ಪ್ರಾಣವಾದ
ರಾಮೇಶ್ವರಲಿಂಗಕ್ಕೆ ಸಲ್ಲದ ನೇಮ. (೨೮)

ಗುರುವಾದಡೂ ಆಚಾರ ಭ್ರಷ್ಟನಾದಡೆ ಅನುಸರಿಸಲಾಗದು
ಲಿಂಗವಾದಡೂ ಆಚಾರ ದೋಹಳವಾದಲ್ಲಿ ಪೂಜಿಸಲಾಗದು
ಜಂಗಮವಾದಡೂ ಆಚಾರ ಅನುಸರಣೆಯಾಗದಲ್ಲಿ ಕೂಡಲಾಗದು
ಆಚಾರವೆ ವಸ್ತು ವ್ರತವೆ ಪ್ರಾಣ

ಕ್ರಿಯೆಯೆ ಜ್ಞಾನ ಜ್ಞಾನವೆ ಆಚಾರ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವು ತಾನೆ. (೨೯)

ಚಿನ್ನ ಒಡೆದಡೆ ಕರಗಿದಡೆ ರೂಪಪ್ಪುದಲ್ಲದೆ
ಮುತ್ತು ಒಡೆದು ಕರಗಿದಡೆ ರೂಪಪ್ಪುದೆ
ಮರ್ತ್ಯದ ಮನುಜ ತಪ್ಪಿದರೊಪ್ಪಬೇಕಲ್ಲದೆ
ಸದ್ಭಕ್ತ ಸದೈವ ತಪ್ಪಿದಡೆ ಒಪ್ಪಬಹುದೆ
ಆಚಾರಕ್ಕು ಅಪಮಾನಕ್ಕು ಅಂಗವೆ ಕಡೆಯಲ್ಲದೆ
ಬೇರೊಂದಂಗವ ಮಾಡಿ ಗುರುಲಿಂಗಜಂಗಮದ ಮುಖದಿಂದ
ಶುದ್ಧವೆಂದು ತಂದು ಕೂಡಿಕೊಳಬಹುದೆ
ಲಿಂಗಬಾಹ್ಯನ ಆಚಾರ ಭ್ರಷ್ಟನ ಜಂಗಮವ ಕೊಂದವನ
ಇವರುವ ಕಂಡು ನುಡಿದಡೆ ಕುಂಭೀಪಾತಕಕ್ಕೆ ಒಳಗು
ಇದಕ್ಕೆ ಸಂದೇಹವಿಲ್ಲ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದ ಆಣತಿ. (೩೦)

ಬಸವಣ್ಣ ಚೆನ್ನಬಸವಣ್ಣ ಪ್ರಭು ವೀರಮಡಿವಳ ನಿಜಗುಣಯೋಗಿ
ಸಿದ್ಧರಾಮ ಮೋಳಿಗೆಯಯ್ಯ ಆಯ್ದಕ್ಕಿಯ ಮಾರಯ್ಯ ಏಕಾಂತರಾಮಯ್ಯ
ಅಜಗಣ್ಣ ಶಕ್ತಿ ಮುಕ್ತಿ ಮಹಾದೇವಿಯಕ್ಕ ಮುಂತಾದ
ಏಳುನೂರೆಪ್ಪತ್ತು ಅಮರಗಣಂಗಳು ಕೊಟ್ಟ ವ್ರತ ಪ್ರಸಾದ
ಆ ಪ್ರಸಾದ ಎನಗೆ ಪ್ರಸನ್ನ
ನಿಮಗೆ ಮರ್ತ್ಯದ ಮಣಿಹ ಹಿಂಗುವನ್ನಕ್ಕ
ಎನ್ನ ವ್ರತದಲ್ಲಿ ಎನ್ನ ಆಚಾರದಲ್ಲಿ ನಾ ಹಿಡಿದ ನೇಮದಲ್ಲಿ
ಭಾಷೆಯಲ್ಲಿ ನಾ ತಪ್ಪಿದಡೆ
ತಪ್ಪ ಹೊತ್ತಲ್ಲಿ ನಿಮ್ಮ ಕೇಳಿದಡೆ
ನಾ ಸತ್ತಿಹೆನೆಂದು ಕೂಡಿದಡೆ
ಮತ್ತೆ ಶಸ್ತ್ರ ಸಮಾಧಿ ನೀರು ನೇಣು ವಿಷ ಔಷಧಿಯಿಂದ ಘಟವ ಬಿಟ್ಟಡೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ
ಕ್ರೀ ಭಿನ್ನಚಿಹ್ನದೋರದಲ್ಲಿಯೆ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗ ನಿನ್ನಲ್ಲಿಯೆ ಲೀಯ. (೩೧)

ಮಾಡಿ ನೀಡುವ ಭಕ್ತನನರಸಿಕೊಂಡು ಹೋಗಿ
ಗಡ್ಡ ಮಂಡೆ ಬೋಳಿನ ಕುರುಹ ತೋರಿ
ಬಲ್ಲವರಂತೆ ಅಧ್ಯಾತ್ಮವ ನುಡಿದು
ಉಪಾಧಿಯಿಂದ ಒಡಲ ಹೊರೆವಾತ
ವಿರಕ್ತನೆ ಅಲ್ಲ
ವಿರಕ್ತನ ಪರಿ ಎಂತೆಂದಡೆ
ಆಚಾರ ಸಹಿತವಾಗಿ ಭಕ್ತಿ ಭಿಕ್ಷವ ತೆಗೆದುಕೊಂಡು
ಉಪಾಧಿರಹಿತವಾಗಿಪ್ಪ ವಿರಕ್ತನ ತೋರಿ ಬದುಕಿಸಯ್ಯಾ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವೆ. (೩೨)

ವ್ರತವನಾಶ್ರಯಿಸಿದ
ಮತ್ತೆ ಹುಸಿ ನುಸುಳು ಕೊಲೆ ಕಳವು
ಪಾರದ್ವಾರವ ಮಾಡುವನ್ನಬರ
ವ್ರತಸ್ಥನಲ್ಲ ನೇಮಕ್ಕೆ ಸಲ್ಲ ಅವಂಗಾಚಾರವಿಲ್ಲ
ಅವ ರಾಜನೆಂದು ದ್ರವ್ಯದಾಸೆಗಾಗಿ
ಅವನ ಮನೆಯ ಹೊಕ್ಕು
ವಿಭೂತಿ ವೀಳೆಯ ಮೊದಲಾದ ಉಪಚಾರಕ್ಕೊಳಗಾದವ
ಸತ್ತ ಕುಕ್ಕುರನ ಕೀಟಕ ತಿಂದು
ಅದು ಸತ್ತಡೆ ತಾ ತಿಂದಂತೆ
ಪಂಚಾಚಾರ ಶುದ್ಧಕ್ಕೆ ಹೊರಗು
ಆಚಾರವೆ ಪ್ರಾಣವಾಗಿಪ್ಪ ರಾಮೇಶ್ವರಲಿಂಗಕ್ಕೆ
ಮುನ್ನವೆ ಹೊರಗು. (೩೩)

ವ್ರತವೆಂಬುದೇನು
ಮನ ವಿಕಾರಿಸುವುದಕ್ಕೆ ಕಟ್ಟಿದ ಗೊತ್ತು
ಜಗದ ಕಾಮಿಯಂತೆ ಕಾಮಿಸದೆ
ಜಗದ ಕ್ರೋಧಿಯಂತೆ ಕ್ರೋಧಿಸದೆ
ಜಗದ ಲೋಭಿಯಂತೆ ಲೋಭಿಸದೆ
ಮಾಯಾ ಮೋಹಂಗಳು ವರ್ಜಿತವಾಗಿ
ಮನ ಬಂದಂತೆ ಆಡದೆ

ತನು ಬಂದಂತೆ ಕೂಡದೆ
ವ್ರತದಂಗಕ್ಕೆ ಸಂಗವಾಗಿ ನಿಂದ ಸದ್ಭಕ್ತನ ಅಂಗವೆ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಂಗ. (೩೪)

ಹೋತಿನ ಗಡ್ಡದಂತೆ ಗಡ್ಡದ ಹಿರಿಯರ ನೋಡಾ
ಬಿಡಾರ ಬಿಡಾರವೆಂದು ಹಿರಿಯತನಕ್ಕೆ ಅಹಂಕರಿಸಿ
ಆಚಾರವಂ ಬಿಟ್ಟು ಅನಾಚಾರವಂ ಸಂಗ್ರಹಿಸಿ
ಭಕ್ತರೊಳು ಕ್ರೋಧ ಭ್ರಷ್ಟರೊಳು ಮೇಳ
ಇವರು ನರಕಕ್ಕೆ ಯೋಗ್ಯರು
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ. (೩೫)

ಅಘ್ಘವಣಿ ಹಂಪಯ್ಯ

ಊರು	:	ಮುಕುಂದಪುರ
ಕಸುಬು	:	ಅಘ್ಘವಣಿಯನ್ನು ಹೊತ್ತು ತಂದು ಭಕ್ತರಿಗೆ ಪೂರೈಸುವುದು. ಅಘ್ಘವಣಿ=ದೇವರ ವಿಗ್ರಹಗಳನ್ನು ತೊಳೆಯಲು ಬಳಸುವ ನೀರು.
ಅಂಕಿತನಾಮ	:	ಹಂಪೆಯ ವಿರುಪಯ್ಯ
ದೊರೆತಿರುವ ವಚನಗಳು	:	೪

ಹುಸಿಯ ನುಡಿಯನು ಭಕ್ತ
ವ್ಯಸನಕ್ಕೆಳಸನು ಭಕ್ತ
ವಿಷಯಂಗಳಾತಂಗೆ ತೃಣವು ನೋಡಾ
ಬಯಸುವವನಲ್ಲ ಭಕ್ತ
ದಯೆಯೆಂಬುದು ತನ್ನ ಕೈಯಲ್ಲಿ
ಸ್ಮರಣೆಯೆಂಬುದು ತನಗೆ ತೊತ್ತಾಗಿಪ್ಪುದು
ಕೋಪವೆಂಥದೆಂದರಿಯ ತಾಪತ್ರಯಂಗಳು ಮುಟ್ಟಲಮ್ಮವು
ವ್ಯಾಪ್ತಿಗಳಡಗಿದವು
ಲಿಂಗವನೊಳಕೊಂಡ ಪರಿಣಾಮಿ
ಆತನ ಪಥ ಲೋಕಕ್ಕೆ ಹೊಸತು
ಲೋಕದ ಪಥವಾತನಿಗೆ ಹೊಸತು
ತನಗೊಮ್ಮೆಯು ಲಿಂಗಧ್ಯಾನ
ಲಿಂಗಕೊಮ್ಮೆಯು ತನ್ನ ಧ್ಯಾನ
ಘನಘನಮಹಿಮೆಯ ಹೊಗಳಲೆನ್ನಳವಲ್ಲ
ಪನ್ನಗಧರ ಕೇಳಯ್ಯಾ ಚೆನ್ನ ಹಂಪೆಯ ವಿರುಪಯ್ಯಾ
ನಿಮ್ಮ ನಂಬಿದ ಸತ್ಯಶರಣ ಪರಿಣಾಮಿ. (೩೬)

೦

ಅಜಗಣ್ಣತಂದೆ

ಊರು : ಲಕ್ಕುಂಡಿ
ತಂಗಿ : ಮುಕ್ತಾಯಕ್ಕ
ಅಂಕಿತನಾಮ : ಮಹಾಘನ ಸೋಮೇಶ್ವರ
ದೊರೆತಿರುವ ವಚನಗಳು : ೧೦

ಗುರುಲಿಂಗದ ಕೃಪೆಯಿಂದ
ಸಜ್ಜನ ಶರಣರ ಸಂಗಸುಖವ ಕಂಡೆ
ಏನೆಂದುಪಮಿಸುವೆನಯ್ಯಾ
ಗುರುಲಿಂಗದ ಮಹಿಮೆಯನು
ಮಹಾಘನ ಸೋಮೇಶ್ವರನೆಂಬ ಗುರುಲಿಂಗವ ತೋರಿದನಾಗಿ. (೩೭)

ಅಮುಗಿ ದೇವಯ್ಯ

ಊರು : ಹುಟ್ಟಿದ ಊರು ಸೊನ್ನಲಿಗೆ/ಸೊನ್ನಲಾಪುರ. ಅನಂತರ ಬಸವಣ್ಣನವರು ಇದ್ದ ಕಲ್ಯಾಣ ಪಟ್ಟಣಕ್ಕೆ ಬಂದು ನೆಲೆಸಿದರು.

ಹೆಂಡತಿ : ಅಮುಗೆ ರಾಯಮ್ಮ

ಕಸುಬು : ನೆಯ್ಗೆ/ನೂಲಿನಿಂದ ಬಟ್ಟೆಯನ್ನು ನೇಯುವುದು.

ಅಂಕಿತನಾಮ : ಸಿದ್ಧ ಸೋಮನಾಥಲಿಂಗ

ದೊರೆತಿರುವ ವಚನಗಳು : ೩೧

ಕಕ್ಕಯ್ಯನ ಪ್ರಸಾದವ ಕೊಂಡೆನ್ನ
ಕುಲಸೂತಕ ಹೋಯಿತ್ತಯ್ಯಾ
ಚೆನ್ನಯ್ಯನ ಪ್ರಸಾದವ ಕೊಂಡೆನ್ನ
ಛಲಸೂತಕ ಹೋಯಿತ್ತಯ್ಯಾ
ದಾಸಯ್ಯನ ಪ್ರಸಾದವ ಕೊಂಡೆನ್ನ
ತನುಸೂತಕ ಹೋಯಿತ್ತಯ್ಯಾ
ಚಂದಯ್ಯನ ಪ್ರಸಾದವ ಕೊಂಡೆನ್ನ
ಮನಸೂತಕ ಹೋಯಿತ್ತಯ್ಯಾ
ತೆಲುಗ ಜೊಮ್ಮಯ್ಯನ ಪ್ರಸಾದವ ಕೊಂಡೆನ್ನ
ನೆನಹುಸೂತಕ ಹೋಯಿತ್ತಯ್ಯಾ
ಬಿಬ್ಬ ಬಾಚಯ್ಯನ ಪ್ರಸಾದವ ಕೊಂಡೆನ್ನ
ಭಾವಸೂತಕ ಹೋಯಿತಯ್ಯಾ
ಮೋಳಿಗಯ್ಯನ ಪ್ರಸಾದವ ಕೊಂಡೆನ್ನ
ಜನನಸೂತಕ ಹೋಯಿತ್ತಯ್ಯಾ
ಕೋಲ ಶಾಂತಯ್ಯನ ಪ್ರಸಾದವ ಕೊಂಡೆನ್ನಂತರಂಗದ
ಸೂತಕ ಹೋಯಿತ್ತಯ್ಯಾ,
ಮೇದಾರ ಕೇತಯ್ಯನ ಪ್ರಸಾದವ ಕೊಂಡೆನ್ನ
ಬಹಿರಂಗದ ಸೂತಕ ಹೋಯಿತ್ತಯ್ಯಾ
ಘಟ್ಟಿವಾಳಯ್ಯನ ಪ್ರಸಾದವ ಕೊಂಡೆನ್ನ

ಸರ್ವಾಂಗದ ಸೂತಕ ಹೋಯಿತ್ತಯ್ಯಾ
ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು ಮಡಿವಾಳಯ್ಯ ಸಿದ್ಧರಾಮಯ್ಯ
ಸೊಡ್ಡಳ ಬಾಚರಸರು ಹಡಪದಪ್ಪಣ್ಣ ಶಂಕರ ದಾಸಿಮಯ್ಯ
ಹೆಂಡದ ಮಾರಯ್ಯಾ ಗಾಣದ ಕಣ್ಣಪ್ಪಯ್ಯ ಕೈಕೂಲಿ ಚಾಮಯ್ಯ
ಬಹುರೂಪಿ ಚೌಡಯ್ಯ ಕಲಕೇತ ಬ್ರಹ್ಮಯ್ಯ ಮೊದಲಾದ
ಶಿವಗಣಂಗಳ ಪರಮಪ್ರಸಾದವ ಕೊಂಡು ಬದುಕಿದೆನಯ್ಯಾ
ಮಹಾಘನ ಸದ್ಗುರು ಸಿದ್ಧಸೋಮನಾಥಲಿಂಗವೆ
ನಿಮ್ಮ ಧರ್ಮ ನಿಮ್ಮ ಧರ್ಮ. (೩೮)

ಜ್ಞಾನದಲರಿದಡೇನಯ್ಯ
ಕ್ರಿಯನಾಚರಿಸದನ್ನಕ್ಕ
ನೆನೆದ ಮಾತ್ರದಲ್ಲಿ ಅಹುದೆ
ಕಾರ್ಯದಲಲ್ಲದೆ
ಕುರುಡ ಕಾಣ ಪಥವ
ಹೆಳವ ನಡೆಯಲರಿಯ
ಒಂದಿಲ್ಲದಿರ್ದಡೊಂದಾಗದು
ಜ್ಞಾನವಿಲ್ಲದಿರ್ದ ಕ್ರಿ ಜಡನು
ಕ್ರಿಯಿಲ್ಲದ ಜ್ಞಾನ ವಾಗ್ಜಾಲ ಭ್ರಾಂತು
ಇದು ಕಾರಣ
ಸಿದ್ಧಸೋಮನಾಥಲಿಂಗವ ಕೂಡುವ ಶರಣಂಗೆ ಎರಡೂ ಬೇಕು. (೩೯)

ಶಿವನ ನೆನೆದಡೆ ಭವ ಹಿಂಗೂದೆಂಬ
ವಿವರಗೇಡಿಗಳ ಮಾತ ಕೇಳಲಾಗದು
ಹೇಳದಿರಯ್ಯಾ ಜ್ಯೋತಿಯ ನೆನೆದಡೆ ಕತ್ತಲೆ ಕೆಡುವುದೆ
ಇಷ್ಟಾನ್ನವ ನೆನೆದಡೆ ಹೊಟ್ಟೆ ತುಂಬುವುದೆ
ರಂಭೆಯ ನೆನೆದಡೆ ಕಾಮದ ಕಳವಳವಡಗುವುದೆ ಅಯ್ಯಾ
ನೆನೆದರಾಗದು
ನಿಜದಲ್ಲಿ ನಿರ್ಧರಿಸಿ ತಾನು ತಾನಾಗದನ್ನಕ್ಕರ
ಸದ್ಗುರು ಸಿದ್ಧಸೋಮನಾಥಲಿಂಗನ ನೆನೆಯಬಾರದು. (೪೦)

ಅಮುಗೆ ರಾಯಮ್ಮ

ಗಂಡ : ಅಮುಗಿ ದೇವಯ್ಯ
ಕಸುಬು : ನೆಯ್ಗೆ/ನೂಲಿನಿಂದ ಬಟ್ಟೆ ನೇಯುವುದು.
ಅಂಕಿತನಾಮ : ಅಮುಗೇಶ್ವರ/ಅಮುಗೇಶ್ವರಲಿಂಗ
ದೊರೆತಿರುವ ವಚನಗಳು : ೧೧೬

ಆಸೆಯುಳ್ಳವಂಗೆ ಮಾಟಕೂಟವಲ್ಲದೆ
ನಿರಾಸೆಯುಳ್ಳವಂಗೆ ಮಾಟಕೂಟವೇಕೆ
ಮನಪರಿಣಾಮಿಗೆ ಮತ್ಸರವೇಕೆ
ಸುತ್ತಿದ ಮಾಯಾ ಪ್ರಪಂಚವ ಜರಿದವಂಗೆ
ಅಂಗನೆಯರ ಹಿಂದು ಮುಂದೆ ತಿರುಗಲೇಕೆ
ಅಮುಗೇಶ್ವರನೆಂಬ ಲಿಂಗವನರಿದವಂಗೆ
ಅಷ್ಟವಿಧಾರ್ಚನೆ ಷೋಡಶೋಪಚಾರದ ಹಂಗೇಕೆ. (೪೧)

ಎನ್ನ ಕಣ್ಣೊಳಗಣ ಕಟ್ಟಿಗೆಯ
ಮುರಿವವರನಾರನೂ ಕಾಣೆ
ಎನ್ನ ಕಾಲೊಳಗಣ ಮುಳ್ಳ
ತೆಗೆವವರನಾರನೂ ಕಾಣೆ
ಎನ್ನ ಅಂಗದಲ್ಲಿದ್ದ ಅಹಂಕಾರವ
ಸುಡುವವರನಾರನೂ ಕಾಣೆ
ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚುವ
ಕೆಡಿಸುವವರನಾರನೂ ಕಾಣೆನಯ್ಯಾ
ಆದ್ಯರ ವೇದ್ಯರ ವಚನಂಗಳಿಂದ
ಅರಿದೆವೆಂಬವರು ಅರಿಯಲಾರರು ನೋಡಾ

ಎನ್ನ ಕಣ್ಣೊಳಗಣ ಕಟ್ಟಿಗೆಯ
ನಾನೆ ಮುರಿಯಬೇಕು
ಎನ್ನ ಕಾಲೊಳಗಣ ಮುಳ್ಳ
ನಾನೆ ತೆಗೆಯಬೇಕು

ಎನ್ನ ಅಂಗದಲ್ಲಿಪ್ಪ ಅಹಂಕಾರವ
ನಾನೆ ಸುಡಬೇಕು
ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚವ
ನಾನೆ ಕಳೆಯಬೇಕು
ಅಮುಗೇಶ್ವರಲಿಂಗವ ನಾನೆ ಅರಿಯಬೇಕು. (೪೨)

ಒಡೆಯರ ಕಂಡಡೆ
ಬಡಿವುದಯ್ಯಾ ಬಾಲವನು ಸುನಿ
ಕೊಡುವ ಕೊಂಬುವರ ಕಂಡು
ಅವರಡಿಗೆರಗುವರಯ್ಯಾ
ಮೃಡನ ವೇಷವ ತೊಟ್ಟು
ಕುರಿಗಳಂತೆ ತಿರುಗುವ ಜಡಜೀವಿಗಳ ಕಂಡಡೆ
ಮೃಡನ ಶರಣರು ಮೋರೆಯನೆತ್ತಿ ನೋಡರು
ಕಾಣಾ ಅಮುಗೇಶ್ವರಾ. (೪೩)

ಕನ್ನವನಿಕ್ಕುವ ಕಳ್ಳನು
ಕನ್ನಗಳ್ಳನೆಂದು ಉಸುರುವನೆ
ಅನ್ಯರ ಕೂಡೆ ಬಣ್ಣ ಬಚ್ಚಣೆಯ ಮಾತಾಡುವ
ಅಣ್ಣ ಅಪ್ಪ ಎಂಬ ಕುನ್ನಿಗಳ
ಮೆಚ್ಚುವನೆ ಅಮುಗೇಶ್ವರಲಿಂಗವು. (೪೪)

ಕಾವಿ ಕಾಷಾಂಬರವ ಹೊದ್ದು
ಕಾಮವಿಕಾರಕ್ಕೆ ತಿರುಗುವ
ಕರ್ಮಿಗಳ ಮುಖವ ನೋಡಲಾಗದು
ಜಂಗಮವಾಗಿ ಜಗದಿಚ್ಛೆಯ ನುಡಿವ
ಜಂಗುಳಿಗಳ ಮುಖವ ನೋಡಲಾಗದು
ಲಿಂಗೈಕ್ಯರೆನಿಸಿಕೊಂಡು ಅಂಗವಿಕಾರಕ್ಕೆ ತಿರುಗುವ
ಲಿಂಗದ್ರೋಹಿಗಳ ಮುಖವ ನೋಡಲಾಗದು
ಕಾಣಾ ಅಮುಗೇಶ್ವರಲಿಂಗವೆ. (೪೫)

ಮಂಡೆ ಬೋಳಾಗಿ ತುಂಡುಗಂಬಳಿ ಹೊದ್ದ ಬಳಿಕ
ಅಂದಚಂದಗಳೇಕೆ
ಖಂಡಿತನೆ ಕಂಡಕಂಡವರ ಮನಮೆಚ್ಚುವಂತೆ
ಅಂದಚಂದಗಳೇಕೆ
ಮಂಡೆ ಬೋಳಾದಡೆ ಮಹಾನುಭಾವಿಗಳು
ಮೆಚ್ಚುವಂತೆ ಇರಬೇಕು
ಕಾಣಾ ಅಮುಗೇಶ್ವರಾ. (೪೬)

ಶೀಲವಂತನಾದಡೆ ಜಾತಿಯ ಬಿಡಬೇಕು
ಶಿವಜ್ಞಾನಿಯಾದಡೆ ಸಮಯವ ಬಿಡಬೇಕು
ಹೀಂಗಲ್ಲದೆ ಜಗದಲ್ಲಿ ನಡೆವ ಭ್ರಾಂತರ ಸುದ್ದಿಯೇಕೆ
ನಿಭ್ರಾಂತನಾದ ಶರಣಂಗೆ ಅಮುಗೇಶ್ವರಾ. (೪೭)

ಹೊನ್ನ ಬಿಟ್ಟಡೇನು ಹೆಣ್ಣ ಬಿಟ್ಟಡೇನು ಮಣ್ಣ ಬಿಟ್ಟಡೇನು
ವಿರಕ್ತನಾಗಬಲ್ಲನೆ
ಆದ್ಯರ ವಚನಂಗಳ ಹತ್ತುಸಾವಿರವ
ಲೆಕ್ಕವಿಲ್ಲದೆ ಓದಿದಡೇನು ನಿತ್ಯರಾಗಬಲ್ಲರೆ
ಮಂಡೆಯ ಬೋಳಿಸಿಕೊಂಡು
ಅಂದಚಂದಕೆ ತಿರುಗುವ ಜಗಭಂಡರ
ಮೆಚ್ಚುವನೆ ಅಮುಗೇಶ್ವರಲಿಂಗವು. (೪೮)

ಅರಿವಿನ ಮಾರಿತಂದೆ

ಅಂಕಿತನಾಮ : ಸದಾಶಿವಮೂರ್ತಿಲಿಂಗ
ದೊರೆತಿರುವ ವಚನಗಳು : ೩೭೯

ಕಲ್ಲು ಕಲ್ಲು ತಾಕಿದಲ್ಲಿ ಕಿಚ್ಚಿನ ಕಿಡಿಯಲ್ಲದೆ
ಹೆಂಟೆ ಶಿಲೆ ಹೋರಿದಲ್ಲಿವುಂಟೆ
ಅರಿದವನಲ್ಲಿ ಒಡಗೂಡುವ ಸುಖವಲ್ಲದೆ
ಬರಿಯನಲ್ಲಿ ಅರಿವು ಹೀನನಲ್ಲಿ
ಅರಿವಿನ ಕುರುಹ ಮರೆದಾಡುವನಲ್ಲಿ
ಸುರೆಯ ಮಡಕೆಯ ಪೂಜಿಸಿ ಕುಡಿವವನಂತಾಗಬೇಡ
ಬರಿಯ ವಾಚಾಸಿದ್ಧಿಯಲ್ಲಿ ಅರಿದೆಹೆನೆಂದು
ಅವ ಕೊಟ್ಟರಿವಿನ ಕುರುಹ ಮರೆಯಬೇಡ
ಆ ಮರೆಯಲ್ಲಿ ಬೆಳಗು ತೋರುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ ಅದೆ. (೪೯)

ಕ್ರೀಯಲ್ಲಿ ಕಾಬುದ ಕ್ರೀಯಲ್ಲಿ ಕಂಡು
ಅರಿಕೆಯಲ್ಲಿ ಕಾಬುದ ಅರಿವಿನಲ್ಲಿ ಕಂಡು
ಮುಳ್ಳು ತಾಗಿದಡೆ ಮೊನೆಯಿಂದ ಕಳೆವಂತೆ
ತನ್ನಯ ಮರವೆಯ ತನ್ನ ಅರಿವಿನಿಂದ ಅರಿದು
ಸದಾಶಿವಮೂರ್ತಿಲಿಂಗದ ಕುರುಹಡಗಿತ್ತು. (೫೦)

ಕೆಯಿ ಬೆಳೆವಲ್ಲಿ ಸದೆಗೆ ಮುನಿವರಲ್ಲದೆ
ಬೆಳೆಗೆ ಮುನಿದವರುಂಟೆ ಅಯ್ಯಾ
ಅರಿದಂಗವ ತಾಳಿದವರಲ್ಲಿ ಮರವೆಗೆ ಮುನಿವರಲ್ಲದೆ
ಅರಿವಿಗೆ ಮುನಿವರುಂಟೆ ಅಯ್ಯಾ
ಕೊಲ್ಲಿ ಆವಿಂಗೆ ಕಾಲ ಕಟ್ಟುವರಲ್ಲದೆ
ಮೊಲೆಯ ಕಟ್ಟಿದರುಂಟೆ ಅಯ್ಯಾ
ಗುರುವಾದಡೂ ಆಗಲಿ
ಲಿಂಗವಾದಡೂ ಆಗಲಿ

ಜಂಗಮವಾದಡೂ ಆಗಲಿ
ಅರಿವಿಂಗೆ ಶರಣು
ಮರವಿಂಗೆ ಮಥನವ ಮಾಡಿದಲ್ಲದೆ ಇರೆ
ಇದು ನೀವು ಕೊಟ್ಟ ಅರಿವಿನ ಮಾರನ ಇರವು
ಸದಾಶಿವಮೂರ್ತಿಲಿಂಗದ ಬರವು. (೫೧)

ಭರಿತಾರ್ಪಣವೆಂಬುದು ಲಿಂಗಕ್ಕೊ ನಿನಗೊ
ಲಿಂಗಕ್ಕೆ ಸಂಕಲ್ಪ
ನಿನಗೆ ಮನೋಹರ
ಈ ಗುಣ ಓಗರ ಮೇಲೋಗರದ ಅಪೇಕ್ಷೆಯಲ್ಲದೆ
ಲಿಂಗದ ಒಡಲಲ್ಲ
ಸದಾಶಿವಮೂರ್ತಿಲಿಂಗಕ್ಕೆ ಸಲ್ಲ. (೫೨)

ವಂದಿಸಿ ನಿಂದಿಸಬಾರದೆಂಬುದೆ
ಕ್ರಿಯಾವಂತನ ಇರವು
ವಂದಿಸುವುದಕ್ಕೆ ಮುನ್ನವೆ
ನಿಂದೆಗೊಡಲು ಮಾಡದೆ
ಆ ಗುಣವ ಹಿಂಗಿಸಿ ವಂದಿಸುವುದೆ
ಸದ್ಭಕ್ತನ ಇರವು
ಸನ್ಮತಿಯ ಪದವು
ಸದಾಶಿವಮೂರ್ತಿಲಿಂಗದ ಇರವು. (೫೩)

ವೇಷದಲ್ಲಿ ತಿರುಗುವುದು ಸಮಯದ ಹಂಗು
ಮಾತಿನಲ್ಲಿ ತಿರುಗುವರೆಲ್ಲರು ಶಾಸ್ತ್ರದ ಹಂಗು
ಯತಿಭೇದದಲ್ಲಿ ತಿರುಗುವರೆಲ್ಲರು ಮನಸಿಜನ ಹಂಗು
ಆಸೆ ಅರತು ನಿಬ್ಬೆರಗಾಗಿ ತಿರುಗುವರೆಲ್ಲರು ಶರೀರದ ಹಂಗು
ಹಿಂದ ಮರೆದು ಮುಂದಳ ಮೋಕ್ಷವನರಸುವರೆಲ್ಲರು ರುದ್ರನ ಹಂಗು
ಇಷ್ಟಾರ್ಥ ಕಾಮ್ಯಾರ್ಥ ಮೋಕ್ಷಾರ್ಥವೆಂಬ ಬಟ್ಟೆಯ ಮೆಟ್ಟದೆ
ಹಿಂದಳ ಇರವು ಮುಂದಳ ಸಂಶಯವೆಂಬುದ ಏನೆಂದರಿಯದೆ ನಿಂದುದು
ಸದಾಶಿವಮೂರ್ತಿಲಿಂಗದಲ್ಲಿ ಸಂದ ಮನ. (೫೪)

ಹರಿವ ಶಕಟಂಗೆ ಕಡೆಗೀಲು ಕಡೆಯಾದಲ್ಲಿ
ಆ ಗಾಲಿ ಅಡಿಯಿಡಬಲ್ಲುದೆ
ಕುರುಹಿನ ಮೂರ್ತಿಯಲ್ಲಿ ಅರಿವು ಒಡಗೂಡದಿರೆ
ಆ ಜ್ಞಾನ ಹಿಂದ ಮರೆದು ಮುಂದಕ್ಕಡಿಯಿಡಲಿಲ್ಲ
ತಡಿಯಲ್ಲಿ ನಿಂದು ಮಡುವಿನಲ್ಲಿದ್ದ ಹರುಗೋಲಕ್ಕೆ ಅಡಿಯಿಟ್ಟು
ಅದುವೊಡಗೂಡಿ ಎಯ್ದುವಂತೆ
ಕುರುಹಿನ ತಡಿ ಮರವೆಯ ಮಡು ಮಾಡುವ ವರ್ತಕ ಹರುಗೋಲಾಗಿ
ಅರಿಕೆ ಅಂಬಿಗನಾಗಿ ಸಂಸಾರ ಸಾಗರವ ದಾಂಟಿ
ಆ ತಡಿಯ ಮರೆಯಲದೆ ನಿಜನೆಮ್ಮುಗೆಯ ಕಳೆಬೆಳಗು ಬೆಳಗುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ. (೫೫)

ಹಾಲು ಬತ್ತಿದ ಹಸುವಿಂಗೆ ಕರುವ ಬಿಟ್ಟಡೆ
ಒದೆಯುವುದಲ್ಲದೆ ಉಣಲೀಸುವುದೆ
ಅರಿವು ನಷ್ಟವಾದವ ಕ್ರೀಯ ಬಲ್ಲನೆ
ಕ್ರೀಯೆಂಬುದೆ ಹಸು
ಅರಿವೆಂಬುದೆ ಹಾಲು
ಬಯಕೆಯೆಂಬುದೆ ಕರು
ಇಂತೀ ತ್ರಿವಿಧವನರಿದಲ್ಲಿ ಸದಾಶಿವಮೂರ್ತಿಲಿಂಗವು ತಾನೆ. (೫೬)

ಅವಸರದ ರೇಕಣ್ಣ

ಅಂಕಿತನಾಮ : ಸದ್ಯೋಜಾತಲಿಂಗ
ದೊರೆತಿರುವ ವಚನಗಳು : ೧೦೪

ದಾಕ್ಷಿಣ್ಯದ ಭಕ್ತಿ
ಕಲಿಕೆಯ ವಿರಕ್ತಿ
ಮಾತಿನ ಮಾಲೆಯ ಬೋಧೆ
ತೂತ ಜ್ಞಾನಿಗಳ ಸಂಸರ್ಗ
ಬೀತಕುಂಭದಲ್ಲಿ ಅಮೃತವ ಹೊಯಿದಿರಿಸಲಿಕ್ಕೆ
ಅದು ಎಷ್ಟು ದಿವಸ ಇರಲಾಪುದು
ಇಂತಿವ ಕಳೆದುಳಿದು
ನಡೆನುಡಿ ಸಿದ್ಧಾಂತವಾಗಿ ಕೂಡಬೇಕು
ಸದ್ಯೋಜಾತಲಿಂಗವ. (೫೭)

ದಾರಿಯಲ್ಲಿ ಬೀದಿಯಲ್ಲಿ ಮನೆಗಳಲ್ಲಿ
ಹೊನ್ನು ಹೆಣ್ಣು ಮಣ್ಣಿನ ಮೇಲಣ ಕಾಮವಿಕಾರ ತೋರಿದಡೆ
ಅದಕ್ಕೇನೂ ಶಂಕೆಯಿಲ್ಲ
ಅದೇನು ಕಾರಣವೆಂದಡೆ
ಚಿತ್ರದ ಹುಲಿ ಕನಸಿನ ಹಾವು ಜಲಮಂಡುಕ ಕಚ್ಚಿ ಸತ್ತವರುಂಟೆ
ಇದು ಕಾರಣ
ಜಾಗ್ರ ಸ್ವಪ್ನ ಸುಷುಪ್ತಿಗಳಲ್ಲಿ ಕಾಮವಿಕಾರ ತೋರಿತ್ತೆಂದು
ಶಸ್ತ್ರ ಸಮಾಧಿ ನೀರು ನೇಣು ವಿಷ ಔಷಧಿಗಳಿಂದ ಘಟವ ಬಿಟ್ಟಡೆ
ಆತ ಗುರುದ್ರೋಹಿ ಲಿಂಗದ್ರೋಹಿ ಜಂಗಮದ್ರೋಹಿ
ಇದು ಭಕ್ತರಾಚರಣೆ ವಿರಕ್ತ ನಿರ್ಣಯ
ಇಂತಪ್ಪವರಿಗೆ ಸದ್ಯೋಜಾತಲಿಂಗವುಂಟಿಲ್ಲವೆಂದೆನು. (೫೮)

೦

ಆದಯ್ಯ

ಊರು : ಸೌರಾಷ್ಟ್ರದಿಂದ ಪುಲಿಗೆರೆಗೆ ಬಂದು ನೆಲೆಸಿದರು.
ಅಂಕಿತನಾಮ : ಸೌರಾಷ್ಟ್ರ ಸೋಮೇಶ್ವರ
ದೊರೆತಿರುವ ವಚನಗಳು : ೪೦೧

ಕಳವು ಪಾರದ್ವಾರ ಜೀವಹಿಂಸೆಯೆಂಬಿವನತ್ತತ್ತಲೆ
ಕೆಡೆನೂಂಕಿ
ಕ್ರೋಧ ಲೋಭ ಚಿತ್ತದಲ್ಲಿ ಮೊಳೆಯದೆ
ಕಪಟ ಕಳವಳ ಬುದ್ಧಿಯಲ್ಲಿ ಬೆಳೆಯದೆ
ಕುಂದು ನಿಂದೆಗಳಿಂದ ಕೆಡೆನುಡಿವ ವಾಕು
ಮನದಲ್ಲಿ ಪಲ್ಲವಿಸದೆ
ಮದ ಮತ್ಸರ ಅಹಂಕಾರದಲ್ಲಿ ಮುಗುಳೊತ್ತದೆ
ಪ್ರಕೃತಿ ವಿಕೃತಿ ಭ್ರಾಂತು ಭಾವದಲ್ಲಿ ಫಲಿಸದೆ
ಸುಜ್ಞಾನದಿಂದ ಧರ್ಮಾಧರ್ಮಂಗಳ ವರ್ಮನರಿತು
ಮನಕ್ಕೆ ಮನಸ್ಸಾಕ್ಷಿಯಾಗಿ
ಸದ್ವರ್ತನೆ ಸಮತೆ ಸಾರಹೃದಯ ಅನಿಂದೆ ಅನುಬಂಧ ಅಕಪಟ
ಪಟುತರವಾಗಿ ಸಟೆಯುಳಿದು
ದಿಟ ಘಟಿಸಿ ನಿಜ ನಿರುಗೆಯಾದಲ್ಲಿ
ಸೌರಾಷ್ಟ್ರ ಸೋಮೇಶ್ವರನೆಡೆಬಿಡವಿಲ್ಲದಿಪ್ಪನು. (೫೯)

ಕಾಮದ ಸೀಮೆಯ ಕಳೆಯದನ್ನಕ್ಕ
ಕೋಪದ ಕೂಪ ಹೂಳದನ್ನಕ್ಕ
ಲೋಭದ ಲಾಭ ಕ್ಷಯಿಸದನ್ನಕ್ಕ
ಮೋಹದ ಗಾಯ ನಂದದನ್ನಕ್ಕ
ಮದದುನ್ಮದ ಕೆದರದನ್ನಕ್ಕ
ಮಚ್ಚರದ ಕೆಚ್ಚು ಬಿಚ್ಚದನ್ನಕ್ಕ
ಅರಿಗಳಾರತವಡಗಿ ನಿರುತವಾಗದನ್ನಕ್ಕ
ಸೌರಾಷ್ಟ್ರ ಸೋಮೇಶ್ವರಲಿಂಗವೆಂತು ಸಾಧ್ಯವಪ್ಪುದಯ್ಯಾ. (೬೦)

ಚೌಷಷ್ಠಿ ವಿದ್ಯೆಗಳ ಕಲಿತಡೇನೊ
ಅಷ್ಟಾಷಷ್ಠಿ ಕ್ಷೇತ್ರಂಗಳ ಮೆಟ್ಟಿದಡೇನೊ
ಬಿಟ್ಟಡೇನೊ ಕಟ್ಟಿದಡೇನೊ
ಅರಿವಿನಾಚಾರ ಕರಿಗೊಳ್ಳದನ್ನಕ್ಕ
ಘನಲಿಂಗದ ಬೆಳಗು ಸ್ವಯವಾದ ಶರಣಂಗಲ್ಲದೆ
ಸೌರಾಷ್ಟ್ರ ಸೋಮೇಶ್ವರಲಿಂಗಸುಖವೆಡೆಗೊಳ್ಳದು. (೬೧)

ಜಪತಪ ನೇಮವಲ್ಲ
ಮಂತ್ರ ತಂತ್ರ ನೇಮವಲ್ಲ
ಧೂಪ ದೀಪಾರತಿ ನೇಮವಲ್ಲ
ಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ
ಸೌರಾಷ್ಟ್ರ ಸೋಮೇಶ್ವರಲಿಂಗವಲ್ಲಿದ್ದ ಕಾರಣ ನಿತ್ಯನೇಮ. (೬೨)

ಮರ್ಕಟ ದರ್ಪಣವ ಹಿಡಿದು ನೋಡಿ
ತನ್ನ ಪ್ರತಿಬಿಂಬವ ಕಂಡು
ದರ್ಪಣವ ಮರ್ಕಟವೆಂದು ಬಗೆದೇಡಿಸಲನುಗೆಯ್ವಂತೆ
ಮನೋವಿಕಾರದಿಂ ಪ್ರಕೃತಿವಿಡಿದು ಚರಿಸುತಿರ್ಪ
ಮರ್ತ್ಯದ ಮನುಜರು
ಪ್ರಕೃತಿ ನಿಃಕಂಪನವಾದ ಪರಮಾನುಭಾವಿಗಳಪ್ಪ
ಪರಮಲಿಂಗೈಕ್ಯರ ಅನುವನರಿಯದೆ
ಬಾಯಿಗೆ ಬಂದಂತೆ ಒಂದೊಂದ ನುಡಿವ
ಮಂದಮತಿಗಳಪ್ಪ ಸಂದೇಹಿಗಳು
ನಿಮ್ಮನೂ ತಮ್ಮನೂ ತಾವೆತ್ತ ಬಲ್ಲರಯ್ಯಾ
ಸೌರಾಷ್ಟ್ರ ಸೋಮೇಶ್ವರಾ. (೬೩)

ಮಾತ ಕಲಿತು ಮಂಡೆಯ ಬೋಳಿಸಿ
ವೇಷ ಭಾಷೆಗಳಿಂ
ದೇಶ ಕೋಶ ಭವನಂಗಳ ತೊಳಲಿ ಬಳಲಿ
ನಿಂದಡೇನಾಯಿತ್ತೊ
ಜಟಾಬಂಧದಿಂ ಗಡ್ಡದ ಹಿರಿಯರಪ್ಪೆ ಭೋ

ನಾವೆಂದು ಬಿಂದು ಬೀಸರವಾಗದಿರ್ದಡೇನಾಯಿತ್ತೊ
ಹೆಚ್ಚು ಕುಂದು ಬಿಚ್ಚದನ್ನಕ್ಕ
ತಥ್ಯ ಮಿಥ್ಯ ರಾಗ ದ್ವೇಷ ಭಯ ಮೋಹಂಗಳುಳ್ಳನ್ನಕ್ಕ
ಸೌರಾಷ್ಟ್ರ ಸೋಮೇಶ್ವರಲಿಂಗ ಎಂತು ಸಾಧ್ಯವಪ್ಪುದಯ್ಯಾ. (೬೪)

ವೇದಂಗಳ ಹಿಂದೆ ಹರಿಯದಿರು ಹರಿಯದಿರು
ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು
ಪುರಾಣಂಗಳ ಹಿಂದೆ ಬಳಸದಿರು ಬಳಸದಿರು
ಆಗಮಂಗಳ ಹಿಂದೆ ತೊಳಲದಿರು ತೊಳಲದಿರು
ಸೌರಾಷ್ಟ್ರ ಸೋಮೇಶ್ವರನ ಕೈವಿಡಿದು
ಶಬ್ದಜಾಲಂಗಳಿಗೆ ಬಳಲದಿರು ಬಳಲದಿರು (೬೫)

ವೇದವಿತ್ತುಗಳು ಅಗ್ನಿಪುರುಷನೆ ದೇವರೆಂಬರಯ್ಯಾ
ಶಾಸ್ತ್ರವಿತ್ತುಗಳು ಪಾಷಾಣವನೆ ದೇವರೆಂಬರಯ್ಯಾ
ಆತ್ಮವಿತ್ತುಗಳು ಆತ್ಮನೆ ದೇವರೆಂಬರಯ್ಯಾ
ಶಬ್ದವಿತ್ತುಗಳು ಸಮಯಂಗಳನೆ ದೇವರೆಂಬರಯ್ಯಾ
ಇವರೆಲ್ಲರೂ
ನಮ್ಮ ಸೌರಾಷ್ಟ್ರ ಸೋಮೇಶ್ವರಲಿಂಗದ ನಿಜವನರಿಯದೆ
ಜವನ ಜಾಡ್ಯಂಗಳಿಂ ಭವಭಾರಿಗಳಾದರಯ್ಯಾ. (೬೬)

ಶಬ್ದಶಾಸ್ತ್ರ ತರ್ಕಾಗಮಂಗಳ ಹೇಳಿ ಕೇಳಿ
ಕಲಿತುಲಿದವರೆಲ್ಲಾ ವಿದ್ಯಾಗೂಡಾದರಲ್ಲದೆ
ಲಿಂಗಗೂಡಾದುದಿಲ್ಲ ನೋಡಯ್ಯಾ
ಕಲಿಕಲಿತು ಉಲಿವ ಅಭ್ಯಾಸದ ಮಾತಿಂಗೆ
ಮರುಳಪ್ಪರೆ ನಮ್ಮ ಶಿವಶರಣರು
ಆದಿ ಅನಾದಿಗಭೇದ್ಯವಾದ ನಿಜವ ಭೇದಿಸಲರಿತು
ಮನ ಘನದಲ್ಲಿ ನಿವಾಸಿಯಾಗಬೇಕು
ಮನ ಘನದಲ್ಲಿ ನಿವಾಸಿಯಾಗದೆ
ಸೌರಾಷ್ಟ್ರ ಸೋಮೇಶ್ವರಲಿಂಗವ ಬಲ್ಲೆನೆಂದು ನುಡಿವ
ಬರಿ ಮಾತಿನ ಬಾಯ ಬಣ್ಣದ ಸೊಲ್ಲು ಸಲ್ಲದೆ ಹೋಯಿತ್ತು. (೬೭)

ಸತ್ಯವೆ ಜಲ ಸಮತೆಯೆ ಗಂಧ ಅರಿವೆ ಅಕ್ಷತೆ
ಭಾವ ಕುಸುಮ ಸ್ವತಂತ್ರ ಧೂಪ ನಿರಾಳ ದೀಪ
ಸ್ವಾನುಭಾವ ನೈವೇದ್ಯ ಸಾಧನ ಸಾಧ್ಯ ಕರ್ಪುರ ವೀಳೆಯ
ಇವೆಲ್ಲವ
ನಿಮ್ಮ ಪೂಜೆಗೆಂದೆನ್ನ ಕರಣಂಗಳು ಪಡೆದಿರಲು
ಹೃದಯ ಮಧ್ಯದಲ್ಲಿದ್ದು ಗಮ್ಮನೆ ಕೈಕೊಂಡೆಯಲ್ಲಾ
ಸೌರಾಷ್ಟ್ರ ಸೋಮೇಶ್ವರಾ. (೬೮)

ಹಣ ಬಂಗಾರ ವಸ್ತ್ರ ಕಪ್ಪಡ
ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು
ಕಂಡು ಕಾತರಿಸಿ ಕೈಮುಟ್ಟಿ ಎತ್ತದ ಭಾಷೆ
ಕೊಟ್ಟಡೆ ಮುಟ್ಟದ ಭಾಷೆ
ಪರಧನ ಪರಸತಿಗೆ ಅಳುಪದ ಭಾಷೆ
ಇಂತಿದಕಳುಪಿದೆನಾದಡೆ
ಸೌರಾಷ್ಟ್ರ ಸೋಮೇಶ್ವರಾ
ನಿಮ್ಮಾಣೆ ನಿಮ್ಮ ಪ್ರಮಥರಾಣೆ. (೬೯)

ಹಾಲ ಹಿಡಿದು ಬೆಣ್ಣೆಯನರಸಲುಂಟೆ
ಲಿಂಗವ ಹಿಡಿದು ಪುಣ್ಯತೀರ್ಥಕ್ಕೆ ಹೋಗಲುಂಟೆ
ಲಿಂಗ ತೀರ್ಥ ಪ್ರಸಾದವ ಕೊಂಡು
ಅನ್ಯಬೋಧೆ ಅನ್ಯಶಾಸ್ತ್ರಕ್ಕೆ ಹಾರೈಸಲೇಕೆ
ಇಷ್ಟಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಶರಣೆಂದೆನಾದಡೆ
ತಡೆಯದೆ ಹುಟ್ಟಿಸುವ ಶ್ವಾನನ ಗರ್ಭದಲ್ಲಿ
ಅದೆಂತೆಂದಡೆ
ಇಷ್ಟಲಿಂಗಮವಿಶ್ವಸ್ಯ ತೀರ್ಥಲಿಂಗಂ ತು ಯೋ ಭಜೇತ್
ಶುನಾಂ ಯೋನಿಃ ಶತಂ ಗತ್ವಾ ಚಂಡಾಲಗೃಹಮಾವಿಶೇತ್
ಎಂದುದಾಗಿ
ಗುರು ಕೊಟ್ಟ ಲಿಂಗದಲ್ಲಿ
ಎಲ್ಲಾ ತೀರ್ಥಂಗಳೂ ಎಲ್ಲಾ ಕ್ಷೇತ್ರಂಗಳೂ
ಇದ್ದಾವೆಂದು ಭಾವಿಸಿ ಮುಕ್ತರಪ್ಪುದಯ್ಯಾ

ಇಂತಲ್ಲದೆ ಗುರು ಕೊಟ್ಟ ಲಿಂಗವ ಕಿರಿದುಮಾಡಿ
ತೀರ್ಥಲಿಂಗವ ಹಿರಿದುಮಾಡಿ ಹೋದವಂಗೆ
ಅಘೋರನರಕ ತಪ್ಪದು ಕಾಣಾ
ಸೌರಾಷ್ಟ್ರ ಸೋಮೇಶ್ವರಾ. (೭೦)

ಹಿಂದಣ ಕಥೆಯ ಮುಂದೆ ಪೇಳುವ ಕಾವ್ಯವಲ್ಲ
ಮುಂದಣ ಕಥೆಯನಿಂದು ಹೇಳುವ ನಾಟಕವಲ್ಲ
ಬಂದ ಶಬ್ದವ ಸಂದಿಲ್ಲದುಸುರುವೆನೆಂಬ ಅಭ್ಯಾಸಿಯಲ್ಲ
ಛಂದ ವಿಚ್ಛಂದಯೆಂಬ ಸಂದೇಹಿಯಲ್ಲ
ಸೌರಾಷ್ಟ್ರ ಸೋಮೇಶ್ವರಾ
ನಿಮ್ಮ ಶರಣರ ಸ್ವಯಾನುಭಾವದ ಪರಿ ಬೇರೆ. (೭೧)

ಆಯ್ದಕ್ಕಿ ಮಾರಯ್ಯ

ಊರು	:	ಅಮರೇಶ್ವರ ಗ್ರಾಮ, ಲಿಂಗಸುಗೂರು ತಾಲ್ಲೂಕು, ರಾಯಚೂರು ಜಿಲ್ಲೆ.
ಹೆಂಡತಿ	:	ಆಯ್ದಕ್ಕಿ ಲಕ್ಕಮ್ಮ
ಕಸುಬು	:	ಮಾರಯ್ಯನು ಕಲ್ಯಾಣ ಪಟ್ಟಣದಲ್ಲಿದ್ದ ಬಸವಣ್ಣನವರ ಮಹಾಮನೆಯ ಅಂಗಳದಿಂದ ಆಯ್ದುಕೊಂಡು ತಂದ ಅಕ್ಕಿಯಿಂದ ಉಣಿಸು ತಿನಸುಗಳನ್ನು ತಯಾರಿಸಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿ ಶಿವಶರಣಶರಣೆಯರಿಗೆ ದಾಸೋಹವನ್ನು ಮಾಡುತ್ತಿದ್ದರು.
ಅಂಕಿತನಾಮ	:	ಅಮರೇಶ್ವರಲಿಂಗ
ದೊರೆತಿರುವ ವಚನಗಳು	:	೩೧

ಅಹಂಕಾರವರತಲ್ಲದೆ ಗುರುಭಕ್ತನಲ್ಲ
ಬಯಕೆ ಹಿಂಗಿಯಲ್ಲದೆ ಶಿವಲಿಂಗಪೂಜಕನಲ್ಲ
ತ್ರಿವಿಧ ಮಲತ್ರಯದ ಬಲುಹುಳ್ಳನ್ನಕ್ಕ ಚರಸೇವಿಯಲ್ಲ
ಇಂತೀ ಗುಣಂಗಳಲ್ಲಿ ನಿಶ್ಚಯವಾದಲ್ಲದೆ
ಅಮರೇಶ್ವರಲಿಂಗವನರಿಯಬಾರದು. (೭೨)

ಕಾಯಕದಲ್ಲಿ ನಿರತನಾದಡೆ
ಗುರುದರ್ಶನವಾದಡೂ ಮರೆಯಬೇಕು
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು.
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು. (೭೩)

ನೇಮವ ಮಾಡಿಕೊಂಡು
ಭಕ್ತರ ಭವನಂಗಳ ಹೊಕ್ಕು
ಕಾಯಕ ಸತ್ತು
ಹಣ ಹೊನ್ನ ಬೇಡೆಹೆನೆಂಬುದು
ಕಷ್ಟವಲ್ಲವೆ ಸದ್ಭಕ್ತಂಗೆ
ಆ ಗುಣ ಅಮರೇಶ್ವರಲಿಂಗಕ್ಕೆ ದೂರ. (೭೪)

ಆಯ್ದಕ್ಕಿ ಲಕ್ಕಮ್ಮ

ಊರು	:	ಅಮರೇಶ್ವರ ಗ್ರಾಮ, ಲಿಂಗಸುಗೂರು ತಾಲ್ಲೂಕು, ರಾಯಚೂರು ಜಿಲ್ಲೆ.
ಗಂಡ	:	ಆಯ್ದಕ್ಕಿ ಮಾರಯ್ಯ
ಕಸುಬು	:	ಮಾರಯ್ಯನು ಕಲ್ಯಾಣ ಪಟ್ಟಣದಲ್ಲಿದ್ದ ಬಸವಣ್ಣನವರ ಮಹಾಮನೆಯ ಅಂಗಳದಿಂದ ಆಯ್ದುಕೊಂಡು ತಂದ ಅಕ್ಕಿಯಿಂದ ಉಣಿಸು ತಿನಸುಗಳನ್ನು ತಯಾರಿಸಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿ ಶಿವ ಶರಣಶರಣೆಯರಿಗೆ ದಾಸೋಹವನ್ನು ಮಾಡುತ್ತಿದ್ದರು.
ಅಂಕಿತನಾಮ	:	ಮಾರಯ್ಯ ಪ್ರಿಯ ಅಮರೇಶ್ವರಲಿಂಗ
ದೊರೆತಿರುವ ವಚನಗಳು	:	೨೫

ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ
ಭಾವಶುದ್ಧವಾಗಿ
ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು
ನಿಶ್ಚೈಸಿ ಮಾಡಬೇಕು
ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ
ಬೇಗ ಹೋಗು ಮಾರಯ್ಯಾ (೭೫)

ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ
ಈಸಕ್ಕಿಯಾಸೆ ನಿಮಗೇಕೆ
ಈಶ್ವರನೊಪ್ಪ
ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ
ದೂರ ಮಾರಯ್ಯ. (೭೬)

ಒಮ್ಮನವ ಮೀರಿ
ಇಮ್ಮನದಲ್ಲಿ ತಂದಿರಿ
ಇದು ನಿಮ್ಮ ಮನವೊ
ಬಸವಣ್ಣನ ಅನುಮಾನದ ಚಿತ್ತವೊ
ಈ ಮಾತು ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ
ಸಲ್ಲದ ಬೋನ
ಅಲ್ಲಿಯೇ ಸುರಿದು ಬನ್ನಿ ಮಾರಯ್ಯಾ. (೭೭)

ಸಂದಣಿಗೊಂಡು ಮನ ಹರುಷದಿಂದ
ಬಸವಣ್ಣನ ಅಂಗಳಕ್ಕೆ ಹೋಗಿ
ತಿಪ್ಪೆಯ ತಪ್ಪಲಲ್ಲಿ ಬಿದ್ದಿದ್ದ ತಂಡುಲವ ಕಟ್ಟಿಕೊಂಡು
ಎಯಿದಾಗಿ ತರಲು ಎಯಿದಾಗಿ ಬಂದಿತ್ತಲ್ಲಾ
ನಮಗೆ ಎಂದಿನಂದವೆ ಸಾಕು
ಮತ್ತೆ ಕೊಂಡು ಹೋಗಿ ಅಲ್ಲಿಯೆ ಸುರಿ
ಮಾರಯ್ಯಪ್ರಿಯ ಅಮಲೇಶ್ವರಲಿಂಗ
ಕೊಟ್ಟ ಕಾಯಕವೆ ಸಾಕು ಮಾರಯ್ಯಾ. (೭೮)

ಕೈದ ಕೊಡುವರಲ್ಲದೆ
ಕಲಿತನವ ಕೊಡುವರುಂಟೆ ಮಾರಯ್ಯಾ
ಹೆಣ್ಣ ಕೊಡುವರಲ್ಲದೆ
ಕೂಟಕ್ಕೊಳಗಾದವರುಂಟೆ ಮಾರಯ್ಯಾ
ಕಳುವ ಚೋರಂಗೆ
ಬಡವರೆಂದು ದಯವುಂಟೆ ಮಾರಯ್ಯಾ
ಮನವನೊರೆದು ಭಕ್ತಿಯ ನೋಡಿಹೆನೆಂಬವಂಗೆ
ಎಮ್ಮಲ್ಲಿ ಗುಣವ ಸಂಪಾದಿಸಲಿಲ್ಲ ಮಾರಯ್ಯಾ
ಶೂಲವನೇರಿ ಸಂದಲ್ಲಿ
ಮತ್ತಿನ್ನು ಸಾವಿಂಗೆ ಹಂಗುಪಡಲೇಕೆ
ಮಾರಯ್ಯಪ್ರಿಯ ಅಮಲೇಶ್ವರಲಿಂಗಾ ನೀನೆ ಬಲ್ಲೆ. (೭೯)

ಗರ್ವದಿಂದ ಮಾಡುವ ಭಕ್ತಿ
ದ್ರವ್ಯದ ಕೇಡು
ನಡೆಯಿಲ್ಲದ ನುಡಿ
ಅರಿವಿಂಗೆ ಹಾನಿ
ಕೊಡದೆ ತ್ಯಾಗಿ ಎನಿಸಿಕೊಂಬುದು
ಮುಡಿಯಿಲ್ಲದ ಶೃಂಗಾರ
ದೃಢವಿಲ್ಲದ ಭಕ್ತಿ
ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ
ಮಾರಯ್ಯಪ್ರಿಯ ಅಮಲೇಶ್ವರಲಿಂಗವ
ಮುಟ್ಟದ ಭಕ್ತಿ. (೮೦)

ಸಸಿಗೆ ನೀರೆರೆದಡೆ ಎಳಕುವುದಲ್ಲದೆ
ನಷ್ಟಮೂಲಕ್ಕೆ ಹೊತ್ತು ನೀರ ಹೊಯಿದಡೆ
ಎಳಕುವುದೆ ಮಾರಯ್ಯಾ
ನಿನ್ನ ವಿರಕ್ತಿ ನಷ್ಟವಾಗದ ಮುನ್ನವೆ
ಮಾರಯ್ಯಪ್ರಿಯ ಅಮಲೇಶ್ವರಲಿಂಗವನರಿಯಿರಯ್ಯಾ. (೮೧)

೦

ಉಗ್ಘಡಿಸುವ ಗಬ್ಬಿದೇವಯ್ಯ

ಕಸುಬು : ಬಸವಣ್ಣನವರ ಮಹಾಮನೆಯ ಬಾಗಿಲು ಕಾಯುವುದು
ಅಂಕಿತನಾಮ : ಕೂಡಲಸಂಗಮದೇವರಲ್ಲಿ ಬಸವಣ್ಣ
ದೊರೆತಿರುವ ವಚನಗಳು : ೧೦

ಜ್ಞಾನ ಬಾ ಮಾಯೆ ಹೋಗೆಂದು ಕಳುಹುತ್ತಿದ್ದೇನೆ
ಅರಿವು ಬಾ ಅಜ್ಞಾನ ಹೋಗೆಂದು ಕಳುಹುತ್ತಿದ್ದೇನೆ
ನಿಃಕಲ ಬಾ ಸಕಲ ಹೋಗೆಂದು ಕಳುಹುತ್ತಿದ್ದೇನೆ
ನಿಃಪ್ರಪಂಚ ಬಾ ಪ್ರಪಂಚ ಹೋಗೆಂದು ಕಳುಹುತ್ತಿದ್ದೇನೆ
ಕೂಡಲಸಂಗಮದೇವರಲ್ಲಿ ಬಸವಣ್ಣನ ಬಲ್ಲವರನೊಳಗೆ ಕೂಡಿ
ಅರಿಯದವರ ಹೊರಗೆ ತಡೆವುತ್ತಿದ್ದೇನೆ. (೮೨)

ಭಾವಭ್ರಮೆವಂತರು ಬಾರದಿರಿ
ಜ್ಞಾನಹೀನರು ಬೇಗ ಹೋಗಿ
ತ್ರಿವಿಧ ಮಲಕ್ಕೆ ಕಚ್ಚಿ ಮುಟ್ಟಿ ಹೊಡೆದಾಡುವರತ್ತಲಿರಿ
ನಿರುತ ಸ್ವಯಾನುಭಾವರು ಬನ್ನಿ
ಪರಬ್ರಹ್ಮಸ್ವರೂಪರು ಬನ್ನಿ
ಏಕಲಿಂಗನಿಷ್ಠಾಪರರು ದೃಢವಂತರು ಬನ್ನಿ
ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ
ಎಂದು ಎನಗೆ ಕೊಟ್ಟ ಕಾಯಕ
ಕೂಡಲಸಂಗಮದೇವರಲ್ಲಿ ಬಸವಣ್ಣ. (೮೩)

ಉರಿಲಿಂಗದೇವ

ಊರು : ಅವಸೆಕಂಧಾರ
ಅಂಕಿತನಾಮ : ಉರಿಲಿಂಗದೇವ
ದೊರೆತಿರುವ ವಚನಗಳು : ೪೮

ತೀರ್ಥಯಾತ್ರೆಯಲ್ಲಿ ಕೂಡೆಹೆನೆಂದು
ಏಗೈದು ಹೋಹ ಪರಿಯ
ನೋಡಾ ಅಯ್ಯಾ
ಮನೆಗೆ ಬಂದ ಜಂಗಮಕ್ಕೆ
ಇಲ್ಲಾ ಎಂದು
ಜಗಜಾತ್ರೆಯಲ್ಲಿ ಅನ್ನವನಿಕ್ಕಿದಡೆ
ಪುಣ್ಯವೆಂಬ ಅಣ್ಣಗಳಿಗೇಕೆ ಸದಾಚಾರ
ಉರಿಲಿಂಗತಂದೆ. (೮೪)

೦

ಉರಿಲಿಂಗಪೆದ್ದಿ

ಊರು : ಹುಟ್ಟಿದ್ದು ಆಂಧ್ರ ಪ್ರದೇಶ. ಅನಂತರ ಬಸವಣ್ಣನವರು ಇದ್ದ ಕಲ್ಯಾಣ ಪಟ್ಟಣಕ್ಕೆ ಬಂದು ನೆಲಸುತ್ತಾರೆ.
ಹೆಂಡತಿ : ಕಾಳವ್ವೆ
ಅಂಕಿತನಾಮ : ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ
ದೊರೆತಿರುವ ವಚನಗಳು : ೩೫೮

ಅಮೃತ ಸರ್ವರಿಗೂ
ಅಮೃತವಾಗಿಪ್ಪುದಲ್ಲದೆ
ಕೆಲಬರಿಗೆ ಅಮೃತವಾಗಿ
ಕೆಲಬರಿಗೆ ವಿಷವಾಗದು ನೋಡಾ
ಎಂತು ಅಂತೆ
ಶ್ರೀಗುರು ಸರ್ವರಿಗೆಯೂ ಗುರುವಾಗಿರಬೇಕಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. (೮೫)

ಅಷ್ಟಾಷಷ್ಠಿ ತೀರ್ಥಂಗಳ ಮೀಯಲ್ಕೆ
ಆತ ಹಿರಿಯನೇ ಅಲ್ಲ
ಆತನ ಅಂತಃಕರಣ ಶುದ್ಧವಿಲ್ಲಾಗಿ
ಸಂಧ್ಯಾ ಸಮಾಧಿ ಜಪ ತಪ ಮಂತ್ರರೂಢನಾಗಿರಲಿಕೆ
ಆತ ಹಿರಿಯನೇ ಅಲ್ಲ
ಆತನ ಮನ ಶುದ್ಧವಿಲ್ಲಾಗಿ
ವಚನಾರಂಭದಲ್ಲಿ ನುಡಿಗಲಿತಲ್ಲಿ ಆತನನುಭವಿಯೆ ಅಲ್ಲ
ಆತ ಇದಿರ ಬೋಧಿಸುವ ಭುಂಜಕನಾಗಿ
ಕೋಪವೇ ರಾಶಿ ಕುಟಿಲವೇ ಲಚ್ಚಣ
ಸಟೆಯೇ ಕೊಳಗ ಮಾಯವೇ ಅಳತೆ
ಅರಿಷಡ್ವರ್ಗ ಪಂಚೇಂದ್ರಿಯವಿಡಿದಾಡುವನ್ನಕ್ಕ ಭಕ್ತನೇ ಭಕ್ತನಲ್ಲ
ಭಕ್ತನ ನಡೆ ಪಾವನ
ನುಡಿಯೇ ತೀರ್ಥ

ಒಡಲೇ ಕ್ಷೇತ್ರ
ನಿಮ್ಮ ಶರಣರ ಅಂಗಳವೇ ವಾರಣಾಸಿ
ಕೇವಲ ದಾಸೋಹವೇ ಕರ್ತವ್ಯ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. (೮೬)

ಪುತ್ರ ಮಿತ್ರ ಕಳತ್ರಕ್ಕೆ ಸ್ನೇಹಿಸುವಂತೆ
ಶ್ರೀಗುರು ಲಿಂಗ ಜಂಗಮಕ್ಕೆ ಸ್ನೇಹಿಸಬೇಕು
ಸ್ನೇಹವೇ ಬಾತೆ ಕಾಣಿರೋ
ಲಿಂಗಕ್ಕೆ ಸ್ನೇಹವೇ ಭಕ್ತಿ ಕಾಣಿರೋ
ಸ್ನೇಹವೇ ಭಕ್ತಿಗೆ ಮೂಲ ಕಾಣಿರೋ
ಕಣ್ಣಪ್ಪ ಮಾದಾರ ಚೆನ್ನಯ್ಯ
ಚೋಳಿಯಕ್ಕನ ಸ್ನೇಹವ ನೋಡಿ ಭೋ
ಅವರಂತೆ ಸ್ನೇಹವ ಮಾಡಲು
ಭಕ್ತಿ ಮುಕ್ತಿ ಪರಿಣಾಮ ಮಹಾಸುಖ
ಆ ಸುಖಸ್ವರೂಪ ತಾನಾಗಿ ಇಪ್ಪನು ಶಿವನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. (೮೭)

ವೇದ ಶಾಸ್ತ್ರ ಪುರಾಣಾಗಮಗ್ರಂಥಂಗಳ
ನೋಡಿದವರೆಲ್ಲರೇನು ಹಿರಿಯರೆಂಬೆನೆ
ಅಲ್ಲಲ್ಲ ನಿಲ್ಲು ಮಾಣು
ಅವರೇ ಹಿರಿಯರಾದಡೆ
ನಟ್ಟುವೆ ಗಳೆಯಾಟ ಮಿಣಿಯಾಟ
ಅದೃಶ್ಯಕರಣ ಅಗ್ನಿಸ್ತಂಭ ಆಕರ್ಷಣ
ಚೌಷಷ್ಟಿ ಕಲಾ ವಿದ್ಯೆಯ ಸಾಧಿಸಿದ
ಡೊಂಬನೇನು ಕಿರಿಯನೇ
ಇದು ಹಿರಿದು ಕಿರಿದಿನ ಪರಿಯಲ್ಲ
ಹಿರಿದು ಕಿರಿದಿನ ಪರಿ ಬೇರೆ ಕಾಣಿರಣ್ಣಾ
ಇದು ಉದರಪೋಷಣ ವಿದ್ಯೆ ಎನಿಸುವುದು
ಅವರನೆಂತು ಸರಿ ಎಂಬೆನಯ್ಯ ಲಿಂಗವಂತಂಗೆ
ಇದು ಕಾರಣ

ಗುಣ ಜ್ಞಾನ ಧರ್ಮ ಆಚಾರ ಶೀಲ
ಸಾಧಿಸಿದಾತನೇ ಹಿರಿಯ ಕಾಣಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. (೮೮)

ಸಕಲ ಜನರು ಹೇಸಿದ ಉದಾನವ ಶ್ವಾನ ಭುಂಜಿಸಿ
ತನ್ನ ಹೊಟ್ಟೆಯ ಹೊರೆವುದಲ್ಲದೆ
ತನ್ನ ತಾ ಹೇಸಿದ
ಉದಾನವ ಮುಟ್ಟದು ನೋಡಾ
ಶ್ವಾನಗಿಂದವೂ ಕಡೆಯೆ
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಮರಳಿ ಭವಿಯ ಬೆರಸಿದಡೆ ಅವ ಭಕ್ತನಲ್ಲ
ಅವ ಶ್ವಾನನಿಂದ ಕರಕಷ್ಟ
ಇದು ನೀನೊಲಿದ ಶರಣಂಗಲ್ಲದೆ
ಎಲ್ಲರಿಗೇಕಹುದು ಹೇಳಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. (೮೯)

ಹೊನ್ನ ಬಿಟ್ಟು ಹೆಣ್ಣ ಬಿಟ್ಟು ಮಣ್ಣ ಬಿಟ್ಟು
ಬ್ರಹ್ಮಚಾರಿಗಳಾಗಬೇಕೆಂದು
ಬಣ್ಣವಿಟ್ಟು ನುಡಿವ ಅಣ್ಣಗಳ ಪರಿಯ ನೋಡಿರೋ
ಹೆಣ್ಣ ಬಿಟ್ಟಡೆಯೂ ಹೊನ್ನ ಬಿಡರಿ
ಹೊನ್ನ ಬಿಟ್ಟಡೆಯೂ ಮಣ್ಣ ಬಿಡರಿ
ಒಂದ ಬಿಟ್ಟಡೆಯೂ ಒಂದ ಬಿಡರಿ
ಬ್ರಹ್ಮಚಾರಿಗಳೆಂತಪ್ಪಿರಿ ಹೇಳಿರಣ್ಣಾ
ಹೆಣ್ಣ ಬಿಟ್ಟು ಬ್ರಹ್ಮಚಾರಿಗಳಾಗಬೇಕೆಂದು
ಅವರೆಂತು ಹೇಳಿದರು
ನೀವೆಂತು ಕೇಳಿದಿರಿ
ಹೆಣ್ಣನು ಹೆಣ್ಣೆಂದರಿವಿರಿ
ಹೊನ್ನನು ಹೊನ್ನೆಂದರಿವಿರಿ
ಮಣ್ಣನು ಮಣ್ಣೆಂದರಿವಿರಿ
ಬ್ರಹ್ಮಚಾರಿಗಳೆಂತಪ್ಪಿರಣ್ಣಾ

ಬಿಟ್ಟಡೆ
ಹೆಣ್ಣು ಹೊನ್ನು ಮಣ್ಣು ಈ ಮೂರನು ಬಿಟ್ಟು
ಜ್ಞಾನದಲ್ಲಿ ಸುಳಿಯಬಲ್ಲಡೆ ಭವಂ ನಾಸ್ತಿ ತಪ್ಪದು
ಹಿಡಿದಡೆ ಹೆಣ್ಣು ಮಣ್ಣು ಹೊನ್ನು ಈ ಮೂರನು ಹಿಡಿದು
ಸದ್ಭಕ್ತಿಯಿಂದ ದಾಸೋಹವ ಮಾಡಬಲ್ಲಡೆ
ಭವಂ ನಾಸ್ತಿ ತಪ್ಪದು
ಅದೆಂತೆಂದಡೆ
ವೀರಾಗಮೇ ಮಾತರಃ ಪಿತರಶ್ಚೈವ ಸ್ವಪತ್ನಿ ಬಾಲಕಾಸ್ತಥಾ
ಹೇಮ ಭೂಮಿರ್ನಬಂಧಕಾಃ ಪ್ರಾಜ್ಞಾನಂ ಬ್ರಹ್ಮಚಾರಿಣಾಂ
ಎಂದುದಾಗಿ
ಹೆಣ್ಣು ಹೊನ್ನು ಮಣ್ಣು ಈ ಮೂರನು ಹಿಡಿದು
ಸದ್ಭಕ್ತಿಯಿಂ ದಾಸೋಹವ ಮಾಡಬಲ್ಲಡೆ ಭವಂ ನಾಸ್ತಿ
ಅಲ್ಲಿ ಇದ್ದಡೆಯೂ ನೀರ ತಾವರೆಯಂತಿಪ್ಪರು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ ನಿಮ್ಮ ಶರಣರು. (೯೦)

೦

ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ

ಗಂಡ : ಉರಿಲಿಂಗಪೆದ್ದಿ
ಅಂಕಿತನಾಮ : ಉರಿಲಿಂಗಪೆದ್ದಿಗಳರಸ
ದೊರೆತಿರುವ ವಚನಗಳು : ೧೨

ಕುರಿ ಕೋಳಿ ಕಿರಿಮೀನು ತಿಂಬವರಿಗೆಲ್ಲ
ಕುಲಜ ಕುಲಜರೆಂದೆಂಬರು
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ
ಮಾದಿಗ ಕೀಳುಜಾತಿಯೆಂಬರು
ಅವರೆಂತು ಕೀಳುಜಾತಿಯಾದರು
ಜಾತಿಗಳು ನೀವೇಕೆ ಕೀಳಾಗಿರೊ
ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ
ನಾಯಿ ನೆಕ್ಕಿ ಹೋಯಿತು
ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಗೆ ಶೋಭಿತವಾಯಿತು
ಅದೆಂತೆಂದಡೆ
ಸಿದ್ದಲಿಕೆಯಾಯಿತು
ಸಗ್ಗಳೆಯಾಯಿತು
ಸಿದ್ದಲಿಕೆಯ ತುಪ್ಪವನು
ಸಗ್ಗಳೆಯ ನೀರನು
ಶುದ್ಧವೆಂದು ಕುಡಿವ ಬುದ್ಧಿಗೇಡಿ ವಿಪ್ರರಿಗೆ
ನಾಯಕನರಕ ತಪ್ಪದಯ್ಯಾ
ಉರಿಲಿಂಗಪೆದ್ದಿಗಳರಸು ಒಲ್ಲನವ್ವಾ (೯೧)

ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ
ಹುಸಿದು ತಂದು ಮಾಡುವಾತ ಭಕ್ತನೆ
ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ
ನಿಂದಯಾ ಶಿವಭಕ್ತಾನಾಂ ಕೋಟಿ ಜನ್ಮನಿ ಸೂಕರಃ
ಸಪ್ತಜನ್ಮನಿ ಭವೇತ್ ಕಷ್ಠೀ ದಾಸೀಗರ್ಭೇಷು ಜಾಯತೇ
ಎಂದುದಾಗಿ
ತನ್ನ ಪ್ರಾಣದ ಮೇಲೆ ಬಂದಡೂ ಬರಲಿ
ಇವರ ಬಿಡಬೇಕು
ಬಿಡದಿರಲು ಉರಿಲಿಂಗಪೆದ್ದಿಗಳರಸನೊಲ್ಲನವ್ವಾ. (೯೨)

ಉಳಿಯುಮೇಶ್ವರ ಚಿಕ್ಕಣ್ಣ

ಊರು : ದೇವರಗುಡಿ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ.
ಅಂಕಿತನಾಮ : ಉಳಿಯುಮೇಶ್ವರ
ದೊರೆತಿರುವ ವಚನಗಳು : ೧೬

ವಾರಣಾಸಿ ಅವಿಮುಕ್ತಿ
ಇಲ್ಲಿಯೇ ಇದ್ದಾನೆ
ಹಿಮದ ಕೇತಾರ ವಿರೂಪಾಕ್ಷ
ಇಲ್ಲಿಯೇ ಇದ್ದಾನೆ
ಗೋಕರ್ಣ ಸೇತುರಾಮೇಶ್ವರ
ಇಲ್ಲಿಯೇ ಇದ್ದಾನೆ
ಶ್ರೀಶೈಲ ಮಲ್ಲಿನಾಥ
ಇಲ್ಲಿಯೇ ಇದ್ದಾನೆ
ಸಕಲಲೋಕ ಪುಣ್ಯಕ್ಷೇತ್ರ
ಇಲ್ಲಿಯೇ ಇದ್ದಾನೆ
ಸಕಳಲಿಂಗ ಉಳಿಯುಮೇಶ್ವರ
ತನ್ನಲ್ಲಿ ಇದ್ದಾನೆ. (೯೩)

೦

ಎಚ್ಚರಿಕೆ ಕಾಯಕದ ಮುಕ್ತನಾಥಯ್ಯ

ಕಸುಬು : ರಾತ್ರಿಯ ಹೊತ್ತಿನಲ್ಲಿ ಊರಿನ ರಕ್ಷಣೆಗಾಗಿ ಗಸ್ತು ತಿರುಗುವುದು
ಅಂಕಿತನಾಮ : ಶುದ್ಧ ಸಿದ್ಧ ಪ್ರಸಿದ್ಧ ಕುರುಂಗೇಶ್ವರಲಿಂಗ
ದೊರೆತಿರುವ ವಚನಗಳು : ೧೧

ನಾಲ್ಕು ಜಾವಕ್ಕೆ ಒಂದು ಜಾವ
ಹಸಿವು ತೃಷೆ ಮಿಕ್ಕಾದ ವಿಷಯದೆಣಿಕೆಗೆ ಸಂದಿತ್ತು
ಮತ್ತೊಂದು ಜಾವ
ನಿದ್ರೆ ಸ್ವಪ್ನ ಕಳವಳ ನಾನಾ ಅವಸ್ಥೆ ಬಿಟ್ಟಿತ್ತು
ಮತ್ತೊಂದು ಜಾವ
ಅಂಗನೆಯರ ಕುಚ ಅಧರಚುಂಬನ
ಮಿಕ್ಕಾದ ಬಹುವಿಧ ಅಂಗವಿಕಾರದಲ್ಲಿ ಸತ್ತಿತ್ತು
ಇನ್ನೊಂದು ಜಾವವಿದೆ
ನೀವು ನೀವು ಬಂದ ಬಟ್ಟೆಯ ತಿಳಿದು
ಮುಂದಳ ಆಗುಚೇಗೆಯನರಿದು
ನಿತ್ಯನೇಮವ ವಿಸ್ತರಿಸಿಕೊಂಡು
ನಿಮ್ಮ ಶಿವಾರ್ಚನೆ ಪೂಜೆ ಪ್ರಣವದ ಪ್ರಮಥಾಳಿ
ಭಾವದ ಬಲಿಕೆ ವಿರಕ್ತಿಯ ಬಿಡುಗಡೆ ಸದ್ಭಕ್ತಿಯ ಮುಕ್ತಿ
ಇಂತೀ ಕೃತ್ಯದ ಕಟ್ಟ ತಪ್ಪದಿರಿ
ಅರುಣೋದಯಕ್ಕೆ ಒಡಲಾಗದ ಮುನ್ನವೆ
ಖಗವಿಹಂಗಾದಿಗಳ ಪಶು ಮೃಗ ನರ ಕುಲದುಲುಹಿಂಗೆ ಮುನ್ನವೆ
ಧ್ಯಾನಾರೂಢರಾಗಿ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಕುರುಂಗೇಶ್ವರಲಿಂಗವ ಕೂಡಬಲ್ಲಡೆ. (೯೪)

೦

ಏಕಾಂತರಾಮಿತಂದೆ

ಊರು	:	ಆಳಂದ, ಗುಲ್ಬರ್ಗಾ ಜಿಲ್ಲೆ.
ತಾಯಿ	:	ಸೀತಮ್ಮ
ತಂದೆ	:	ಪುರುಷೋತ್ತಮ ಭಟ್ಟ
ಅಂಕಿತನಾಮ	:	ಎನ್ನಯ್ಯ ಚೆನ್ನರಾಮ
ದೊರೆತಿರುವ ವಚನಗಳು	:	೬

ಅಶನ ವ್ಯಸನ ಸರ್ವ ವಿಷಯಾದಿಗಳಲ್ಲಿ ಹುಸಿದು
ಪಿಸುಣತ್ವದಿಂದ ಗಸಣಿಗೊಂಡು
ಮಾಡಿಸಿಕೊಂಬುದು
ಸದ್ಗುರುವಿಗೆ ಸಂಬಂಧವಲ್ಲ
ತಿಲರಸವಾರಿಯ ಭೇದದಂತೆ
ಮಣಿಯೊಳಗಿದ್ದ ಸೂತ್ರದಂತೆ
ಅಂಗವ ತೀರ್ಚೆ ಪಾಯ್ದುನಿಂದ ಅಹಿಯ ಅಂಗದಂತೆ
ಗುರುಸ್ಥಲ ಸಂಬಂಧ
ಎನ್ನಯ್ಯ ಚೆನ್ನರಾಮೇಶ್ವರಲಿಂಗವನರಿಯಬಲ್ಲಡೆ. (೯೫)

೦

ಏಲೇಶ್ವರ ಕೇತಯ್ಯ

ಊರು : ಏಲೇಶ್ವರ, ಯಾದಗಿರಿ ಜಿಲ್ಲೆ
ಕಸುಬು : ವ್ಯವಸಾಯ
ಅಂಕಿತನಾಮ : ಏಲೇಶ್ವರಲಿಂಗ
ದೊರೆತಿರುವ ವಚನಗಳು : ೭೫

ಆವ ವ್ರತ ನೇಮವ ಹಿಡಿದಡೂ
ಆ ವ್ರತ ನೇಮದ ಭಾವಶುದ್ಧವಾಗಿರಬೇಕು
ಅಸಿ ಕೃಷಿ ಯಾಚಕ ವಾಣಿಜ್ಯತ್ವದಿಂದ ಬಂದ ದ್ರವ್ಯಂಗಳಲ್ಲಿ
ಬಾಹ್ಯದ ಬಳಕೆ ಅಂತರಂಗದ ನಿರಿಗೆ
ಉಭಯ ಶುದ್ಧವಾಗಿಪ್ಪ ಭಕ್ತನಂಗವೆ
ಏಲೇಶ್ವರಲಿಂಗದಂಗ. (೯೬)

ಕ್ರೀಯ ಅನುವನರಿದಾತ ಗುರುವೆಂಬೆ
ಕ್ರೀಯ ಅನುವನರಿತುದು ಲಿಂಗವೆಂಬೆ
ಕ್ರೀಯ ಅನುವನರಿದಾತ ಜಂಗಮವೆಂಬೆ
ಇಂತೀ ತ್ರಿವಿಧಮೂರ್ತಿ ಆಚಾರಕ್ಕೆ ಅನುಕೂಲವಾಗಿ
ಬಂಗಾರದೊಳಗೆ ಬಣ್ಣವಡಗಿದಂತೆ
ಆ ಬಣ್ಣವೇಧಿಸಿ ಬಂಗಾರವಾದಂತೆ
ಇಂತು ಆಚಾರಕ್ಕೂ ಅರಿವಿಂಗೂ ಪಡಿಪುಚ್ಚವಿಲ್ಲವಾಗಿ
ಆಚಾರವೆ ಕುಲ
ಅನಾಚಾರವೇ ಹೊಲೆ
ಇದಕ್ಕೆ ಒಲವರವಿಲ್ಲ
ಏಲೇಶ್ವರಲಿಂಗವ ಕೇಳಲಿಲ್ಲ. (೯೭)

ಮನಕ್ಕೆ ವ್ರತವ ಮಾಡಿ
ತನುವಿಗೆ ಕ್ರೀಯ ಮಾಡಬೇಕು
ಇಂದ್ರಿಯಂಗಳಿಗೆ ಕಟ್ಟನಿಕ್ಕಿ
ಆತ್ಮನ ಸಂದೇಹವ ಬಿಡಿಸಿ

ಕ್ರೀಯ ಮಾಡಬೇಕು
ಹೀಂಗಲ್ಲದೆ ವ್ರತಾಚಾರಿಯಲ್ಲ
ಮನಕ್ಕೆ ಬಂದಂತೆ ಹರಿದು
ಬಾಯಿಗೆ ಬಂದಂತೆ ನುಡಿದು
ಇಂತೀ ನಾ ವ್ರತಿಯೆಂದರೆ
ಮೂಗನರಿಯದೆ ಮಾಣ
ಏಲೇಶ್ವರಲಿಂಗನು. (೯೮)

ಒಕ್ಕಲಿಗ ಮುದ್ದಣ್ಣ

ಕಸುಬು : ವ್ಯವಸಾಯ
ಅಂಕಿತನಾಮ : ಕಾಮಭೀಮ ಜೀವಧನದೊಡೆಯ
ದೊರೆತಿರುವ ವಚನಗಳು : ೧೨

ಅಂಗವೆ ಭೂಮಿಯಾಗಿ
ಲಿಂಗವೆ ಬೆಳೆಯಾಗಿ
ವಿಶ್ವಾಸವೆಂಬ ಬತ್ತ ಒಲಿದು ಉಂಡು
ಸುಖಿಯಾಗಿರಬೇಕೆಂದ
ಕಾಮಭೀಮ ಜೀವಧನದೊಡೆಯ. (೯೯)

ಪೈರಿಗೆ ನೀರು ಬೇಕೆಂಬಲ್ಲಿ
ಉಚಿತವನರಿದು ಬಿಡಬೇಕು
ಕ್ರೀಗೆ ಅರಿವು ಬೇಕೆಂಬಲ್ಲಿ
ಉಭಯನರಿದು ಘಟಿಸಬೇಕು
ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ
ಮೀರಿದರುಂಟೆ
ಕ್ರೀಯ ಬಿಡಲಿಲ್ಲ
ಅರಿವ ಮರೆಯಲಿಲ್ಲ
ಬೆಳೆಯ ಕೊಯಿದ ಮತ್ತೆ ಹೊಲಕ್ಕೆ ಕಾವಲುಂಟೆ
ಫಲವ ಹೊತ್ತ ಪೈರಿನಂತೆ
ಪೈರನೊಳಕೊಂಡ ಫಲದಂತೆ
ಅರಿವು ಆಚರಣೆಯೆಲ್ಲ ನಿಂದು
ಆಚರಣೆ ಅರಿವಿನಲ್ಲಿ ಲೇಪನಾದ ಮತ್ತೆ
ಕಾಮಭೀಮ ಜೀವಧನದೊಡೆಯನೆಂಬುದ ಭಾವಿಸಲಿಲ್ಲ. (೧೦೦)

ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ
ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ
ವ್ಯವಹರಿಸುವುದಕ್ಕೆ ವೈಶ್ಯನಲ್ಲ
ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯಾ
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ. (೧೦೧)

ಕಂಬದ ಮಾರಿತಂದೆ

ಅಂಕಿತನಾಮ : ಕದಂಬಲಿಂಗ
ದೊರೆತಿರುವ ವಚನಗಳು : ೧೧

ಕಾಯದಿಂದ ಸತ್ಕ್ರೀಯ ಕಂಡೆ
ಸತ್ಕ್ರೀಯಿಂದ ಸದ್ಭಾವವ ಕಂಡೆ
ಸದ್ಭಾವದಿಂದ ನಿಮ್ಮ ನಿಜಮೂರ್ತಿಯ ಕಂಡೆ
ನಿಮ್ಮ ನಿಜಮೂರ್ತಿಯಿಂದ
ಸ್ವಾನುಭಾವವಳವಟ್ಟುದ ಕಂಡೆನಯ್ಯಾ
ಸ್ವಾನುಭಾವ ಜ್ಞಾನದಿಂದ ಅಂಗ ಕರಣೇಂದ್ರಿಯ
ಸೂತಕ ಪಾತಕಕ್ಕೆ ಹೊರಗಾದೆನಯ್ಯಾ
ಕದಂಬಲಿಂಗವೆ
ನೀವೆನ್ನ ಕರಸ್ಥಲದಲ್ಲಿ ಮೂರ್ತಿಗೊಂಡ ಕಾರಣ
ನಿಮ್ಮನೆನ್ನ ಸರ್ವಾಂಗದಲ್ಲಿ ಕಂಡೆನಯ್ಯಾ. (೧೦೨)

೦

ಕದಿರ ರೆಮ್ಮವ್ವೆ

ಕಸುಬು	:	ಕದಿರ ಕಾಯಕ. ರಾಟೆಯಿಂದ ನೂಲನ್ನು ತೆಗೆಯುವುದು. ಕದಿರು=ನೂಲನ್ನು ತೆಗೆಯುವುದಕ್ಕೆ ಬಳಸುವ ಮರದ ಇಲ್ಲವೇ ಲೋಹದ ಕಡ್ಡಿ.
ಅಂಕಿತನಾಮ	:	ಕದಿರ ರೆಮ್ಮೆಯೊಡೆಯ ಗುಮ್ಮೇಶ್ವರ
ದೊರೆತಿರುವ ವಚನಗಳು	:	೪

ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ
ಅಡಿಯ ಹಲಗೆ ಬ್ರಹ್ಮ
ತೋರಣ ವಿಷ್ಣು
ನಿಂದ ಬೊಂಬೆ ಮಹಾರುದ್ರ
ರುದ್ರನ ಬೆಂಬಳಿಯವೆರಡು ಸೂತ್ರಕರ್ಣ
ಅರಿವೆಂಬ ಕದಿರು
ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ
ಸುತ್ತಿತ್ತು ನೂಲು
ಕದಿರು ತುಂಬಿತ್ತು
ರಾಟೆಯ ತಿರುಹಲಾರೆ
ಎನ್ನ ಗಂಡ ಕುಟ್ಟಿಹ
ಇನ್ನೇವೆ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ. (೧೦೩)

೦

ಕಾಳಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ

ಅಂಕಿತನಾಮ : ನಿಜಶಾಂತೇಶ್ವರ
ದೊರೆತಿರುವ ವಚನಗಳು : ೧

ಬಂಜೆಯಾವಿಂಗೆ ಕ್ಷೀರವುಂಟೆ
ವ್ರತಹೀನನ ಬೆರೆಯಲುಂಟೆ
ನೀ ಬೆರೆದಡೂ ಬೆರೆ
ನಾನೊಲ್ಲೆ ನಿಜಶಾಂತೇಶ್ವರಾ. (೧೦೪)

೦

ಕೊಟ್ಟಣದ ಸೋಮಮ್ಮ

ಕಸುಬು	:	ಕೊಟ್ಟಣ ಕುಟ್ಟುವುದು. ಬತ್ತವನ್ನು ಕುಟ್ಟಿ ಅಕ್ಕಿಯನ್ನು ತೆಗೆಯುವುದು. ಕೊಟ್ಟಣ=ಬತ್ತ ಕುಟ್ಟುವ ಒರಳು.
ಅಂಕಿತನಾಮ	:	ನಿರ್ಲಜ್ಜೇಶ್ವರ
ದೊರೆತಿರುವ ವಚನಗಳು	:	೧

ಹದತಪ್ಪಿ ಕುಟ್ಟಲು
ನುಚ್ಚಲ್ಲದೆ ಅಕ್ಕಿಯಿಲ್ಲ
ವ್ರತಹೀನನ ನೆರೆಯೆ
ನರಕವಲ್ಲದೆ ಮುಕ್ತಿಯಿಲ್ಲ
ಅರಿಯದುದು ಹೋಗಲಿ
ಅರಿದು ಬೆರೆದೆನಾದಡೆ
ಒಲ್ಲೆ ಬಲ್ಲೆನಾಗಿ
ನಿಮ್ಮಾಣೆ ನಿರ್ಲಜ್ಜೇಶ್ವರಾ. (೧೦೫)

○

ಕೋಲ ಶಾಂತಯ್ಯ

ಕಸುಬು : **ಕಟ್ಟಿಗೆ ಇಲ್ಲವೇ ಕೋಲನ್ನು ಹಿಡಿದು ಕಾಯಕವನ್ನು ಮಾಡುವುದು.**
ಅಂಕಿತನಾಮ : **ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ**
ದೊರೆತಿರುವ ವಚನಗಳು : **೧೦೩**

ಎನಗುಣಲಿಕ್ಕಿದರಯ್ಯ ಸಿರಿಯಾಳ ಚೆಂಗಳೆಯರು
ಎನಗುಡಕೊಟ್ಟರಯ್ಯಾ ದಾಸ ದುಗ್ಗಳೆಯವರು
ಎನ್ನ ಮುದ್ದಾಡಿಸಿದರಯ್ಯಾ ಅಕ್ಕನಾಗಮ್ಮನವರು
ಎನ್ನ ಸಲಹಿದರಯ್ಯಾ ಅಮ್ಮವ್ವೆ ಕೊಡಗೂಸು
ಚೋಳಿಯಕ್ಕ ನಿಂಬವ್ವೆ ನೀಲಮ್ಮ
ಮಹಾದೇವಿ ಮುಕ್ತಾಯಕ್ಕಗಳು
ಇಂತಿವರ ಒಕ್ಕುಮಿಕ್ಕ ತಾಂಬೂಲ ಪ್ರಸಾದವ
ಕೊಂಡು ಬದುಕಿದೆನಯ್ಯಾ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. (೧೦೬)

ಜಡೆ ಮುಡಿ ಬೋಳು ಹೇಗಿದ್ದರೇನೊ
ನಡೆ ನುಡಿ ಸಿದ್ಧಾಂತವಾದಡೆ ಸಾಕು
ಆತ ಪರಂಜ್ಯೋತಿ ಗುರುವಹ
ಆ ಇರವ ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. (೧೦೭)

ಮಾಡಿ ಆಡಲೇತಕ್ಕೆ ಸಲಹಿ ಕೊಲಲೇತಕ್ಕೆ
ಬಿತ್ತಿ ಕೀಳಲೇತಕ್ಕೆ ಕಟ್ಟಿ ಒಡೆಯಲೇತಕ್ಕೆ
ಮಾಡಿ ಮಾಡಿ ಮನಗುಂದಿದವು
ನೀಡಿ ನೀಡಿ ನಿಜಗುಂದುವ ಬೇಡ
ಆ ಮಾಟವ ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. (೧೦೮)

ಮಾತಬಲ್ಲವನಾದಡೆ
ಸರ್ವ ಜೀವದ ನೀತಿಯನರಿಬೇಕು
ಜ್ಞಾತೃ ಜ್ಞಾನ ಜ್ಞೇಯ ಭಾವವ ಬಲ್ಲಡೆ
ಇದಿರ ಭೂತಹಿತವ ಬಲ್ಲವನಾಗಿ ಇರಬೇಕು
ಸುಜ್ಞಾನವರಿತಡೆ
ಭವಪಾಶ ಪಾಕುಳರನರಿಯಬೇಕು
ಇದೆಲ್ಲವನರಿತು ತನ್ನನರಿಯಬೇಕು
ಆ ಅನ್ಯ ಭಿನ್ನವ ತಿಳಿ ನಿನ್ನ ನೀನೆ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. (೧೦೯)

ಬಿತ್ತಿದ ಬೆಳೆ ಕಟ್ಟಿದ ಕೆರೆ
ಸಲಹಿದ ಶರೀರ ನೆಟ್ಟ ವೃಕ್ಷ
ತನಗಲ್ಲದೆ ಅವಕ್ಕೊಡಲುಂಟೆ
ತಾ ಮಾಡುವ ಭಕ್ತಿ ತನಗಲ್ಲದೆ
ಬೇರೊಂದು ಗುಣವನರಸಲಿಲ್ಲ
ಆ ಪರಿಯ ನಿನ್ನ ನೀ ತಿಳಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. (೧೧೦)

೦

ಗಜೇಶ ಮಸಣಯ್ಯ

ಊರು : **ಕರಜಗಿ, ಅಕ್ಕಲಕೋಟೆ ತಾಲ್ಲೂಕು, ವಿಜಾಪುರ ಜಿಲ್ಲೆ.**
ಅಂಕಿತನಾಮ : **ಮಹಾಲಿಂಗ ಗಜೇಶ್ವರ**
ದೊರೆತಿರುವ ವಚನಗಳು : **೭೦**

ಒಲಿದವರ ಕೊಲುವಡೆ
ಮಸೆದ ಕೂರಲಗೇಕೆ
ಅವರನೊಲ್ಲೆನೆಂದಡೆ ಸಾಲದೆ
ಮಹಾಲಿಂಗ ಗಜೇಶ್ವರನ ಶರಣರನಗಲಿದಡೆ
ತುಪ್ಪದಲ್ಲಿ ಕಿಚ್ಚ ನಂದಿಸಿದಂತಾದೆನವ್ವಾ. (೧೧೧)

ಕೂಪರನಗಲುವದು
ಆತ್ಮಘಾತಕವವ್ವಾ
ದಿಬ್ಯವ ತುಡುಕಿದಡೆ
ಕೈ ಬೇವುದಲ್ಲದೆ ಮೈ ಬೇವುದೆ
ಒಲಿದವರನಗಲಿದಡೆ
ಸರ್ವಾಂಗವೂ ಬೇವುದವ್ವಾ
ಮಹಾಲಿಂಗ ಗಜೇಶ್ವರನನಗಲಿ
ಆವುಗೆಯ ಮಧ್ಯದ ಘಟದಂತಾದೆನವ್ವಾ. (೧೧೨)

ದೇವರ ನೆನೆದು ಮುಕ್ತರಾದೆವೆಂಬ
ಯುಕ್ತಿಶೂನ್ಯರ ಮಾತ ಕೇಳಲಾಗದು
ಅದೇನು ಕಾರಣವೆಂದಡೆ
ದೇವರ ನೆನೆವಂಗೆ ದೇವರುಂಟೆ
ದೂರ ದೂರದಲ್ಲಿದ್ದವರ ನೆನೆವರಲ್ಲದೆ
ಸಮೀಪದಲ್ಲಿದ್ದವರ ನೆನೆವವರಿಲ್ಲ
ಇದನರಿದು ನೀನೆನ್ನೊಳಗಡಗಿ
ನಾ ನಿನ್ನ ನೆನೆಯಲಿಲ್ಲ
ನೀನೆನಗೆ ಮುಕ್ತಿಯನೀಯಲಿಲ್ಲ
ನೀನಾನೆಂದೆನಲಿಲ್ಲ ಮಹಾಲಿಂಗ ಗಜೇಶ್ವರಾ. (೧೧೩)

೦

ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ

ವಚನಕಾರ್ತಿಯ ಹೆಸರು ತಿಳಿದುಬಂದಿಲ್ಲ.
ಗಂಡ : ಗಜೇಶ ಮಸಣಯ್ಯ
ಅಂಕಿತನಾಮ : ಮಸಣಪ್ರಿಯ ಗಜೇಶ್ವರ
ದೊರೆತಿರುವ ವಚನಗಳು : ೧೦

ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ
ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು
ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ
ಮಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು
ಮಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ
ಅಂಗವ ಬಿಟ್ಟು ಲಿಂಗವನೊಲಿಸಬೇಕೆಂಬರು
ಅಂಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ
ಇಂದ್ರಿಯಂಗಳ ಬಿಟ್ಟು ಲಿಂಗವನೊಲಿಸಬೇಕೆಂಬರು
ಇಂದ್ರಿಯಂಗಳಿಗೆಯೂ ಲಿಂಗಕ್ಕೆಯೂ ವಿರುದ್ಧವೆ
ಜಗವ ಬಿಟ್ಟು ಲಿಂಗವನೊಲಿಸಬೇಕೆಂಬರು
ಜಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ
ಇದು ಕಾರಣ
ಪರಂಜ್ಯೋತಿ ಪರಮ ಕರುಣಿ ಪರಮ ಶಾಂತನೆಂಬ ಲಿಂಗವು
ಕೋಪದ ಮುನಿಸನರಿದಡೆ ಕಾಣಬಹುದು
ಮರೆದಡೆ ಕಾಣಬಾರದು
ಅರಿವಿಂದ ಕಂಡೊದಗಿದ ಸುಖವು
ಮಸಣಯ್ಯಪ್ರಿಯ ಗಜೇಶ್ವರಾ. (೧೧೪)

೦

ಗಾವುದಿ ಮಾಚಯ್ಯ

ಅಂಕಿತನಾಮ : ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ
ದೊರೆತಿರುವ ವಚನಗಳು : ೧೧

ಎನ್ನಂತರಂಗವೆ ಬಸವಣ್ಣನಯ್ಯಾ
ಎನ್ನ ಬಹಿರಂಗವೆ ಚೆನ್ನಬಸವಣ್ಣನಯ್ಯಾ
ಎನ್ನ ಸರ್ವಾಂಗವೆ ಪ್ರಭುದೇವರಯ್ಯಾ
ಇಂತಿವರ ಕರುಣದ ಕಂದನಾಗಿ ಬದುಕಿದೆನಯ್ಯಾ
ತ್ರಿಪುರಾಂತಕ ಲಿಂಗದಲ್ಲಿ
ಗಾವುದಿ ಮಾಚಯ್ಯ ಹೇಳಿದುದ ದಿಟವೆನ್ನಿರಣ್ಣಾ. (೧೧೫)

೦

ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ

ಊರು : ಭಲ್ಲುಕೆ/ಬಾಲ್ಕಿ, ಬೀದರ್ ಜಿಲ್ಲೆ.
ಗಂಡ : ಕುಂಬಾರ ಗುಂಡಯ್ಯ
ಕಸುಬು : ಗಡಿಗೆಯನ್ನು ಮಾಡುವ ಕಾಯಕ.
ಅಂಕಿತನಾಮ : ಕುಂಭೇಶ್ವರ
ದೊರೆತಿರುವ ವಚನಗಳು : ೨

ಹದ ಮಣ್ಣಲ್ಲದೆ ಮಡಕೆಯಾಗಲಾರದು
ವ್ರತಹೀನನ ಬೆರೆಯಲಾಗದು
ಬೆರೆದಡೆ ನರಕ ತಪ್ಪದು
ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರಾ. (೧೧೬)

೦

ಗುಪ್ತ ಮಂಚಣ್ಣ

ಅಂಕಿತನಾಮ : ನಾರಾಯಣಪ್ರಿಯ ರಾಮನಾಥ
ದೊರೆತಿರುವ ವಚನಗಳು : ೧೦೦

ಉಳಿಯ ಹಿಡಿಯಲ್ಲಿ
ಕಲೆ ಮಾಡಿಸಿಕೊಂಡ ದೇವರಿಗೆ
ಅಳಿವು ಉಳಿವಲ್ಲದೆ
ಉಳಿಗೆ ಹೊರಗಾದ ಅಳಿಯದವನನರಿಯಾ
ನಾರಾಯಣಪ್ರಿಯ ರಾಮನಾಥಾ. (೧೧೭)

ಕಳವು ಹಾದರಕ್ಕೆ ಗುಪ್ತ
ಶಿವಭಕ್ತಿ ಶಿವಪೂಜೆ ಶಿವಜ್ಞಾನ ಇಂತಿವಕ್ಕೆ
ಬಾಹ್ಯಾಡಂಬರವೆ
ಅರಿವುದೊಂದು ಅರುಹಿಸಿಕೊಂಬುದೊಂದು
ಇಂತೀ ಉಭಯ ಸುಖ ಸಂಭಾಷಣವಲ್ಲದೆ
ರಟ್ಟೆಯ ಪೂಜೆ ಕರ್ಕಶದನುಭವ
ಡೊಂಬರ ಡೊಳ್ಳ ಕೇಳಿ ಬಂದವರೆಲ್ಲರು
ನಿಂದು ನೋಡಿ
ತಮ್ಮ ತಮ್ಮ ಮಂದಿರಕ್ಕೆ ಹೋಹಂತಾಯಿತ್ತು
ಈ ಪಥದ ಸಂದನಾರು ಅರಿಯರು
ನಾರಾಯಣಪ್ರಿಯ ರಾಮನಾಥನಲ್ಲಿ
ತನ್ನ ತಾನೆ ತಿಳಿದ ಶರಣ ಬಲ್ಲ. (೧೧೮)

ಕೀರ್ತಿಗೆ ಜಗವ ಕೊಂಡು ಮಾಡುವಾತ ಭಕ್ತನೆ
ನಿಂದಿಸಿಹರೆಂದು ಅಂಜಿಕೊಂಡಿಪ್ಪವ ತಪಸಿಯಲ್ಲ
ಜಗವ ಮೆಚ್ಚಬೇಕೆಂದು ಮಾಡುವಾತ ಭಕ್ತನಲ್ಲ
ಇಚ್ಛೆಗೆ ನುಡಿವವ ವಿರಕ್ತನಲ್ಲ
ಇದರಚ್ಚುಗ ನಿಮಗೇಕೆ
ನಾರಾಯಣಪ್ರಿಯ ರಾಮನಾಥ
ಒಚ್ಚತ ನಿಮ್ಮನೊಲ್ಲ. (೧೧೯)

ಕುರುಡ ಕೈಯ ಕೋಲ ಹಿಂಗಿದಾಗ
ಅವ ಅಡಿಯಿಡಬಲ್ಲನೆ
ಮೃಡಭಕ್ತಿಯ ಮಾಡುವಂಗೆ ದೃಢಚಿತ್ತವಿಲ್ಲದಿರ್ದಡೆ
ಕಡೆಗಾಣಿಸಬಲ್ಲನೆ
ಇಂತೀ ವಿಶ್ವಾಸದಡಿ ಬೆಚ್ಚಂತಿರಬೇಕು
ನಾರಾಯಣಪ್ರಿಯ ರಾಮನಾಥನಲ್ಲಿ. (೧೨೦)

ಡಂಬಕದ ಪೂಜೆ
ಹೋಹ ಹೊತ್ತಿನ ಕೇಡು
ಆಡಂಬರದ ಪೂಜೆ
ತಾಮ್ರದ ಮೇಲಣ ಸುವರ್ಣದ ಛಾಯೆ
ಇಂತೀ ಪೂಜೆಗೆ ಹೂ ಸೊಪ್ಪನಿಕ್ಕಿ
ಮನ ಹೂಣದೆ ಮಾಡುವ ಪೂಜೆ
ಬೇರು ನನೆಯದ ನೀರು
ಆಯವಿಲ್ಲದ ಗಾಯ
ಭಾವವಿಲ್ಲದ ಘಟ ವಾಯವೆಂದ
ನಾರಾಯಣಪ್ರಿಯ ರಾಮನಾಥಾ. (೧೨೧)

ಗುರುಪುರದ ಮಲ್ಲಯ್ಯ

ಅಂಕಿತನಾಮ : ಪುರದ ಮಲ್ಲಯ್ಯ
ದೊರೆತಿರುವ ವಚನಗಳು : ೪

ಹೊತ್ತಿಂಗೊಂದು ಪರಿಯಹ ಮನವ ಕಂಡು
ದಿನಕ್ಕೊಂದು ಪರಿಯಹ ತನುವ ಕಂಡು
ಅಂದಂದಿಗೆ ಭಯದೋರುತ್ತಿದೆ
ಒಂದು ನಿಮಿಷಕ್ಕನಂತವನೆ
ನೆನೆವ ಮನವ ಕಂಡು
ಅಂದಂದಿಂಗೆ ಭಯವಾಗುತ್ತಿದೆ
ಈ ಮನ ನಿಮ್ಮ ನೆನೆಯಲೀಯದು
ಮನ ಹಗೆಯಾದುದಯ್ಯಾ
ಸದ್ಗುರುವೆ ಪುರದ ಮಲ್ಲಯ್ಯಾ. (೧೨೨)

○

ಗೊಗ್ಗವ್ವೆ

ಊರು : ಕೇರಳದ ಆವಲೂರು
ಕಸುಬು : ಶಿವಭಕ್ತರಿಗೆ ಧೂಪ ನೀಡುವುದು.
ಅಂಕಿತನಾಮ : ನಾಸ್ತಿನಾಥ
ದೊರೆತಿರುವ ವಚನಗಳು : ೬

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೊ ಗಂಡೊ ನಾಸ್ತಿನಾಥಾ. (೧೨೩)

೦

ಗೋರಕ್ಷ

ಊರು : ಪಟ್ಟದಕಲ್ಲು, ಉತ್ತರ ಕರ್ನಾಟಕ
ಕಸುಬು : ದನಗಳನ್ನು ಮೇಯಿಸುವುದು
ಅಂಕಿತನಾಮ : ಗೋರಕ್ಷಪಾಲಕ ಮಹಾಪ್ರಭು ಸಿದ್ಧ ಸೋಮನಾಥಲಿಂಗ
ದೊರೆತಿರುವ ವಚನಗಳು : ೧೧

ವಿಷಕ್ಕೆ ಅಂಜುವರಲ್ಲದೆ
ಸರ್ಪಂಗೆ ಅಂಜುವರುಂಟೆ
ಕೊಲುವ ವ್ಯಾಘ್ರಂಗೆ ಅಂಜುವರಲ್ಲದೆ
ಸುಲಿದ ಬಣ್ಣಕ್ಕೆ ಅಂಜುವರುಂಟೆ
ಅರಿವು ಸಂಪನ್ನರಲ್ಲಿ ಇದಿರೆಡೆಯಡಗಬೇಕಲ್ಲದೆ
ಬರುಕಾಯದ ದರುಶನ ಬಿರುಬರಲ್ಲಿ ಉಂಟೆ
ನೆರೆಯರಿವಿನ ಹೊಲಬು ಕಾಯಕಾಂಡ ಕರ್ಮಕಾಂಡಿಗಳಲ್ಲಿ
ಜ್ಞಾನಹೀನ ಪಾಷಂಡಿಗಳಲ್ಲಿ
ಆವ ಭಾವದ ಮಾರ್ಗವನು
ನಿಧಾನಿಸಿ ಉಪೇಕ್ಷಿಸಲಿಲ್ಲ
ಗೋರಕ್ಷಪಾಲಕ ಮಹಾಪ್ರಭು
ಸಿದ್ಧಸೋಮನಾಥ ಲಿಂಗವನರಿದವರಲ್ಲಿಯಲ್ಲದೆ. (೧೨೪)

೦

ಘಟ್ಟಿವಾಳಯ್ಯ

ಅಂಕಿತನಾಮ : ಚಿಕ್ಕಯ್ಯಪ್ರಿಯ ಸಿದ್ಧಲಿಂಗ
ದೊರೆತಿರುವ ವಚನಗಳು : ೧೪೭

ಒಡೆದ ಮಡಕೆಗೆ
ಸರಿಯಿಂದ ಸಂದು ಕೂಡುವುದೆ
ದಗ್ಧವಾದ ಪಟ
ಅಗಸರ ಕಲ್ಲಿಗೆ ಹೊದ್ದುವುದೆ
ಬದ್ಧ ಭವಿಗಳೆಂದು ಬಿಟ್ಟ ಮತ್ತೆ
ಸಮಯದ ಹೊದ್ದಿಗೆ ಏಕೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. (೧೨೫)

ತಪವೆಂಬುದು ಬಂಧನ
ನೇಮವೆಂಬುದು ತಗಹು
ಶೀಲವೆಂಬುದು ಸೂತಕ
ಕಟ್ಟಿನ ವ್ರತದ ಭಾಷೆಯೆಂಬುದು
ನಗೆಗೆಡೆಯಾಯಿತ್ತು ನೋಡಾ
ನಗೆ ಹೊಗೆವಣ್ಣಿದಲ್ಲಿ ಹೊಗೆ ಜಗವಾದಡೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ
ನಿಲ್ಲು ಮಾಣು. (೧೨೬)

ಚಂದಿಮರಸ

ಊರು : ಚಿಮ್ಮಲಿಗೆ ಗ್ರಾಮ, ಬೀಳಗಿ ತಾಲ್ಲೂಕು, ಬಾಗಿಲಕೋಟೆ ಜಿಲ್ಲೆ
ಅಂಕಿತನಾಮ : ಸಿಮ್ಮಲಿಗೆಯ ಚೆನ್ನರಾಮ
ದೊರೆತಿರುವ ವಚನಗಳು : ೧೫೭

ಅರಿಯದ ಗುರು ಅರಿಯದ ಶಿಷ್ಯಂಗೆ
ಅನುಗ್ರಹವ ಮಾಡಿದಡೇನಪ್ಪುದೆಲವೋ
ಅಂಧಕನ ಕೈಯ ಅಂಧಕ ಹಿಡಿದಂತೆ
ಮುಂದೇನಪ್ಪುದು ಹೇಳೆಲೆ ಮರುಳೆ
ಬರುಮಾತಿನ ರಂಜನೆಯನಾಡದಿರು
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು
ಹುಸಿಯ ಹಸರದವನಲ್ಲ. (೧೨೭)

ಕವಿ ಗಮಕಿ ವಾದಿ ವಾಗ್ಮಿಯೆಂಬವರ ಮಾತಿಂಗಿಲ್ಲ
ಶಾಸ್ತ್ರಕರ ಶಾಸ್ತ್ರಕ್ಕಿಲ್ಲ
ತರ್ಕಿಗಳ ತರ್ಕಕ್ಕಿಲ್ಲ
ಶಬ್ದಿಕರ ಶಬ್ದ ನೆರೆಯವ ತೋರುವಡೆ ವಿಷಯವಾಗಿರದು
ಅರಿವೊಡೆ ಅತರ್ಕ್ಯ
ಅದು ನಿನ್ನಲ್ಲಿಯೆ ಅದೆ
ಸಿಮ್ಮಲಿಗೆಯ ಚೆನ್ನರಾಮಾ. (೧೨೮)

ಕಿಚ್ಚು ದೈವವೆಂದು ಹವಿಯ ಬೇಳುವರು
ಕಿಚ್ಚು ಹಾರುವರ ಮನೆಯ ಸುಡುವಾಗ
ಬಚ್ಚಲ ಕೆಸರ ಬೀದಿಯ ಧೂಳ ಚೆಲ್ಲಿ
ಬೊಬ್ಬಿರಿದೆಲ್ಲರ ಕರೆವರು
ಸಿಮ್ಮಲಿಗೆಯ ಚೆನ್ನರಾಮನ ಮಂತ್ರ ತಪ್ಪಿದ ಬಳಿಕ
ವಂದಿಸುವುದ ಬಿಟ್ಟು ನಂದಿಸುತ್ತಿದ್ದರು. (೧೨೯)
ತನ್ನದಾದಡೇನೋ ಕನ್ನಡಿ

ಅನ್ಯರದಾದಡೇನೋ ಕನ್ನಡಿ
ತನ್ನ ರೂಪ ಕಂಡಡೆ ಸಾಲದೆ
ಸದ್ಗುರು ಆವನಾದಡೇನೋ
ತನ್ನನರುಹಿಸಿದಡೆ ಸಾಲದೆ
ಸಿಮ್ಮಲಿಗೆಯ ಚೆನ್ನರಾಮಾ. (೧೩೦)

ಬಟ್ಟೆಗೊಂಡು ಹೋಗುತಿಪ್ಪ ಮನುಜನೊಬ್ಬ
ಹುಲಿ ಕಾಡುಗಿಚ್ಚು ರಕ್ಕಸಿ ಕಾಡಾನೆಗಳು
ನಾಲ್ಕೂ ದೆಸೆಯಲಟ್ಟುತ ಬರೆ
ಕಂಡು ಭಯದಿಂದ ಹೋಗ ದೆಸೆಯಿಲ್ಲದೆ
ಬಾವಿಯ ಕಂಡು ತಲೆಯನೂರಿ ಬೀಳುವಲ್ಲಿ
ಹಾವ ಕಂಡು ಇಲಿಗಡಿದ ಬಳ್ಳಿಯ ಹಿಡಿದು ನಿಲೆ
ಜೇನುಹುಳು ಮೈಯನೂರುವಾಗ
ಮೂಗಿನ ತುದಿಯಲೊಂದು ಹನಿ ಮಧು ಬಂದು ಬೀಳೆ
ಆ ಮಧುವ ಕಂಡು ಹಿರಿದಪ್ಪ ದುಃಖವೆಲ್ಲವೆಲ್ಲವ ಸೈರಿಸಿ
ನಾಲಗೆಯ ತುದಿಯಲ್ಲಿ ಆ ಮಧುವ ಸೇವಿಸುವಂತೆ
ಈ ಸಂಸಾರಸುಖ ವಿಚಾರಿಸಿ ನೋಡಿದಡೆ ದುಃಖದಾಗರ
ಇದನರಿದು ಸಕಲ ವಿಷಯಂಗಳಲ್ಲಿ ಸುಖವಿಂತುಟೆಂದು
ನಿರ್ವಿಷಯನಾಗಿ ನಿಂದ ನಿಲವು ನೀನೇ
ಸಿಮ್ಮಲಿಗೆಯ ಚೆನ್ನರಾಮಾ. (೧೩೧)

ಹಾವ ಹೊತ್ತುಕೊಂಡು ಹೋಗುತ್ತ ಹಾವಾಡಿಗ
ನಡೆಯಲ್ಲಿ ಹಾವ ಕಂಡು
ಮರಳುವ ಗಾವಿಲತನವ ನೋಡಾ
ತನ್ನಿಂದನ್ಯವೆಂದಡೆ ಭಿನ್ನ ವ್ಯತಿಕರವಾಯಿತ್ತು
ತನ್ನ ಪರಮಾರ್ಥ ತನ್ನಲ್ಲಿ
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗ
ಮಾಯಾ ಮರ್ಕಟ ಜಡವೆ. (೧೩೨)

ಹುಲ್ಲ ಮನುಷ್ಯನ ಕಂಡು
ಹುಲ್ಲೆ ತಾ ಬೆದರುವಂತೆ
ಇಲ್ಲದ ಶಂಕೆಯನುಂಟೆಂಬನ್ನಕ್ಕ
ಅದಲ್ಲಿಯೇ ರೂಪಾಯಿತ್ತು
ಹೇಡಿಗಳನೇಡಿಸಿ ಕಾಡಿತ್ತು
ಸಿಮ್ಮಲಿಗೆಯ ಚೆನ್ನರಾಮನೆಂಬ ಭಾವದ ಗಸಣಿ. (೧೩೩)

ಚೆನ್ನಬಸವಣ್ಣ

ಅಂಕಿತನಾಮ : ಕೂಡಲ ಚೆನ್ನಸಂಗಮದೇವ
ದೊರೆತಿರುವ ವಚನಗಳು : ೧೭೭೬

ಅರ್ಥ ಮದ ಅಹಂಕಾರ ಮದ
ಕುಲ ಮದ ಬಿಡದೆ
ಸಮಯಾಚಾರ ಸಮಯ ಭಕ್ತಿ
ಇನ್ನಾರಿಗೆಯೂ ಅಳವಡದು ನೋಡಾ
ಮಾತಿನ ಮಾತಿನ ಮಿಂಚಿನ ಥಾಳಕರಿಗೆ
ಸಮಯ ಭಕ್ತಿ ಇನ್ನೆಲ್ಲಿಯದೊ
ಕೂಡಲ ಚೆನ್ನಸಂಗಯ್ಯ. (೧೩೪)

ಓದಿದರೇನು ಕೇಳಿದರೇನು
ಆಸೆ ಅಳಿಯದು ರೋಷ ಬಿಡದು
ಮಜ್ಜನಕ್ಕೆ ನೀಡಿ ಫಲವೇನು
ವಚನಾರಂಭದ ನುಡಿಯ ಕಲಿತವರೆಲ್ಲ ಅನುಭಾವಿಗಳಪ್ಪರೆ
ಅಷ್ಟಾಷಷ್ಠಿ ತೀರ್ಥಂಗಳ ಮೆಟ್ಟಿದವರೆಲ್ಲ ತೀರ್ಥವಾಸಿಗಳಪ್ಪರೆ
ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡಿದವರೆಲ್ಲ
ಲಿಂಗಾರ್ಚಕರಪ್ಪರೆ ಅಲ್ಲ
ಲಾಂಛನವ ಹೊತ್ತು ಕಾಂಚನಕ್ಕೆ ಕೈಯ ನೀಡುವ
ಜಗಭಂಡರ ಮೆಚ್ಚುವನೆ ಕೂಡಲ ಚೆನ್ನಸಂಗಮದೇವ. (೧೩೫)

ಕುಲಹೀನ ಶಿಷ್ಯಂಗೆ ಅನುಗ್ರಹವ ಕೊಟ್ಟು
ತನ್ನ ಪ್ರಾಣಲಿಂಗವ ನಿಕ್ಷೇಪಿಸಿ ಕರ್ಣಮಂತ್ರವ ಹೇಳಿ
ಆ ಗುರು ಬಂದು ಆ ಶಿಷ್ಯನ ಮನೆಯ ಹೊಗಲೊಲ್ಲದೆ
ಅಕ್ಕಿ ತುಪ್ಪವನೀಸಿಕೊಂಬವನ ಕೇಡಿಂಗೆ ಇನ್ನೇವೆನಯ್ಯಾ
ತನ್ನ ಪ್ರಾಣಲಿಂಗವನವನಿಗೆ ಕೊಟ್ಟು ತಾ ಹುಗೆನೆಂಬ
ವ್ರತಗೇಡಿಯ ಇನ್ನೇನೆನಬಹುದಯ್ಯಾ
ಅವನ ಧನಕ್ಕೆ ತಂದೆಯಾದನಲ್ಲದೆ ಅವನಿಗೆ ತಂದೆಯಾದುದಿಲ್ಲ

ಇದು ಕಾರಣ ಕೂಡಲ ಚೆನ್ನಸಂಗಯ್ಯ
ಆ ಲಿಂಗವ ಮಾರಿಕೊಂಡುಂಬ ಭಂಗಕಾರರು
ಕೆಟ್ಟಕೇಡನೇನೆಂಬೆನಯ್ಯಾ. (೧೩೬)

ಜೈನನ ಮನದ ಕೊನೆಯ ಮೊನೆಯ ಮೇಲೆ
ಕೊಲೆಯಿಪ್ಪುದಲ್ಲದೆ ವ್ರತವಿಲ್ಲ
ಸನ್ಯಾಸಿಯ ಮನದ ಕೊನೆಯ ಮೊನೆಯ ಮೇಲೆ
ಹೆಣ್ಣಿಪ್ಪುದಲ್ಲದೆ ಸನ್ಯಾಸವಿಲ್ಲ
ತಪಸ್ವಿಯ ಮನದ ಕೊನೆಯ ಮೊನೆಯ ಮೇಲೆ
ಸಂಸಾರವಿಪ್ಪುದಲ್ಲದೆ ತಪಸ್ಸಿಲ್ಲ
ವಿಪ್ರನ ಮನದ ಕೊನೆಯ ಮೊನೆಯ ಮೇಲೆ
ಹೊಲೆಯಿಪ್ಪುದಲ್ಲದೆ ವಿಪ್ರತ್ವವಿಲ್ಲ
ಶೀಲವಂತನ ಮನದ ಕೊನೆಯ ಮೊನೆಯ ಮೇಲೆ
ಭವಿಯಿಪ್ಪನಲ್ಲದೆ ಲಿಂಗವಿಲ್ಲ
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣರ ಮನದ ಕೊನೆಯ ಮೊನೆಯ ಮೇಲೆ
ಲಿಂಗವಿಪ್ಪುದು. (೧೩೭)

ತನು ಮನ ಬಳಲದೆ
ಉದ್ದಂಡವೃತ್ತಿಯಲ್ಲಿ ಧನವ ಗಳಿಸಿ ತಂದು
ಗುರುಲಿಂಗಜಂಗಮಕ್ಕೆ ವೆಚ್ಚಿಸಿ ದಾಸೋಹವ ಮಾಡಿ
ಭಕ್ತರಾದೆವೆಂಬವರನೆನಗೆ ತೋರದಿರಯ್ಯಾ
ಅದೇಕೆಂದರೆ
ಅವ ಪರಧನ ಚೋರಕ
ಅವ ಪಾಪಿ
ಅವಗೆ ವಿಚಾರಿಸದೆ ಉಪದೇಶವ ಕೊಟ್ಟ ಗುರುವಿಂಗೆ ರೌರವ ನರಕ
ಅವನ ಕಾಯಕವ ವಿಚಾರಿಸದೆ ಅವರ ಮನೆಯಲ್ಲಿ ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮಕ್ಕೆ ಏಳನೆಯ ಪಾತಕ
ಇಂತಹರ ಬದುಕು
ಹುಲಿ ಕಪಿಲೆಯ ತಿಂದು

ಮಿಕ್ಕುದ ನರಿ ಬಂದು ತಿಂಬಂತೆ ಕಾಣಾ
ಕೂಡಲ ಚೆನ್ನಸಂಗಮದೇವಾ. (೧೩೮)

ತಪವೆಂಬುದು ಬಂಧನ
ನೇಮವೆಂಬುದು ತಗಹು
ಶೀಲವೆಂಬುದು ಸೂತಕ
ಭಾಷೆಯೆಂಬುದು ಪ್ರಾಣಘಾತಕ
ಈ ಚತುರ್ವಿಧದೊಳಗೆ ಇಲ್ಲ
ಕೂಡಲ ಚೆನ್ನಸಂಗಯ್ಯ ಏಕೋಗ್ರಾಹಿ. (೧೩೯)

ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೆ
ಸತ್ಯವುಳ್ಳಾತಂಗೆ ತತ್ವವಿಚಾರದ ಹಂಗೇಕೆ
ಅರಿವುಳ್ಳಾತಂಗೆ ಅಗ್ಘವಣಿಯ ಹಂಗೇಕೆ
ಮನಶುದ್ಧವುಳ್ಳವಂಗೆ ಮಂತ್ರದ ಹಂಗೇಕೆ
ಭಾವ ಶುದ್ಧವುಳ್ಳವಂಗೆ ಹೂವಿನ ಹಂಗೇಕೆ
ಕೂಡಲ ಚೆನ್ನಸಂಗಯ್ಯಾ
ನಿಮ್ಮನರಿದಾತಂಗೆ ನಿಮ್ಮ ಹಂಗೇಕೆ. (೧೪೦)

ಭಕ್ತ ಶಾಂತನಾಗಿರಬೇಕು
ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು
ಭೂತಹಿತವಹ ವಚನವ ನುಡಿಯಬೇಕು
ಗುರು ಲಿಂಗ ಜಂಗಮದಲ್ಲಿ ನಿಂದೆಯಿಲ್ಲದಿರಬೇಕು
ಸಕಲ ಪ್ರಾಣಿಗಳ ತನ್ನಂತೆ ಭಾವಿಸೂದು ಮಾಡಬೇಕು
ತನುಮನಧನವ ಗುರುಲಿಂಗಜಂಗಮಕ್ಕೆ ಸವೆಸಲೇಬೇಕು
ಅಪಾತ್ರ ದಾನವ ಮಾಡಲಾಗದು
ಸಕಲೇಂದ್ರಿಗಳ ತನ್ನ ವಶವ ಮಾಡಬೇಕು
ಇದೇ ಮೊದಲಲ್ಲಿ ಬೇಹ ಶೌಚ ನೋಡಾ
ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ
ಎನಗಿದೇ ಸಾಧನ ಕೂಡಲ ಚೆನ್ನಸಂಗಮದೇವಾ. (೧೪೧)

ಮಡಿಲಲ್ಲಿ ಸುತ್ತಿದ ಹಾವಿನಂತೆ
ಮಡಿಲಲ್ಲಿ ಕಟ್ಟಿದಡೇನು
ಕೊರಳಲ್ಲಿ ಸುತ್ತಿದ ಹಾವಿನಂತೆ
ಕೊರಳಲ್ಲಿ ಕಟ್ಟಿದಡೇನು
ಕಳವು ಹಾದರ ಭವಿಯ ಸಂಗ
ಅನ್ಯ ದೈವವ ಬಿಡದನ್ನಕ್ಕ
ಲಿಂಗಭಕ್ತನೆನಿಸಲು ಬಾರದಯ್ಯ
ಅನಾಚಾರದಿಂದ ನರಕ
ಆಚಾರದಿಂದ ಸ್ವರ್ಗ
ಕೂಡಲ ಚೆನ್ನಸಂಗಯ್ಯನೊಲ್ಲ ಭೂಮಿಭಾರಕರ. (೧೪೨)

ಮಾತ ಕಲಿತು ಮಂಡೆಯ ಬೋಳಿಸಿಕೊಂಡಡೇನು
ವೇಷಲಾಂಛನಧಾರಿ ಉದರಪೋಷಕರಪ್ಪರಲ್ಲದೆ
ಆಗಮಾಚಾರಿಯಾಗಲರಿಯರು ಕಾಣಿರೇ
ಅಷ್ಟವಿಧಾರ್ಚನೆ ಷೋಡಶೋಪಚಾರಕ್ಕೆ ಸಲ್ಲದು
ಸೀಮೆಯ ಕಲ್ಲು
ಅನ್ಯರ ಬೋಸರಿಸಿ ತನ್ನ ಉದರವ ಹೊರೆವ
ವೇಷಡಂಬಕರ ಮೆಚ್ಚ
ನಮ್ಮ ಕೂಡಲ ಚೆನ್ನಸಂಗಮದೇವ. (೧೪೩)

ಜಗಳಗಂಟ ಕಾಮಣ್ಣ

ಅಂಕಿತನಾಮ : ಕಾಮೇಶ್ವರ
ದೊರೆತಿರುವ ವಚನಗಳು : ೪

ಸಾವ ದೇವರನೊಲ್ಲೆ
ಭಾವವಳಿಯದ ಭಕ್ತಿಯನೊಲ್ಲೆ
ಆವಾವ ಪರಿಯಲ್ಲು ವಿಧಿಯನೊಲ್ಲೆ
ಕಾಮೇಶ್ವರನೆಂಬುದನೊಂದನೆ ಬಲ್ಲೆ. (೧೪೪)

೦

ಜೇಡರ ದಾಸಿಮಯ್ಯ

ಊರು : ಮುದನೂರು, ಗುಲ್ಬರ್ಗಾ ಜಿಲ್ಲೆ.
ಹೆಂಡತಿ : ದುಗ್ಗಳೆ
ಕಸುಬು : ನೆಯ್ಗೆಯ ಕಾಯಕ
ಜೇಡ = ೧. ನೇಕಾರ/ನೇಯುವವನು/ನೆಯ್ಗೆಯವನು.
೨. ಬಲೆಯನ್ನು ನೇಯುವ ಒಂದು ಬಗೆಯ ಹುಳು.
೩. ಕಯ್ ಮಗ್ಗದಲ್ಲಿ ನೂಲಿನ ಎಳೆಗಳನ್ನು ಹೆಣೆದು ಬಟ್ಟೆಯನ್ನು ತಯಾರಿಸುವ ಕಸುಬು.
ಅಂಕಿತನಾಮ : ರಾಮನಾಥ
ದೊರೆತಿರುವ ವಚನಗಳು : ೧೭೬

ಅಂಬಲಿ ಅಳೆಯಾಗಿ
ತುಂಬೆಯ ಮೇಲೋಗರವಾಗಿ
ಉಂಬ ಸದುಭಕ್ತನ ಮನೆಯಾಗಿ
ಲೋಕದ ಡಂಭಕರ ಮನೆ ಬೇಡ ರಾಮನಾಥ. (೧೪೫)

ಅಗ್ನಿ ಸುಡಲಲ್ಲದೆ ಸುಳಿಯಲರಿಯದು
ವಾಯು ಸುಳಿವುದಲ್ಲದೆ ಸುಡಲರಿಯದು
ಆ ಅಗ್ನಿ ವಾಯುವ ಕೂಡಿದಲ್ಲದೆ ಅಡಿಯಿಡಲರಿಯದು
ಈ ಪರಿಯಂತೆ ನರರರಿವರೆ
ಕ್ರಿಯಾಜ್ಞಾನಭೇದವ ರಾಮನಾಥ. (೧೪೬)

ಆಚಾರಸಹಿತವಿದ್ದಡೆ ಗುರುವೆಂಬೆ
ಆಚಾರಸಹಿತವಿದ್ದಡೆ ಲಿಂಗವೆಂಬೆ
ಆಚಾರಸಹಿತವಿದ್ದಡೆ ಜಂಗಮವೆಂಬೆ
ಸದಾಚಾರಸಹಿತವಿರದೆ
ಅನ್ಯದೈವ ಭವಿ ಮಾಟಕೂಟವ ಮಾಡುವನ ಮನೆಯಲ್ಲಿ

ಲಿಂಗಾರ್ಚನೆಯ ಮಾಡಿದನಾದಡೆ
ನಿಮಗಂದೆ ದೂರವಯ್ಯಾ ರಾಮನಾಥ. (೧೪೭)

ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಯೇಳ ಮುಟ್ಟದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು
ಈ ಸೀರೆಯ ನೆಯ್ದವ
ನಾನೊ ನೀನೋ ರಾಮನಾಥ. (೧೪೮)

ಎಡರಡಸಿದಲ್ಲಿ ಮೃಡ
ನಿಮ್ಮ ನೆನವರು
ಎಡರಡಸಿದ ವಿಪತ್ತು
ಕಡೆಯಾಗಲೊಡನೆ
ಮೃಡ ನಿಮ್ಮನೆಡಹಿಯೂ ಕಾಣರು ರಾಮನಾಥ. (೧೪೯)

ಎಳ್ಳಿಲ್ಲದ ಗಾಣದಲ್ಲಿ ಎಣ್ಣೆಯುಂಟೆ
ಜಳ್ಳ ತೂರಿದಲ್ಲಿ ಬತ್ತವುಂಟೆ
ಕಳ್ಳ ಹಾದರಿಗರ ಸಂಪಾದನೆ
ಹೊಳ್ಳ ಕುಟ್ಟಿ ಕೈ ಹೊಟ್ಟೆಯಾದಂತೆ ಕಾಣಾ
ರಾಮನಾಥ. (೧೫೦)

ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು
ನೀನೆನ್ನ ಜರಿದೊಮ್ಮೆ ನುಡಿಯದಿರ
ನೀನೆನ್ನಂತೆ ಒಮ್ಮೆ
ಒಡಲುಗೊಂಡು ನೋಡ ರಾಮನಾಥ. (೧೫೧)

ಕಡೆಗೀಲಿಲ್ಲದ ಬಂಡಿ
ಹೊಡೆಗೆಡೆಯದೆ ಮಾಣ್ಬುದೆ

ಕಡೆಗೀಲು ಬಂಡಿಗಾಧಾರ
ಈ ಕಡುದರ್ಪವೇರಿದ
ಒಡಲೆಂಬ ಬಂಡಿಗೆ
ಮೃಢಭಕ್ತರ ನುಡಿಗಡಣವೆ
ಕಡೆಗೀಲು ಕಾಣಾ
ರಾಮನಾಥ. (೧೫೨)

ಕರಿಯನಿತ್ತಡೆ ಒಲ್ಲೆ
ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ
ಒಂದರೆಘಳಿಗೆಯಿತ್ತಡೆ
ನಿಮ್ಮನಿತ್ತೆ ಕಾಣಾ ರಾಮನಾಥ. (೧೫೩)

ಕೀಳು ಡೋಹರ ಕಕ್ಕ
ಕೀಳು ಮಾದರ ಚೆನ್ನ
ಕೀಳು ಓಹಿಲದೇವ
ಕೀಳು ಉದ್ಭಟಯ್ಯ
ಕೀಳಿಂಗಲ್ಲದೆ ಹಯನು
ಕರೆಯದು ಕಾಣಾ ರಾಮನಾಥ. (೧೫೪)

ಕುಲಛಲವ ಬಿಟ್ಟು ನಿಮ್ಮನೊಲಿಸಿದ ಶರಣರಿಗೆ
ತಲೆವಾಗುವೆ ನಾನು ಕುಲಜರೆಂದು
ಬೆಬ್ಬನೆ ಬೆರತು
ನಿಮ್ಮನೊಲಿಸಿದ ಶರಣರಿಗೆ
ತಲೆವಾಗದವನ ತಲೆ
ಶೂಲದ ಮೇಲಣ ತಲೆ ಕಾಣಾ ರಾಮನಾಥ. (೧೫೫)

ತೊಡೆಯಲ್ಲಿ ಮುದ್ರೆಯನೊತ್ತಿದಡೇನು
ಅದು ನಡೆಯಲ್ಲಿ ಶುಚಿಯಾಗಬಲ್ಲುದೆ

ಮಡಿಲಲ್ಲಿ ಲಿಂಗವ ಕಟ್ಟಿದಡೇನೊ
ಲೋಕದ ಅಜ್ಞಾನಿತನ ಬಿಡುವುದೆ
ನಡೆ ನುಡಿ ಸತ್ಯಸದಾಚಾರಿಗಳು
ಎಡೆಯೆಡೆಗೊಬ್ಬರು ಕಾಣಾ ರಾಮನಾಥ. (೧೫೬)

ಬರು ಸರಗನ ಭಕ್ತಿ
ದಿಟವೆಂದು ನಚ್ಚಲು ಬೇಡ
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ ರಾಮನಾಥ. (೧೫೭)

ಭಕ್ತಿಯ ಬಲ್ಲವರಿಗೆ
ಸತ್ಯ ಸದಾಚಾರವ ಹೇಳಿದಡೆ
ನಂಬುವರು ನಚ್ಚುವರು ಮಚ್ಚುವರು
ಭಕ್ತಿಯ ಹೊಲಬನರಿಯದ ವ್ಯರ್ಥರಿಗೆ
ಸತ್ಯ ಸದಾಚಾರವ ಹೇಳಿದಡೆ
ಕಚ್ಚುವರು ಬಗುಳುವರು ಕಾಣಾ ರಾಮನಾಥ. (೧೫೮)

ಭವಿಯ ಕಳೆದು ಭಕ್ತನಾದ ಬಳಿಕ
ಭವಿ ನಂಟನೆಂದು ಹೊಗಿಸಲಾಗದು
ನಂಟುತನಕ್ಕೆ ಆತ್ಮನಿಚ್ಚೆಗೆ
ಅಳುಪಿ ಭವಿಯೊಡನುಂಡಡೆ
ಹಂದಿಯ ಬಾಯ ತುತ್ತ
ನಾಯಿ ಸೆಳತಿಂದಂತೆ ಕಾಣಾ ರಾಮನಾಥ. (೧೫೯)

ಮಡದಿಯ ಪ್ರಾಣಕ್ಕೆ
ಮೊಲೆ ಮುಡಿ ಇದ್ದಿತ್ತೆ
ಒಡೆಯನ ಪ್ರಾಣಕ್ಕೆ
ಇದ್ದಿತ್ತೆ ಯಜ್ಞೋಪವೀತ
ಕಡೆಯಲ್ಲಿದ್ದ ಅಂತ್ಯಜನು
ಹಿಡಿದಿದ್ದನೆ ಹಿಡಿಗೋಲ

ನೀ ತೊಡಕಿಕ್ಕಿದ ತೊಡಕನೀ ಲೋಕದ
ಜಡರೆತ್ತ ಬಲ್ಲರೈ ರಾಮನಾಥ. (೧೬೦)

ಮೆಳೆಯ ಮೇಲಣ ಕಲ್ಲು
ಜಗದೆರೆಯನಾಗಬಲ್ಲುದೆ
ಮೆಳೆ ಶಿವಭಕ್ತನಾಗಬಲ್ಲುದೆ
ನಿಮ್ಮ ತನುಮನಧನವನರಿಯದಿದ್ದಡೆ
ಸದುಭಕ್ತರಹರೆ ರಾಮನಾಥ. (೧೬೧)

ಮೊಲೆ ಮುಡಿ ಬಂದಡೆ
ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ
ಗಂಡೆಂಬರು
ನಡುವೆ ಸುಳಿವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ
ಕಾಣಾ ರಾಮನಾಥ. (೧೬೨)

ವೇಷವ ಹೊತ್ತ ಹಿರಿಯರು
ಈಶ್ವರ ಧ್ಯಾನದಲ್ಲಿರಬೇಕು
ವೇಷವ ತೋರಿ
ಗ್ರಾಸಕ್ಕಾಗಿ ಆಸೆಮಾಡಿ
ಲೋಗರ ಮನೆಯ ಕಾದು
ಗ್ರಾಸವ ಪಡೆದು ಉದರವ ಹೊರೆವ ವೇಷವು
ವೇಶಿಯಿಂದವು ಕರಕಷ್ಟ ರಾಮನಾಥ. (೧೬೩)

ಸತ್ಯದ ನುಡಿ ತೀರ್ಥ
ಭಕ್ತಿಯ ನಡೆ ತೀರ್ಥ
ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ
ಹರಿವ ನದಿ ಎತ್ತಣಾ ತೀರ್ಥ
ರಾಮನಾಥ. (೧೬೪)

ಸತಿಯರ ಸಂಗವನು
ಅತಿಶಯ ಗ್ರಾಸವನು
ಪೃಥ್ವಿಗೀಶ್ವರನ ಪೂಜೆಯನು
ಅರಿವುಳ್ಳಡೆ
ಹೆರರ ಕೈಯಿಂದ ಮಾಡಿಸುವರೆ ರಾಮನಾಥ. (೧೬೫)

ಹರಿದ ಗೋಣಿಯಲೊಬ್ಬ
ಕಳವೆಯ ತುಂಬಿದ
ಇರುಳೆಲ್ಲಾ ನಡೆದನಾ
ಸುಂಕಕಂಜಿ
ಕಳವೆಯೆಲ್ಲಾ ಹೋಗಿ
ಬರಿಗೋಣಿ ಉಳಿಯಿತ್ತು
ಅಳಿಮನದವನ ಭಕ್ತಿ
ಇಂತಾಯಿತ್ತು ರಾಮನಾಥ. (೧೬೬)

ಹಸಿವೆಂಬ ಹೆಬ್ಬಾವು
ಬಸುರ ಬಂದು ಹಿಡಿದಡೆ
ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ
ವಿಷವನಿಳುಹಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ
ಕಾಣಾ ರಾಮನಾಥ. (೧೬೭)

ಹೊಲಬನರಿಯದ ಗುರು
ಸುಲಭನಲ್ಲದ ಶಿಷ್ಯ
ಕೆಲಬಲನ ನೋಡದುಪದೇಶ
ಅಂಧಕನಲಾಬ ಹೊಕ್ಕಂತೆ
ಕಾಣಾ ರಾಮನಾಥ. (೧೬೮)

○

ಜೋದರ ಮಾಯಣ್ಣ

ಕಸುಬು : ಬಿಜ್ಜಳನ ಆಸ್ಥಾನದಲ್ಲಿ ಆನೆಪಡೆಯ ಮೇಲಧಿಕಾರಿ.
ಅಂಕಿತನಾಮ : ಶಂಭು ಸೋಮನಾಥಲಿಂಗ
ದೊರೆತಿರುವ ವಚನಗಳು : ೫

ಕಾಮ ಹೊದ್ದಲಮ್ಮದು
ಬಲ್ಲಾಳನ ನೆನೆದಡೆ
ಕ್ರೋಧ ಹೊದ್ದಲಮ್ಮದು
ಪುರಾತನರ ನೆನೆದಡೆ
ಇವಾವೂ ಹೊದ್ದಲಮ್ಮವು
ಶಂಭು ಸೋಮನಾಥಲಿಂಗ ಶರಣೆಂಬವಂಗೆ. (೧೬೯)

೦

ಡಕ್ಕೆಯ ಬೊಮ್ಮಣ್ಣ

ಕಸುಬು	:	ಡಕ್ಕೆಯನ್ನು ಬಾರಿಸುವುದು. ಡಕ್ಕೆ=ತಮಟೆ/ ತೊಗಲಿನಿಂದ ಮಾಡಿರುವ ಒಂದು ಬಗೆಯ ಚರ್ಮವಾದ್ಯ. ಊರ ಬೀದಿಗಳಲ್ಲಿ ದೇವರ ಮೆರವಣಿಗೆಯನ್ನು ಮಾಡುವಾಗ, ಸಾವನ್ನಪ್ಪಿದ ವ್ಯಕ್ತಿಯ ಹೆಣವನ್ನು ಹೊತ್ತು ಮಸಣಕ್ಕೆ ಸಾಗಿಸುವಾಗ, ಊರಿನ ಜನರೆಲ್ಲರಿಗೂ ಸುದ್ದಿಯೊಂದನ್ನು ತಿಳಿಸುವಾಗ ತಮಟೆಯನ್ನು ಬಾರಿಸಲಾಗುತ್ತದೆ.
ಅಂಕಿತನಾಮ	:	ಕಾಲಾಂತಕ ಭೀಮೇಶ್ವರಲಿಂಗ
ದೊರೆತಿರುವ ವಚನಗಳು	:	೯೦

ಕವಿಯ ಹುಗತೆ
ಗಮಕಿಯ ಸಂಚ
ವಾದಿಯ ಚೊಕ್ಕೆಹ
ವಾಗ್ಮಿಯ ಚೇತನ
ಇಂತೀ ಚತುಷ್ಟಯದಲ್ಲಿ
ಯುಕ್ತಿವಂತನಾದಡೇನು
ಭಕ್ತಿಯನರಿಯಬೇಕು
ಸತ್ಯದಲ್ಲಿ ನಡೆಯಬೇಕು
ವಿರಕ್ತಿಯಲ್ಲಿ ವಿಚಾರಿಸಿ ನಿಲ್ಲಬೇಕು
ಈ ಗುಣ ಡಕ್ಕೆಯ ಬೊಮ್ಮನ ಭಕ್ತಿ
ಕಾಲಾಂತಕ ಭೀಮೇಶ್ವರಲಿಂಗವನರಿವವನ ಸದ್ಭಕ್ತಿ ಯುಕ್ತಿ. (೧೭೦)

ತಾನರಿಯದೆ ಮಾಡಿದ ದೋಷಕ್ಕೆ
ತನಗೆ ಅಘೋರವಿಲ್ಲ
ಅದು ಜಗದ ಹುದುಗು
ತಾನರಿದು ಅಲ್ಲ ಅಹುದೆಂದು
ಎಲ್ಲರಿಗೆ ಹೇಳಿ

ಪರಧನದಲ್ಲಿ ಪರಸತಿಯಲ್ಲಿ
ಅನ್ಯರ ನಿಂದೆಯಲ್ಲಿ
ವ್ರತಾಚಾರ ಭಂಗಿತರಲ್ಲಿ
ಇದನರಿದು ಅನುಸರಣೆಯ ಮಾಡಿದಡೆ
ಕುಂಭೀನರಕದಲ್ಲಿ ಹಿಂಗದಿರ್ಪನು.
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸ್ವಪ್ನದಲ್ಲಿ ದೂರಸ್ಥನು. (೧೭೧)

ಸತಿಯ ಗುಣವ ಪತಿ ನೋಡಬೇಕಲ್ಲದೆ
ಪತಿಯ ಗುಣವ ಸತಿ ನೋಡಬಹುದೆ ಎಂಬರು
ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ
ಪತಿಯಿಂದ ಬಂದ ಸೋಂಕು ಸತಿಯ ಕೇಡಲ್ಲವೆ
ಒಂದಂಗದ ಕಣ್ಣು ಉಭಯದಲ್ಲಿ ಒಂದು ಹಿಂಗಲಿಕ್ಕೆ
ಭಂಗವಾರಿಗೆಂಬುದ ತಿಳಿದಲ್ಲಿಯೆ
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸಲೆ ಸಂದಿತ್ತು. (೧೭೨)

○

ಡೋಹರ ಕಕ್ಕಯ್ಯ

ಅಂಕಿತನಾಮ : ಅಭಿನವ ಮಲ್ಲಿಕಾರ್ಜುನ
ದೊರೆತಿರುವ ವಚನಗಳು : ೬

ಆಸೆಯಾಮಿಷವಳಿದು
ಹುಸಿ ವಿಷಯಂಗಳೆಲ್ಲಾ ಹಿಂಗಿ
ಸಂಶಯ ಸಂಬಂಧ
ನಿಸ್ಸಂಬಂಧವಾಯಿತ್ತಯ್ಯಾ
ಎನ್ನ ಮನದೊಳಗೆ ಘನಪರಿಣಾಮವ ಕಂಡು
ಮನ ಮಗ್ನವಾಯಿತ್ತಯ್ಯಾ
ಅಭಿನವ ಮಲ್ಲಿಕಾರ್ಜುನಾ
ಪ್ರಭುದೇವರ ಕರುಣದಿಂದಾನು ಬದುಕಿದೆನು. (೧೭೩)

ಎನ್ನ ಕಷ್ಟ ಕುಲದಲ್ಲಿ ಹುಟ್ಟಿದೆನೆಂಬ
ಕರ್ಮವ ಕಳೆದು
ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯಾ
ಎನ್ನ ಕರಸ್ಥಲಕ್ಕೆ ಲಿಂಗವ
ಆ ಲಿಂಗ ಬಂದು ಸೋಂಕಲೊಡನೆ
ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯಾ
ಎನ್ನ ತನುವಿನಲ್ಲಿ ಗುರುವ ನೆಲೆಗೊಳಿಸಿದ
ಎನ್ನ ಮನದಲ್ಲಿ ಜಂಗಮವ ನೆಲೆಗೊಳಿಸಿದ
ಎನ್ನ ಅರುಹಿನಲ್ಲಿ ಪ್ರಸಾದವ ನೆಲೆಗೊಳಿಸಿದ
ಇಂತೀ ತ್ರಿವಿಧ ಸ್ಥಾನವ ಶುದ್ಧವ ಮಾಡಿ
ಚತುರ್ವಿಧ ಸಾರಾಯಸ್ಥಲವ ಸಂಬಂಧವ ಮಾಡಿದ
ಸಂಗನ ಬಸವಣ್ಣನ ಕರುಣದಿಂದ
ಪ್ರಭುದೇವರ ಶ್ರೀಪಾದವ ಕಂಡು ಬದುಕಿದೆನು
ಕಾಣಾ ಅಭಿನವ ಮಲ್ಲಿಕಾರ್ಜುನಾ. (೧೭೪)

೦

ತಳವಾರ ಕಾಮಿದೇವಯ್ಯ

ಕಸುಬು : ಊರಿನ ಕಾವಲುಗಾರ
ಅಂಕಿತನಾಮ : ಕಾಮಹರಪ್ರಿಯ ರಾಮನಾಥ
ದೊರೆತಿರುವ ವಚನಗಳು : ೧೦

ವ್ಯವಹಾರವ ಮಾಡಿದಲ್ಲಿ
ಲಾಭವ ಕಾಣದಿರ್ದಡೆ
ಆ ವ್ಯವಹಾರವೇತಕ್ಕೆ
ಗುರು ಲಿಂಗ ಜಂಗಮಕ್ಕೆ
ಖ್ಯಾತಿಗೆ ಮಾಡಿದಡೆ
ಮೊದಲು ತಪ್ಪಿ ಲಾಭವನರಸುವಂತೆ
ಕಾಮಹರಪ್ರಿಯ ರಾಮನಾಥಾ. (೧೭೫)

೦

ತುರುಗಾಹಿ ರಾಮಣ್ಣ

ಕಸುಬು : **ಊರಿನ ದನಗಳನ್ನು ಮುಂಜಾನೆ ಕೊಂಡೊಯ್ದು ಸಂಜೆಯ ತನಕ ಮೇಯಿಸುತ್ತಿದ್ದು, ಮತ್ತೆ ಅವನ್ನು ಅವುಗಳ ಒಡೆಯರ ದನಗಳ ಗೊಂತಿಗೆ ತಂದು ಕೂಡುವುದು.**

ಅಂಕಿತನಾಮ : **ಗೋಪತಿನಾಥ ವಿಶ್ವೇಶ್ವರಲಿಂಗ**

ದೊರೆತಿರುವ ವಚನಗಳು : **೪೬**

ಅಯ್ಯಾ ಏನನಹುದೆಂಬೆ
ಏನನಲ್ಲಾ ಎಂಬೆ
ಕಾಯವುಳ್ಳನ್ನಕ್ಕ
ಕರ್ಮ ಬಿಡದು
ಜೀವವುಳ್ಳನ್ನಕ್ಕ
ಕಾರ್ಪಣ್ಯ ಕೆಡದು
ಆರ ಕೇಳಿ ಆರಿಗೆ ಹೇಳಿಹೆನೆಂದಡೂ
ಭಾವದ ಭ್ರಮೆ ಬಿಡದು
ಮಹಾಸಮುದ್ರವನೀಜುವವನಂತೆ ಕರ ಕಾಲು ಆಡುವನ್ನಕ್ಕ
ಜೀವ ಭ್ರಮೆ ನಿಂದಲ್ಲಿ ನಿಂದಿತ್ತು
ಭಾವ ಭ್ರಮೆ ಒಂದನರಿತು ಒಂದನರಿದೆಹೆನೆಂಬನ್ನಕ್ಕ
ಬಂದಿತ್ತು ದಿನ ಅಂಗವ ಹರಿವುದಕ್ಕೆ
ಈ ಸಂದೇಹದ ಸಂದಿಯಲ್ಲಿ ಕೆಡಹದೆ
ನಿಜದಂಗವ ತೋರು ಗೋಪತಿನಾಥ ವಿಶ್ವೇಶ್ವರ ಲಿಂಗ. (೧೭೬)

ಕ್ರೀ ಶುದ್ಧತೆಯಾದಲ್ಲಿ
ಭಾವ ಶುದ್ಧವಾಗಿಪ್ಪುದು
ಭಾವ ಶುದ್ಧವಾಗಿಪ್ಪಲ್ಲಿ
ಸರ್ವೇಂದ್ರಿಯಂಗಳು ಏಕೇಂದ್ರಿಯವಾಗಿ
ಚಿತ್ತಶುದ್ಧ ಸಿದ್ಧಿಯಾದಲ್ಲಿ
ಸರ್ವಜ್ಞಾನ ಸಂಪನ್ನನಪ್ಪನು

ಆ ಗುಣ ನಿಜನೆಲೆಯಾದಲ್ಲಿ
ಗೋಪತಿನಾಥ ವಿಶ್ವೇಶ್ವರಲಿಂಗ ವಚಿಚ್ಚಂತಿಪ್ಪನು. (೧೭೭)

ಕೋಲೊಂದರಲ್ಲಿ ಹಲವು ಕುಲದ ಗೋವುಗಳ
ಚಲಿಸದೆ ನಿಲಿಸುವಂತೆ
ಏಕಚಿತ್ತನಾಗಿ ಸರ್ವವಿಕಾರಂಗಳ ಕಟ್ಟುವಡೆದು
ಇಂದ್ರಿಯಂಗಳ ಇಚ್ಛೆಯಲ್ಲಿ
ತ್ರಿವಿಧವ ಹಿಡಿದಿರುವರ ಸಂದಿಯಲ್ಲಿ ನುಸುಳದೆ
ವಸ್ತುವಿನ ಅಂಗದಲ್ಲಿಯೆ ತನ್ನಂಗ ತಲ್ಲೀನವಾಗಿಪ್ಪುದೆ
ಮಹಾ ನಿಜದ ನೆಲೆ
ಗೋಪತಿನಾಥ ವಿಶ್ವೇಶ್ವರಲಿಂಗವನರಿವುದಕ್ಕೆ ಇದೆ ಬಟ್ಟೆ. (೧೭೮)

ದಾಸೋಹದ ಸಂಗಣ್ಣ

ಊರು : ಬನವಾಸಿ
ಕಸುಬು : ಅನ್ನಸಂತರ್ಪಣೆ
ದಾಸೋಹ=ಶಿವಶರಣಶರಣೆಯರಿಗೆ ಅನ್ನಸಂತರ್ಪಣೆಯನ್ನು ಮಾಡುವುದು.
ಅಂಕಿತನಾಮ : ಮಾತುಳಂಗ ಮಧುಕೇಶ್ವರ
ದೊರೆತಿರುವ ವಚನಗಳು : ೧೦೧

ತನಗೆ ಉಂಟಾಗಿ ಶಿಷ್ಯನ ಮನೆಗೆ ಹೋಗಿ
ಕಟ್ಟಳೆಯ ವರುಷಕ್ಕೆ ತಪ್ಪದೆ
ಅಂಗವಸ್ತ್ರವೆಂದು ಲಿಂಗವಸ್ತ್ರವೆಂದು
ಕನಕ ಪರಿಮಳವೆಂದು
ಅಂದಣ ಛತ್ರ ಚಾಮರ
ಕರಿ ತುರಗಂಗಳೆಂದು
ಇವು ಬಂದುದಿಲ್ಲ ಎಂದು
ಸಂದಣಿ ಲಂದಣಗಾರರ ಕೈಯಲ್ಲಿ ಹೇಳಿಸಿ
ಅವು ಬಾರದಿರೆ
ತಾ ಸಂಧಿಸಿ ಸೂಚಿಸುವ ಲಿಂಗ
ಲಿಂಗಮಾರಿಗೆ ಗುರುಸ್ಥಲ ಎಂದಿಗೂ ಇಲ್ಲ
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ
ಮಾತುಳಂಗ ಮಧುಕೇಶ್ವರನು. (೧೭೯)

೦

ನಗೆಯ ಮಾರಿತಂದೆ

ಕಸುಬು : ಜನರನ್ನು ನಕ್ಕುನಲಿಯುವಂತೆ ಮಾಡುವ ಕಲೆಯಲ್ಲಿ ನಿಪುಣತೆ
ಅಂಕಿತನಾಮ : ಆತುರವೈರಿ ಮಾರೇಶ್ವರ
ದೊರೆತಿರುವ ವಚನಗಳು : ೯೯

ಎನ್ನ ಕೈಯಲ್ಲಿ ಕೊಟ್ಟುದ ದೇವರೆಂದಿದ್ದೆ
ಇದು ಮೆಲ್ಲಮೆಲ್ಲನೆ ಕಲ್ಲಾಗಿ ಬರುತ್ತಿದೆ
ಇದ ನಾನೊಲ್ಲೆ
ಬಲ್ಲವರು ಹೇಳಿ
ಉಂಬಡೆ ಬಾಯಿಲ್ಲ
ನೋಡುವಡೆ ಕಣ್ಣಿಲ್ಲ
ಎನ್ನ ಬಡತನಕ್ಕ ಬೇಡುವಡೆ
ಏನೂ ಇಲ್ಲ
ಆತುರವೈರಿ ಮಾರೇಶ್ವರಾ. (೧೮೦)

ಕಲ್ಲಿಯ ಹಾಕಿ ನೆಲ್ಲವ ತುಳಿದು
ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ
ವಾಗದ್ವೈತವ ಕಲಿತು
ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು
ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ
ಅದೇತರ ನುಡಿ ಮಾತಿನ ಮರೆ
ಆತುರವೈರಿ ಮಾರೇಶ್ವರಾ. (೧೮೧)

ಕುಣಿವ ಕುದುರೆಯ ಮೇಲೆ ಕುಳಿತು
ಆಡುವ ಪಾತ್ರವ ನೋಡುತ ಬಂದವರೆಲ್ಲರು
ಅರುಹಿರಿಯರೆ
ಇವರ ಸಂದಣಿಯ ನೋಡಿ ಅಂಜಿ ಅಡಗಿದೆ
ಆತುರವೈರಿ ಮಾರೇಶ್ವರಾ (೧೮೨)

ಸಮತೆಯ ಸಮಾಧಾನವ ಹೇಳುವ
ಪುಸ್ತಕ ಎತ್ತಿನ ಮೇಲೆ
ಹೊಯಿವ ದೊಣ್ಣೆ ಕೈಯಲ್ಲಿ
ಲೇಸಾಯಿತ್ತು ಈತನಿರವು
ಮಾತಿನಲ್ಲಿ ಆಗಮ
ಮನದಲ್ಲಿ ತೂತಿನ ಕುಡುಕೆಯ ಆಶೆ
ಇದು ನೀತಿಯಲ್ಲ
ಆತುರವೈರಿ ಮಾರೇಶ್ವರಾ. (೧೮೩)

೦

ನಾಗಲಾಂಬಿಕೆ

ಬಸವಣ್ಣನವರ ಸೋದರಿ. ಇವರನ್ನು ನಾಗಮ್ಮ ಮತ್ತು ಅಕ್ಕನಾಗಮ್ಮ ಎಂಬ ಹೆಸರುಗಳಿಂದಲೂ ಗುರುತಿಸಿದ್ದಾರೆ.

ಅಂಕಿತನಾಮ : ಬಸವಣ್ಣಪ್ರಿಯ ಚೆನ್ನಸಂಗಯ್ಯ
ದೊರೆತಿರುವ ವಚನಗಳು : ೧೪

ಎನ್ನ ಕುಲಸೂತಕವ ಕಳೆದಾತ ಬಸವಣ್ಣ
ಎನ್ನ ಛಲಸೂತಕವ ಕಳೆದಾತ ಬಸವಣ್ಣ
ಎನ್ನ ತನುಸೂತಕವ ಕಳೆದಾತ ಬಸವಣ್ಣ
ಎನ್ನ ಮನಸೂತಕವ ಕಳೆದಾತ ಬಸವಣ್ಣ
ಎನ್ನ ನೆನಹುಸೂತಕವ ಕಳೆದಾತ ಬಸವಣ್ಣ
ಎನ್ನ ಭಾವಸೂತಕವ ಕಳೆದಾತ ಬಸವಣ್ಣ
ಎನ್ನ ಅರುಹು ಮರಹಿನ ಸಂದು ಸಂಶಯವ ಬಿಡಿಸಿದಾತ ಬಸವಣ್ಣ
ಎನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ
ತನ್ನ ಎನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ
ನಿಜದ ನಿರ್ವಯಲ ಬಾಗಿಲ ನಿಜವ ತೋರಿದಾತ ಬಸವಣ್ಣ
ಬಸವಣ್ಣಪ್ರಿಯ ಚೆನ್ನಸಂಗಯ್ಯನ ಹೃದಯಕಮಲದಲ್ಲಿ
ನಿಜ ನಿವಾಸಿಯಾಗಿರಿಸಿದ ಎನ್ನ ತಂದೆ ಸಂಗನಬಸವಣ್ಣನು. (೧೮೪)

ಬಸವಣ್ಣಾ
ನೀವು ಮರ್ತ್ಯಕ್ಕೆ ಬಂದು ನಿಂದಡೆ
ಭಕ್ತಿಯ ಬೆಳವಿಗೆ ದೆಸೆದೆಸೆಗಲ್ಲಾ ಪಸರಿಸಿತ್ತಲ್ಲಾ
ಅಯ್ಯಾ
ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರು
ಅಣ್ಣಾ
ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು
ನೀವು ಲಿಂಗೈಕ್ಯವಾದೊಡೆ ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ
ನಿಮ್ಮೊಡನೆ ಅಸಂಖ್ಯಾತ ಮಹಾಗಣಂಗಳು ಹೋದರಣ್ಣಾ
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತಲ್ಲಾ ಬಸವಣ್ಣಾ
ಎನ್ನನೊಯ್ಯದೆ ಹೋದೆಯಲ್ಲಾ
ಪಂಚಪರುಷಮೂರ್ತಿ ಬಸವಣ್ಣಾ
ಬಸವಣ್ಣಪ್ರಿಯ ಚೆನ್ನಸಂಗಯ್ಯಂಗೆ
ಪ್ರಾಣಲಿಂಗವಾಗಿ ಹೋದೆಯ ಸಂಗನಬಸವಣ್ಣಾ. (೧೮೫)

೦

ನಿವೃತ್ತಿ ಸಂಗಯ್ಯ

ಅಂಕಿತನಾಮ : ನಿವೃತ್ತಿ ಸಂಗಯ್ಯ
ದೊರೆತಿರುವ ವಚನಗಳು : ೩

ಪರಧನ ಪರಾನ್ನ ಪರಸ್ತ್ರೀಯರಾಸೆ ಬಿಡದು
ಶರಣನೆಂತೆಂಬೆ ಮರುಳೆ
"ಜಿಹ್ವೆದಗ್ಧ ಪರಾನ್ನಂಚ ಹಸ್ತದಗ್ಧ ಪ್ರತಿಗ್ರಹಂ
ಚಕ್ಷುದಗ್ಧ ಪರಸ್ತ್ರೀನಾಂ ತಸ್ಯ ಜನ್ಮ ನಿರರ್ಥಕಂ"
ಎಂದು ಶ್ರುತಿ ಸಾರಲು ಮತಿಗೆಡುವನಕಟಾ
ನಿವೃತ್ತಿ ಸಂಗಯ್ಯನೆಂತೊಲಿವನವ್ವಾ. (೧೮೬)

ಬ್ರಾಹ್ಮಣ ಶಿವಭಕ್ತನಾದ ಬಳಿಕ ಬ್ರಾಹ್ಮಣರ ಬೆರಸಲಾಗದು
ಕ್ಷತ್ರಿಯ ಶಿವಭಕ್ತನಾದ ಬಳಿಕ ಕ್ಷತ್ರಿಯರ ಬೆರಸಲಾಗದು
ವೈಶ್ಯ ಶಿವಭಕ್ತನಾದ ಬಳಿಕ ವೈಶ್ಯರ ಬೆರಸಲಾಗದು
ಶೂದ್ರ ಶಿವಭಕ್ತನಾದ ಬಳಿಕ ಶೂದ್ರರ ಬೆರಸಲಾಗದು
ಇವರ ಜೀವದತೀತರ ಜಾತಿಯ ಉದ್ಭವಮಂ
ಇವದಿರ ಕಾಯಕ ಕುಲದರುಶನ ಪಕ್ಷ
ಸಪ್ತಧಾತು ಸರಿಯೆಂದೆಂಬರೆ
"ಕೃತಂ ಜೀವಂ ಕೃತಂ ಫಲಂ"
ಅಗ್ರಜ ಮೊದಲು ಅಂತ್ಯಜ ಕಡೆ
"ಬ್ರಾಹ್ಮಣ ಕ್ಷತ್ರಿಯ ವೈಶ್ಯ
ಶೂದ್ರೋವಾ ಗುರುಹಸ್ತಯೋ
ಪ್ರತಿ ಭೂಜನ ಕರ್ತವ್ಯಂ
ಕರ್ತವ್ಯಂ ಪುನರ್ವತಾಯೋ"
ನಿವೃತ್ತಿ ಸಂಗಯ್ಯದೇವ ಬಲ್ಲ
ಜಾತಿ ವಿಚಾರದ ಭೇದವ ಬಿಟ್ಟರೆ ಬಿಡುವುದು
ಬಿಡದಿರ್ದಡೆ ತಮ್ಮ ಮುನ್ನಿನಂತಿಹುದು. (೧೮೭)

○

ನೀಲಮ್ಮ

ಬಸವಣ್ಣನವರ ಎರಡನೆಯ ಹೆಂಡತಿ. ನೀಲಾಂಬಿಕೆ ಮತ್ತು ನೀಲಲೋಚನೆ ಎಂಬ ಹೆಸರುಗಳಿಂದಲೂ ಇವರನ್ನು ಗುರುತಿಸಿದ್ದಾರೆ.

ಅಂಕಿತನಾಮ : ಸಂಗಯ್ಯ

ದೊರೆತಿರುವ ವಚನಗಳು : ೨೮೭

ಅಲ್ಲಮನ ವಂಶದವಳು ನಾನು
ಅಜಾತ ಶರಣರ ವಂಶದವಳು ನಾನು
ಅಪ್ರತಿಮ ಶರಣರ ವಂಶದವಳು ನಾನು
ಆಗಮಾನಂದಿಗಳ ವಂಶದವಳಾನು
ನಾನು ಆವ ದೇಶದಲ್ಲಿಯಿದ್ದಡೇನು
ನಾನು ಆವ ಸ್ಥಾನದಲ್ಲಿಯಿದ್ದಡೇನು
ಸಂಗಯ್ಯನಲ್ಲಿ ಬಸವ ಸ್ವಯಲಿಂಗಿಯಾದನು. (೧೮೮)

೦

ನುಲಿಯ ಚಂದಯ್ಯ

ಊರು : ಶಿವಣಗಿ, ವಿಜಾಪುರ ಜಿಲ್ಲೆ.
ಕಸುಬು : ಹುಲ್ಲನ್ನು ಹೊಸೆದು ಹಗ್ಗವನ್ನು ತಯಾರಿಸುವುದು.
ಅಂಕಿತನಾಮ : ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗ
ದೊರೆತಿರುವ ವಚನಗಳು : ೪೮

ಕಂದಿಸಿ ಕುಂದಿಸಿ ಬಂಧಿಸಿ
ಕಂಡವರ ಬೇಡಿ ತಂದು
ಜಂಗಮಕ್ಕೆ ಮಾಡಿಹೆನೆಂಬ
ದಂದುಗದೋಗರ ಲಿಂಗಕ್ಕೆ
ನೈವೇದ್ಯ ಸಲ್ಲ
ತನು ಕರಗಿ ಮನ ಬಳಲಿ ಬಂದ
ಚರದ ಅನುವರಿತು
ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ
ದಾಸೋಹವ ಮಾಡುವುದೆ ಮಾಟ
ಕಾಶಿಯ ಕಾಯಿ ಕಾಡಿನ ಸೊಪ್ಪಾಯಿತ್ತಾದಡೂ
ಕಾಯಕದಿಂದ ಬಂದುದು ಲಿಂಗಾರ್ಪಿತ
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ
ನೈವೇದ್ಯ ಸಂದಿತ್ತು. (೧೮೯)

ಗುರುವ ಕುರಿತು ಮಾಡುವಲ್ಲಿ
ಬ್ರಹ್ಮನ ಭಜನೆಯ ಹರಿಯಬೇಕು
ಲಿಂಗವ ಕುರಿತು ಮಾಡುವಲ್ಲಿ
ವಿಷ್ಣುವಿನ ಸಂತೋಷಕ್ಕೆ ಸಿಕ್ಕದಿರಬೇಕು
ಜಂಗಮವ ಕುರಿತು ಮಾಡುವಲ್ಲಿ
ರುದ್ರನ ಪಾಶವ ಹೊದ್ದದಿರಬೇಕು
ಒಂದನರಿದು ಒಂದ ಮರೆದು

ಸಂದಿಲ್ಲದ ಸುಖ ಜಂಗಮ ದಾಸೋಹದಲ್ಲಿ
ಸಂಗನ ಬಸವಣ್ಣ ನಿತ್ಯ ಚಂದೇಶ್ವರಲಿಂಗಕ್ಕೆ ತಲುಪಿ. (೧೯೦)

ಗುರುವನರಿತು ಮಾಡುವಲ್ಲಿ
ಅಹಂಕಾರವ ಮರೆದು ಮಾಡಬೇಕು
ಲಿಂಗವನರಿತು ಮನಮುಟ್ಟುವಲ್ಲಿ
ಪ್ರಕೃತಿ ತಲೆದೋರದಿರಬೇಕು
ಜಂಗಮವನರಿತು ಮುಟ್ಟಿ ಪೂಜಿಸುವಲ್ಲಿ
ಅರ್ಥ ಪ್ರಾಣ ಅಭಿಮಾನ
ಈ ಮೂರರಲ್ಲಿ ನಿಶ್ಚಯವಾಗಿರಬೇಕು
ಸಂಗನ ಬಸವಣ್ಣಪ್ರಿಯ ಚಂದೇಶ್ವರಲಿಂಗವನರಿಯಬಲ್ಲಡೆ. (೧೯೧)

ನುಡಿದ ಮಾತಿಂಗೆ ತಡಬಡ ಬಂದಲ್ಲಿ
ನುಡಿದ ಭಾಷೆಗೆ ಭಂಗ ನೋಡಾ
ಹಿಡಿದ ಕುಳಕ್ಕೆ ಹಾನಿ ಬಂದಲ್ಲಿ
ಒಡಲನಿರಿಸುವದೆ ಭಂಗ ನೋಡಯ್ಯಾ
ಇದು ಕಾರಣ
ನಡೆ ನುಡಿ ಶುದ್ಧವಿಲ್ಲದಿದ್ದಡೆ
ಚಂದೇಶ್ವರಲಿಂಗವಾದಡೂ ತಪ್ಪನೊಳಕೊಳ್ಳ
ಕಾಣಾ ಮಡಿವಾಳಯ್ಯಾ. (೧೯೨)

ಭಾವ ಶುದ್ಧವಾಗಿಪ್ಪುದೇ ಗುರು ಪೂಜೆ
ಜ್ಞಾನಶುದ್ಧವಾಗಿಪ್ಪುದೇ ಲಿಂಗ ಪೂಜೆ
ತ್ರಿಕರಣ ಶುದ್ಧವಾಗಿ ತ್ರಿವಿಧ ಮಲದಲ್ಲಿ
ನಿಶ್ಚಯವಾಗಿ ನಿಂದುದೇ ಜಂಗಮ ಪೂಜೆ
ಇಂತೀ ತ್ರಿವಿಧ ಭೇದದಲ್ಲಿ
ತ್ರಿವಿಧಾರ್ಪಣವ ಅರ್ಪಿಸಿ ನಿಂದುದೇ
ಚಂದೇಶ್ವರಲಿಂಗಕ್ಕೆ ಅರ್ಪಿತ ಮಡಿವಾಳಯ್ಯಾ. (೧೯೩)

ಪ್ರಸಾದಿ ಭೋಗಣ್ಣ

ಅಂಕಿತನಾಮ : ಚೆನ್ನಬಸವಣ್ಣಪ್ರಿಯ ಭೋಗ ಮಲ್ಲಿಕಾರ್ಜುನಲಿಂಗ
ದೊರೆತಿರುವ ವಚನಗಳು : ೧೦೩

ಕಲ್ಲಿನಲ್ಲಿ ಹುಟ್ಟಿದ ಕಿಡಿ
ಕಲ್ಲ ಸುಡಬಲ್ಲುದೆ
ಬೆಲ್ಲದಲ್ಲಿ ಹುಟ್ಟಿದ ಸಾರವ
ನಿಸ್ಸಾರ ಮೆಲ್ಲಬಲ್ಲುದೆ
ಇಂತೀ ಬಲ್ಲತನವುಳ್ಳವರಲ್ಲಿಯ ವಾಚಕತ್ವ
ಆಶೆಯ ಪಾಶವ
ಕೊಲ್ಲಬಲ್ಲುದೆ
ಮರೆಯ ಗ್ರಾಸವ ಕೊಂಬ ಮರ್ತ್ಯನಂತೆ
ಈಷಣತ್ರಯಕ್ಕೆ ಮಚ್ಚಿ
ಮಾತಿನ ಮಾಲೆಯ ನೀತಿಯ ಹೇಳುವ
ಈ ಯಾಚಕರುಗಳಿಗೆ
ಏತರ ಬೋಧೆ
ಇದು ನಿಹಿತದ ಉಭಯಸ್ಥಲ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನ ಲಿಂಗದಲ್ಲಿ. (೯೪)

ನಾನಾ ವೇದ ಶಾಸ್ತ್ರ ಪುರಾಣ
ಆಗಮ ಪಾಠಕನಾದಲ್ಲಿ
ಪರಿಭಾಷೆ ಪರತತ್ವದ ಮಾತನಾಡಿದಡೇನು
ಜಿಹ್ವೇಂದ್ರಿಯಕ್ಕೆ ಹರಿಯದೆ
ಗುಹ್ಯೇಂದ್ರಿಯಕ್ಕೆ ಸಿಕ್ಕದೆ
ಬಂದ ತೆರನನರಿದು ವಿಚಾರಿಸಿ
ಮುಟ್ಟುವ ಕಟ್ಟನರಿತು
ಅರ್ಪಿತದ ಭೇದವನರಿದು
ವಸ್ತುವಿಪ್ಪೆಡೆಯಲ್ಲಿ ಅರ್ಪಿಸಬಲ್ಲಡೆ
ವಿರಕ್ತನು
ಅಲ್ಲದಿರ್ದಡೆ ಪಂಡಿತನಪ್ಪನು
ಇಂತೀ ಉಭಯದ ಸೊಲ್ಲನರಿಯಬೇಕು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನ ಲಿಂಗದಲ್ಲಿ. (೧೯೫)

೦

ಬಹುರೂಪಿ ಚೌಡಯ್ಯ

ಊರು : ರೇಕಳಿಕೆ ಗ್ರಾಮ.
ಕಸುಬು : ಕಲಾವಿದ/ನಟನೆ
ಅಂಕಿತನಾಮ : ರೇಕಣ್ಣಪ್ರಿಯ ನಾಗಿನಾಥ
ದೊರೆತಿರುವ ವಚನಗಳು : ೬೬

ಆಡುವಡೆ ಸದಾಚಾರಿಗಳ ಕೂಡೆ
ಆಡುವದು
ನುಡಿವಡೆ ಜಂಗಮ ಪ್ರೇಮಿಯ ಕೂಡೆ
ನುಡಿವುದು
ಮಾತಾಡುವಡೆ ಪ್ರಸಾದಿಯ ಕೂಡೆ
ಮಾತನಾಡುವದು
ಭಕ್ತಿಹೀನನ ಕಂಡಡೆ
ಮನ ಮುನಿಸ ಮಾಡಿಸಾ
ರೇಕಣ್ಣಪ್ರಿಯ ನಾಗಿನಾಥಾ. (೧೯೬)

ಇನ್ನಾಡುವೆ ಜಂಗಮ ಬಹುರೂಪ
ಅಲ್ಲಮನಂತೆ ಆಡುವೆ ಬಹುರೂಪ
ಅಜಗಣ್ಣನಂತೆ ಆಡುವೆ ಬಹುರೂಪ
ಮುಖವಾಡದಯ್ಯಗಳಂತೆ ಆಡುವೆ ಬಹುರೂಪ
ಪುರುಷಾಂಗಣವ ಮೆಟ್ಟಿ ಆಡುವೆ ಬಹುರೂಪ
ರೇಕಣ್ಣಪ್ರಿಯ ನಾಗಿನಾಥಾ ಬಸವನಿಂದ ಬದುಕಿತೀ ಲೋಕವೆಲ್ಲಾ. (೧೯೭)

ಲಿಂಗ ನಿಷ್ಠೆಯಿಲ್ಲದವರಂಗಳವ
ಮೆಟ್ಟಲಾಗದು
ಜಂಗಮ ಪ್ರೇಮವಿಲ್ಲದವರೊಡನೆ
ಮಾತನಾಡಲಾಗದು
ಪ್ರಸಾದವ ಪಡೆಯದವರ ಸಮಪಜ್ತೆಯಲ್ಲಿ ಕುಳಿತು
ಪ್ರಸಾದ ಭೋಗವ

ಮಾಡಲಾಗದು
ಇಂತೀ ಲಿಂಗ ಜಂಗಮ ಪ್ರಸಾದ ವಿಶ್ವಾಸವಿಲ್ಲದವರಿಗೆ
ನರಕ ತಪ್ಪದು
ಅಂಥವರ ಸಂಗವ ಸತ್ಯಸಜ್ಜನರು
ಮಾಡಲಾಗದು
ಅದೇನು ಕಾರಣವೆಂದಡೆ
ಪ್ರಾಣಲಿಂಗ ಶಿಲಾಭೇದಂ ಚರಲಿಂಗಂತು ಯೋ ನರಃ
ಪ್ರಸಾದಂ ದ್ರವ್ಯ ಭಾವೇನ ರೌರವ ನರಕಂ ವ್ರಜೇತ್
ಎಂದುದಾಗಿ
ಇಂತೀ ಲಿಂಗ ಜಂಗಮ ಪ್ರಸಾದ ಸದ್ಭಾವ
ನಂಬುಗೆಯ ಭಕ್ತಿ ಬೆಸುಗೆಯಿಲ್ಲದವರ
ಎನಗೆ ತೋರದಿರಯ್ಯ
ರೇಕಣ್ಣಪ್ರಿಯ ನಾಗಿನಾಥಾ. (೧೯೮)

೦

ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

ಗಂಡ : ಬಾಚಿಕಾಯಕದ ಬಸವಯ್ಯ
ಅಂಕಿತನಾಮ : ಕರ್ಮಹರ ಕಾಳೇಶ್ವರ
ದೊರೆತಿರುವ ವಚನಗಳು : ೨

ಕಾಯಕ ತಪ್ಪಿದಡೆ ಸೈರಿಸಬಾರದು
ವ್ರತ ತಪ್ಪಲೆಂತೂ ಸೈರಿಸಬಾರದು
ಕರ್ಮಹರ ಕಾಳೇಶ್ವರಾ (೧೯೯)

ಕೈ ತಪ್ಪಿ ಕೆತ್ತಲು
ಕಾಲಿಗೆ ಮೂಲ
ಮಾತು ತಪ್ಪಿ ನುಡಿಯಲು
ಬಾಯಿಗೆ ಮೂಲ
ವ್ರತಹೀನನ ನೆರೆಯಲು
ನರಕಕ್ಕೆ ಮೂಲ
ಕರ್ಮಹರ ಕಾಳೇಶ್ವರಾ. (೨೦೦)

೦

ಬಾಹೂರ ಬೊಮ್ಮಣ್ಣ

ಊರು : ಬಾಹೂರ (ಕಲ್ಯಾಣ ಪಟ್ಟಣದ ಹತ್ತಿರ)
ಕಸುಬು : ತೋಟಗಾರಿಕೆ
ಅಂಕಿತನಾಮ : ಬ್ರಹ್ಮೇಶ್ವರಲಿಂಗ
ದೊರೆತಿರುವ ವಚನಗಳು : ೪೧

ಸದ್ಭಕ್ತಿಯಿಲ್ಲದ ವಿಶ್ವಾಸಹೀನನು
ವಾಚಾ ರಚನೆಗಳಿಂದ
ಮಾತಿನ ಮಾಲೆಯ ಎಷ್ಟು ನುಡಿದಡೇನು
ಹೆಂಡದಂತೆ
ಮೃತ ಘಟದಂತೆ
ಶಿಥಿಲ ಫಳದಂತೆ
ಅದಾರಿಗೆ ಯೋಗ್ಯ
ಸಂಗನಬಸವಣ್ಣ ಸಾಕ್ಷಿಯಾಗಿ
ಬ್ರಹ್ಮೇಶ್ವರಲಿಂಗವು
ಅವರಲ್ಲಿ ನಿಲ್ಲನಾಗಿ. (೨೦೧)

೦

ಬಿಬ್ಬಿ ಬಾಚಯ್ಯ

ಊರು : ಗೊಬ್ಬೂರು, ಗುಲ್ಬರ್ಗಾ ಜಿಲ್ಲೆ.
ಅಂಕಿತನಾಮ : ಏಣಾಂಕಧರ ಸೋಮೇಶ್ವರಲಿಂಗ
ದೊರೆತಿರುವ ವಚನಗಳು : ೧೦೨

ಬಸವಣ್ಣನ ಪ್ರಸಾದವ ಕೊಂಡ ಕಾರಣ
ಎನಗೆ ಭಕ್ತಿ ಸಾಧ್ಯವಾಯಿತ್ತು
ಚೆನ್ನಬಸವಣ್ಣನ ಪ್ರಸಾದವ ಕೊಂಡ ಕಾರಣ
ಎನಗೆ ಜ್ಞಾನ ಸಾಧ್ಯವಾಯಿತ್ತು
ಪ್ರಭುದೇವರ ಪ್ರಸಾದವ ಕೊಂಡ ಕಾರಣ
ಎನಗೆ ವೈರಾಗ್ಯ ಸಾಧ್ಯವಾಯಿತ್ತು
ಇಂತೀ ಮೂವರು ಒಂದೊಂದು ಕೊಟ್ಟ ಕಾರಣ
ಎನಗೆ ಸರ್ವವೂ ಸಾಧ್ಯವಾಯಿತ್ತು
ಏಣಾಂಕಧರ ಸೋಮೇಶ್ವರಾ
ನಿಮ್ಮ ಶರಣರೆನ್ನ ಮಾತಾಪಿತರು. (೨೦೨)

ಬೊಂತಾದೇವಿ

ಕಾಶ್ಮೀರ ರಾಜ್ಯದ ಮಾಂಡವ್ಯಪುರದ ಅರಸನ ಮಗಳು. ಈಕೆಯ ಮೊದಲಿನ ಹೆಸರು ನಿಜದೇವಿ. ಕಲ್ಯಾಣ ಪಟ್ಟಣಕ್ಕೆ ಬಂದು ನೆಲೆಸಿದ ನಂತರ ಬಂದ ಹೆಸರು ಬೊಂತಾದೇವಿ. ತುಂಡು ಬಟ್ಟೆಗಳನ್ನು ಕೂಡಿಸಿ ಹೊಲಿದ ಹಚ್ಚಡವನ್ನು ಬೊಂತೆ ಎಂದು ಕರೆಯುತ್ತಾರೆ.

ಅಂಕಿತನಾಮ : ಬಿಡಾಡಿ

ದೊರೆತಿರುವ ವಚನಗಳು : ೫

ಊರ ಒಳಗಣ ಬಯಲು
ಊರ ಹೊರಗಣ ಬಯಲೆಂದುಂಟೆ
ಊರೊಳಗೆ ಬ್ರಾಹ್ಮಣ ಬಯಲು
ಊರ ಹೊರಗೆ ಹೊಲೆ ಬಯಲೆಂದುಂಟೆ
ಎಲ್ಲಿ ನೋಡಿದಡೆ ಬಯಲೊಂದೆ
ಭಿತ್ತಿಯಿಂದ ಒಳಹೊರಗೆಂಬ ನಾಮವೈಸೆ
ಎಲ್ಲಿ ನೋಡಿದಡೆ ಕರೆದಡೆ
ಓ ಎಂಬಾತನೆ ಬಿಡಾಡಿ. (೨೦೩)

○

ಭೋಗಣ್ಣ

ಅಂಕಿತನಾಮ : ನಿಜಗುರು ಭೋಗೇಶ್ವರ
ದೊರೆತಿರುವ ವಚನಗಳು : ೨೨

ಮನವನ್ಯಾಯಪಾತಕದೊಳಗೆ
ಸಿಲುಕಿಹುದು
ಮಾತಿನಲ್ಲಿ ಭಕ್ತಿ ವಿನಯ
ಉಪಚಾರವ ನುಡಿದರು
ಅನುವಿಲ್ಲದರಿಯದೆ ಬರಿಯ ಬಾಯಭುಂಜಕರು
ಜಾರೆ ಜಾರನ ಸ್ನೇಹದೊಳಿದ್ದು
ನೀನಲ್ಲದೆ ಅಂತಃಪುರವನರಿಯೆನೆಂದು
ಕಣ್ಣನೀರ ತುಂಬುತ್ತ
ಬೋಸರಿಗತನದಿಂದ
ಒಡಲ ಹೊರೆವಳಂತೆ
ವಾಗದ್ವೈತದಿಂದ ಒಡಲ ಹೊರೆವ
ಶಬ್ದಬೋಧಕರಿಗೆ
ನಿಜಗುರು ಭೋಗೇಶ್ವರ ಶರಣರ
ಪದವೆಂತು ದೊರೆಕೊಂಬುದೋ. (೨೦೪)

೧

ಮಡಿವಾಳ ಮಾಚಿದೇವ

ಊರು	:	ಹುಟ್ಟಿದ್ದು ದೇವರ ಹಿಪ್ಪರಗಿ, ಬಿಜಾಪುರ ಜಿಲ್ಲೆ. ಅನಂತರ ಬಸವಣ್ಣನವರು ಇದ್ದ ಕಲ್ಯಾಣ ಪಟ್ಟಣಕ್ಕೆ ಬಂದು ನೆಲಸುತ್ತಾರೆ.
ಕಸುಬು	:	ಬಟ್ಟೆಗಳ ಕೊಳೆಯನ್ನು ತೊಳೆದು ಮಡಿ ಮಾಡುವುದು.
ಅಂಕಿತನಾಮ	:	ಕಲಿದೇವರದೇವ/ಕಲಿದೇವಯ್ಯ
ದೊರೆತಿರುವ ವಚನಗಳು	:	೩೩೯

ಅಂಗದ ಮೇಲೆ ಲಿಂಗವ ಧರಿಸಿ
ಲಿಂಗವಂತರೆನಿಸಿಕೊಂಬ ಮಹಾಲಿಂಗವಂತರು
ನೀವು ಕೇಳಿರೊ
ಮನೆಗೊಂದು ದೈವ
ನಿಮಗೊಂದು ದೈವ
ನಿಮ್ಮಂಗನೆ ಅನ್ಯದೈವಕ್ಕೆಂದು ನಿಯಾಮಿಸಿ
ಪಾಕವ ನಿಮ್ಮ ಇಷ್ಟಲಿಂಗಕ್ಕೆ ಕೊಟ್ಟು
ಭುಂಜಿಸುತ್ತಿರ್ದು
ಮತ್ತೆ ಮರಳಿ ಲಿಂಗವಂತರೆನಿಸಿಕೊಂಬ
ಲಿಂಗದ್ರೋಹಿಗಳಿಗೆ
ಕುಂಭೀಪಾತಕ ನಾಯಕನರಕ ತಪ್ಪದೆಂದ ಕಲಿದೇವಯ್ಯ. (೨೦೫)

ಅಯ್ಯಾ ತನ್ನ ತಾನರಿಯದೆ
ತನ್ನ ಇಷ್ಟಲಿಂಗದ ಹೊಲಬು ತಿಳಿಯದೆ
ಕಾಮವ ತೊರೆಯದೆ ಹೇಮವ ಜರೆಯದೆ
ನಾವು ಹರ ಗುರು ಚರ ಷಟ್‌ಸ್ಥಲದ ವಿರಕ್ತರೆಂದು
ಚೆನ್ನಾಗಿ ನುಡಿದುಕೊಂಡು
ಕಾವಿ ಕಾಷಾಯಾಂಬರವ ಹೊದ್ದು
ಶಂಖ ಗಿಳಿಲು ದಂಡಾಗ್ರವ ಹೊತ್ತು
ಕೂಳಿಗಾಗಿ ನಾನಾ ದೇಶವ ತಿರುಗಿ

ಕಾಂಚನಕ್ಕೆ ಕೈಯೊಡ್ಡುವ ಪಂಚ ಮಹಾಪಾತಕರನು
ಕಾಗೆಯ ಗರ್ಭದಲ್ಲಿ ಹುಟ್ಟಿಸಿ
ಕಾಕಾ ಎಂದು
ಕೂಗಿಸುತಿರ್ಪನು
ಕಾಣಾ ಕಲಿದೇವರದೇವ. (೨೦೬)

ಅರಸಿನ ಭಕ್ತಿ ಅಹಂಕಾರದಲ್ಲಿ ಹೋಯಿತ್ತು
ವೇಶಿಯ ಭಕ್ತಿ ಎಂಜಲ ತಿಂದಲ್ಲಿ ಹೋಯಿತ್ತು
ಬ್ರಾಹ್ಮಣನ ಭಕ್ತಿ ಮುಟ್ಟುತಟ್ಟಿನಲ್ಲಿ ಹೋಯಿತ್ತು
ಶೀಲವಂತನ ಭಕ್ತಿ ಪ್ರಪಂಚಿನಲ್ಲಿ ಹೋಯಿತ್ತು
ಸೆಟ್ಟಿಯ ಭಕ್ತಿ ಕುಟಿಲ ವ್ಯಾಪಾರದಲ್ಲಿ ಹೋಯಿತ್ತು
ಇಂತಿವರ ಭಕ್ತಿಗೆ
ಊರಿಂದ ಹೊರಗಣ ಡೊಂಬನೆ ಸಾಕ್ಷಿ
ಕಲಿದೇವರದೇವಾ. (೨೦೭)

ಆ ಜಾತಿ ಈ ಜಾತಿಯವರೆನಬೇಡ
ಹದಿನೆಂಟು ಜಾತಿಯೊಳಗಾವ ಜಾತಿಯಾದಡೂ ಆಗಲಿ
ಗುರು ಕಾರುಣ್ಯವ ಪಡೆದು
ಅಂಗದ ಮೇಲೆ ಲಿಂಗವ ಧರಿಸಿ
ಪುನರ್ಜಾತರಾದ ಬಳಿಕ
ಭಕ್ತರಾಗಲಿ ಜಂಗಮವಾಗಲಿ
ಗುರುವಿನ ವೇಷವಿದ್ದವರ ಗುರುವೆಂದು ನಂಬಿ
ದಾಸೋಹವ ಮಾಡುವುದೆ ಸದಾಚಾರ
ಗುರುವನತಿಗಳೆದು ಗುರುವಾಜ್ಞೆಯ ಮೀರಿ
ಗುರು ಕೊಟ್ಟ ಪಂಚಮುದ್ರೆಗಳ ಮೇಲೆ
ಅನ್ಯ ಸಮಯ ಮುದ್ರೆಯ ಲಾಂಛನಾಂಕಿತರಾಗಿ
ಗುರುದ್ರೋಹಿಗಳಾಗಿ ಬಂದವರ
ಜಂಗಮವೆಂದು ಕಂಡು ನಮಸ್ಕರಿಸಿ ಆರಾಧಿಸಿ
ಪ್ರಸಾದವ ಕೊಂಡವಂಗೆ
ನಾಯಕನರಕ ತಪ್ಪದೆಂದ ಕಲಿದೇವಯ್ಯ. (೨೦೮)

ಆಶಾ ಪಾಶವ ಬಿಟ್ಟಡೇನಯ್ಯಾ
ರೋಷ ಪಾಶವ ಬಿಡದನ್ನಕ್ಕರ
ರೋಷ ಪಾಶವ ಬಿಟ್ಟಡೇನಯ್ಯಾ
ಮಾಯಾ ಪಾಶ ಬಿಡದನ್ನಕ್ಕರ
ಇಂತೀ ತ್ರಿವಿಧ ಪಾಶವ ಹರಿದು
ನಿಜನಿಂದ ಲಿಂಗೈಕ್ಯರ ತೋರಾ ಕಲಿದೇವರದೇವಾ. (೨೦೯)

ಇಷ್ಟಲಿಂಗವ ಬಿಟ್ಟು
ಸೃಷ್ಟಿಯ ಪ್ರತಿಷ್ಠೆಗೆ ಶರಣೆಂದಡೆ
ಆ ಇಷ್ಟಲಿಂಗದ ಚೇತನ ತೊಲಗಿ
ಭ್ರಷ್ಟನಾಗಿ ಕೆಟ್ಟು ನರಕಕ್ಕಿಳಿದನೆಂದ
ಕಲಿದೇವಯ್ಯ. (೨೧೦)

ಉಡಿಯ ಲಿಂಗವ ಬಿಟ್ಟು
ಗುಡಿಯ ಲಿಂಗಕ್ಕೆ ಶರಣೆಂಬ
ಮತಿಭ್ರಷ್ಟರನೇನೆಂಬೆನಯ್ಯಾ
ಕಲಿದೇವರದೇವಾ. (೨೧೧)

ಊರ ಕಲ್ಲಿಗೆ
ಉರದ ಲಿಂಗವಡಿಯಾಗಿ
ಬೀಳುವ
ಕ್ರೂರಕರ್ಮಿಗಳನೇನೆಂಬೆನಯ್ಯಾ
ಕಲಿದೇವಯ್ಯ. (೨೧೨)

ಒಟ್ಟಿರ್ದ ಮಣ್ಣಿಗೂ ನಟ್ಟಿರ್ದ ಕಲ್ಲಿಗೂ
ಕಟ್ಟಿರ್ದ ಲಿಂಗವಡಿಯಾಗಿ
ಬೀಳುವ
ಲೊಟ್ಟೆಗುಡಿಹಿಗಳನೇನೆಂಬೆನಯ್ಯಾ
ಕಲಿದೇವರದೇವಾ. (೨೧೩)

ಗುರು ಕೊಟ್ಟ ಲಿಂಗ
ತನ್ನ ಕರಸ್ಥಲದಲ್ಲಿರುತಿರಲು
ಧರೆಯ ಮೇಲೆ ಪ್ರತಿಷ್ಠಿಸಿದ
ಭವಿ ಶೈವ ದೈವ
ತೀರ್ಥಕ್ಷೇತ್ರಂಗಳಿಗೆ ಹರಿದುಹೋಗುವ
ಪರವಾದಿಗಳಿಗೆ
ಅಘೋರನರಕ ತಪ್ಪದೆಂದ
ಕಲಿದೇವಯ್ಯ. (೨೧೪)

ಪರಧನ ಪರಸತಿಗಳುಪಿದಡೆ
ಮುಂದೆ ನರಕವೆಂದು ಗುರುವಾಕ್ಯ ಸಾರುತಿದೆ
ಪರಧನ ಪರಸತಿಗಳುಪಿ
ಹತವಾಗಿ ಹೋದ ದುರ್ಯೋಧನ
ಪಾಂಡವರ ಕಥೆಯ ಕೇಳಿ
ಹರಿವ ನದಿಯ ಮಿಂದು
ಗೋದಾನ ಮಾಡುವ
ನರಕಿಗಳ ನುಡಿಯ ಕೇಳಲಾಗದೆಂದ
ಕಲಿದೇವರದೇವ. (೨೧೫)

ಪರಮವಿಭೂತಿಯ ಹಣೆಯಲ್ಲಿ ಧರಿಸಿ
ಕೊರಳಲ್ಲಿ ರುದ್ರಾಕ್ಷಿಯ ಧರಿಸಿ
ಗುರು ಕೊಟ್ಟ ಲಿಂಗವ ಕರದಲ್ಲಿ ಧರಿಸಿ
ಮರಳಿ ಮತ್ತೆ
ಧರೆಯ ಪ್ರತಿಷ್ಠೆಗೆರಗುವ
ನರಕಿಜೀವಿಗಳನೇನೆಂಬೆನಯ್ಯಾ
ಕಲಿದೇವಯ್ಯ. (೨೧೬)

ಪಾಪಿಗೆ ಪ್ರಾಯಶ್ಚಿತ್ತವುಂಟು
ಪರವಾದಿಗೆ ಪ್ರಾಯಶ್ಚಿತ್ತವುಂಟು
ಶಿವಭಕ್ತನಾಗಿ ಅನ್ಯದೈವವ ಪೂಜಿಸುವಂಗೆ

ಪ್ರಾಯಶ್ಚಿತ್ತವಿಲ್ಲವೆಂದ
ಕಲಿದೇವಯ್ಯ. (೨೧೭)

ವಚನದ ರಚನೆಯ ನುಡಿವ ಬಯಲುರಂಜಕರೆಲ್ಲ
ಭಕ್ತರಪ್ಪರೆ ಅಯ್ಯಾ
ವಚನ ತನ್ನಂತಿರದು ತಾನು ವಚನದಂತಿರ ಅದೆಂತೆಂದಡೆ
ತನು ಮನ ಧನವನೆಲ್ಲ ಹಿಂದಿಟ್ಟುಕೊಂಡು
ಮಾತಿನ ಬಣಬೆಯ ಮುಂದಿಟ್ಟುಕೊಂಡು
ಒಡೆಯನ ಕಂಡು ನಾಯಿ ಬಾಲವ ಬಡಿದುಕೊಂಬಂತೆ
ಆ ತೆರನಾಯಿತೆಂದ
ಕಲಿದೇವರದೇವಯ್ಯ. (೨೧೮)

ವೇದದಿಂದ ವೆಗ್ಗಳವಿಲ್ಲವೆಂಬಿರಿ
ವೇದ ಶಿವನ ಕಂಡುದಿಲ್ಲ
ಶಾಸ್ತ್ರದಿಂದ ವೆಗ್ಗಳವಿಲ್ಲವೆಂಬಿರಿ
ಶಾಸ್ತ್ರ ಶಿವನ ಕಂಡುದಿಲ್ಲ
ವೇದವೆಂಬುದು ವಿಪ್ರರ ಬೋಧೆ
ಶಾಸ್ತ್ರವೆಂಬುದು ಸಂತೆಯ ಗೋಷ್ಠಿ
ಅನುಭಾವದಿಂದ ತನ್ನೊಳಗಣ ತನುವ
ತಾನರಿತಂಥ ಭಕ್ತರಿಂದ ವೆಗ್ಗಳವಿಲ್ಲವೆಂದ
ಕಲಿದೇವರದೇವಯ್ಯ. (೨೧೯)

ವೇದವನೋದಿದಡೇನು ಶಾಸ್ತ್ರವ ಕಲಿತಡೇನು
ಮಾಘವ ಮಿಂದಡೇನು ಮೂಗ ಹಿಡಿದಡೇನು
ಹಲ್ಲ ಕಿರಿದಡೇನು ಬಾಯ ಹುಯ್ದುಕೊಂಡಡೇನು
ಉಟ್ಟುದನೊಗೆದಡೇನು ಮಟ್ಟಿಯನಿಟ್ಟಡೇನು
ಮಂಡೆಯ ಬಿಟ್ಟಡೇನು ತಿಟ್ಟನೆ ತಿರುಗಿದಡೇನು
ಕಣ್ಣು ಮುಚ್ಚಿದಡೇನು ಕೈಗಳ ಮುಗಿದಡೇನು
ಬೊಟ್ಟನಿಟ್ಟಡೇನು ಬಯಲಿಂಗೆ ನೆನೆದಡೇನು
ಮುಸುಡ ಹಿಡಿದಡೇನು ಮೌನದಲ್ಲಿರ್ದಡೇನು

ಅವಕ್ಕೆ ಶಿವಗತಿ ಸಿಕ್ಕದು
ಕುಲವಳಿದು ಛಲವಳಿದು ಮದವಳಿದು ಮತ್ಸರವಳಿದು
ಗುರುಕಾರುಣ್ಯವ ಪಡೆದು ಅಂಗದ ಮೇಲೆ ಲಿಂಗವ ಧರಿಸಿ
ಗುರುಲಿಂಗಜಂಗಮಕ್ಕೆ ಭಕ್ತಿಯ ಮಾಡಬಲ್ಲಡೆ
ಶಿವಗತಿ ಸಿಕ್ಕುವುದು.
ಶಿವಭಕ್ತನಾಗಿ ಸತ್ಯ ಸದಾಚಾರ ಭಕ್ತಿವಿಡಿದು ನಡೆಯಬಲ್ಲಡೆ
ಕೈಲಾಸದ ಬಟ್ಟೆ ಬೇರಿಲ್ಲವೆಂದ
ಕಲಿದೇವಯ್ಯ. (೨೨೦)

ವೇದ ವಿಪ್ರರ ಬೋಧೆ
ಶಾಸ್ತ್ರ ಸಂತೆಯ ಮಾತು
ಪುರಾಣ ಪುಂಡರ ಗೋಷ್ಠಿ
ಆಗಮ ಅನೃತದ ನುಡಿ
ತರ್ಕ ವ್ಯಾಕರಣ ಕವಿತ್ವ ಪ್ರೌಢಿ
ಇಂತಿವರಂಗದ ಮೇಲೆ ಲಿಂಗವಿಲ್ಲದ ಭಾಷೆ
ಇದು ಕಾರಣ
ತನ್ನೊಳಗನರಿದ
ಅನುಭಾವಿಯಿಂದ ಘನವಿಲ್ಲೆಂದ
ಕಲಿದೇವ. (೨೨೧)

ಹೊನ್ನು ಹೆಣ್ಣು ಮಣ್ಣನಾವರಿಸಿಕೊಂಡು
ಒಡವೆ ಆಭರಣಂಗಳ ಹಲ್ಲಣಿಸಿಕೊಂಡು ಬಂದು
ಸರ್ವರಿಗೆ ಶಾಸ್ತ್ರೋಪದೇಶವ ಹೇಳುವರು ವೇಷಧಾರಿಗಳು
ಸೂಳೆಯರಂತೆ ತಮ್ಮ ಉಪಾಧಿಕೆಗೆ ಒಡಲಾಸೆಗೆ
ಹಿತವಚನ ನುಡಿವರು
ಇಂತಪ್ಪ ಪ್ರಪಂಚಿನ ವೇಷಡಂಭಕ ಧೂರ್ತಲಾಂಛನಧಾರಿಗಳಿಗೆ
ಮಹಂತಿನ ದೇವರೆನ್ನಬಹುದೆ ಎನಲಾಗದು
ಅದೇನು ಕಾರಣವೆಂದಡೆ
ತಮ್ಮಾದಿಯ ನಿಲುವ ತಾವರಿಯರು
ಷಟ್ ಸ್ಥಲದ ನಿರ್ಣಯವ ಏನೆಂದರಿಯರು

ಆಚಾರದನುಭಾವದಂತರಂಗದ ಮೂಲವ
ಮುನ್ನವೇ ಅರಿಯರು
ಇಂತಿದನರಿಯದ ಪಶುಪ್ರಾಣಿಗಳಿಗೆ
ಜಂಗಮವೆನ್ನಬಹುದೆ
ಎನ್ನಲಾಗದಯ್ಯಾ
ಕಲಿದೇವರದೇವ. (೨೨೨)

೦

ಮಧುವಯ್ಯ

ಅಂಕಿತನಾಮ : ಅರ್ಕೇಶ್ವರಲಿಂಗ
ದೊರೆತಿರುವ ವಚನಗಳು : ೧೦೨

ಅರಿವುಳ್ಳವನಂತೆ ಭವದಲ್ಲಿ
ಬಾಹರ ಭವನವ ಕಾವನೆ
ತತ್ವ ಭಾವನೆಯ ಬಲ್ಲವನಂತೆ
ತುತ್ತಿನಾಸೆಗಾಗಿ ಬೆಕ್ಕಿನಂತೆ ಧ್ಯಾನಿಸುತ್ತಿಪ್ಪನೆ
ಇವರಾಟ ಮರ್ತ್ಯರ ಸಿಕ್ಕಿಸುವ ಕೂಟ
ಅರ್ಕೇಶ್ವರಲಿಂಗನ ಕೂಟವಲ್ಲ. (೨೨೩)

ಅಸಿ ಕೃಷಿ ಮಸಿ ಯಾಚಕ ವಾಣಿಜ್ಯತ್ವವ
ಮಾಡುವುದು ಲೇಸು
ಹುಸಿ ವೇಷವ ತೊಟ್ಟು ಅಸುವ ಹೊರೆವವನ ಘಟ
ಪಿಶಿತದ ತಿತ್ತಿಯಂತೆ ಅಘಟಿತ
ಅವನನೊಲ್ಲ ಅರ್ಕೇಶ್ವರಲಿಂಗ. (೨೨೪)

ತನು ನಿರ್ವಾಣ ಮನ ಸಂಸಾರ
ಮಾತು ಬ್ರಹ್ಮ ನೀತಿ ಅಧಮ
ಅದೇತರ ಅರಿವು
ಘಾತಕನ ಕೈಯ ಕತ್ತಿಯಂತೆ
ಇದು ನಿಹಿತವಲ್ಲ
ಅರ್ಕೇಶ್ವರಲಿಂಗವನರಿವುದಕ್ಕೆ. (೨೨೫)

ಮನಸಂದ ಮಾರಿತಂದೆ

ಅಂಕಿತನಾಮ : ಮನಸಂದಿತ್ತು ಮಾರೇಶ್ವರ
ದೊರೆತಿರುವ ವಚನಗಳು : ೧೦೧

ಖ್ಯಾತಿ ಲಾಭಕ್ಕೆ ಮಾಡುವಾತ ಭಕ್ತನಲ್ಲ
ಡಂಬಕಕ್ಕೆ ಡೊಂಬರಂತೆ ತಿರುಗುವವ ಜಂಗಮವಲ್ಲ
ತನು ತಲೆ ಬತ್ತಲೆಯಾಗಿ
ಮನ ತ್ರಿವಿಧ ಆಸೆ ಉಳ್ಳನ್ನಕ್ಕ ವಿರಕ್ತನಲ್ಲ
ಇಂತೀ ಗುಣವ ಸಂಪಾದಿಸುವನ್ನಕ್ಕ
ಎನಗೆ ಮುಕ್ತಿಯೆಂಬ ಬಟ್ಟೆಯಿಲ್ಲ
ನೀ ಸತ್ತೆ ನಾ ಕೆಟ್ಟೆ
ಮನಸಂದಿತ್ತು ಮಾರೇಶ್ವರಾ. (೨೨೬)

ಡಂಭಕದ ಪೂಜೆ
ಹೋಹ ಹೋತಿನ ಕೇಡು
ಆಡಂಬರದ ಪೂಜೆ
ತಾಮ್ರದ ಮೇಲಣ ಸುವರ್ಣದ ಛಾಯೆ
ಇಂತೀ ಪೂಜೆಗೆ
ಹೂ ಸೊಪ್ಪನಿಕ್ಕಿ ಮನವ ಹೂಸಿ ಮಾಡುವ ಪೂಜೆ
ಬೇರು ನೆನೆಯದ ನೀರು
ಆಯವಿಲ್ಲದ ಗಾಯ
ಭಾವವಿಲ್ಲದ ಗರಿ
ಮನಸಂದ ಮಾರೇಶ್ವರಾ. (೨೨೭)

ಭಕ್ತರು ನಾವೆಂದು ನಿತ್ಯ ನೇಮವ ಮಾಡಿಕೊಂಡೆವೆಂದು
ಮನೆ ಮನೆಯ ಬಾಗಿಲ ತಪ್ಪಲ ಕಾಯಲೇತಕ್ಕೆ
ಇದು ಶಿವಭಕ್ತರಿಗೆ ಒಪ್ಪುವುದೆ
ಇಂತೀ ವ್ರತ ನೇಮವ ಮಾರಿ
ಘಟವ ಹೊರೆವ ಕುಟಿಲರಿಗಂಜಿ

ಮುನ್ನವೆ
ಮನಸಂದಿತ್ತು ಮಾರೇಶ್ವರಾ. (೨೨೮)

ವಾಚಕ ಚಪಳತ್ವದಿಂದ ಮಾತನಾಡಿದಡೇನು
ತ್ರಿವಿಧದ ಆಸೆ ಬಿಡದನ್ನಕ್ಕ
ರೋಷದ ಪಾಶ ಕೀಳದನ್ನಕ್ಕ
ಮಾತೆಲ್ಲವೂ ಮೂರರಾಸೆಯಲ್ಲಿ ಸಿಕ್ಕಿ
ರೋಷದ ಪಾಶದಲ್ಲಿ ಕಟ್ಟುವಡೆದು
ಮತ್ತೇತರ ಭಾಷೆಯ ನೀತಿ
ಹೋತಿನ ಕೊರಳ ಮೊಲೆಯ ಆಸೆ ಮಾಡಿ ಉಂಡಡೆ
ಅಲ್ಲೇತರ ಸುಖ
ಮತ್ತೀ ಗುಣದಾಸೆ ಹರಿದು ನಿಂದಡೆ
ಮನಸಂದಿತ್ತು ಮಾರೇಶ್ವರಾ. (೨೨೯)

ವೇದವ ಕಲಿತಲ್ಲಿ
ಪಾಠಕನಲ್ಲದೆ ಜ್ಞಾನಿಯಲ್ಲ ನಿಲ್ಲು
ಶಾಸ್ತ್ರ ಪುರಾಣವನೋದಿದಲ್ಲಿ
ಪಂಡಿತನಲ್ಲದೆ ಜ್ಞಾನಿಯಲ್ಲ ನಿಲ್ಲು
ವ್ರತ ನೇಮ ಕೃತ್ಯ ಪೂಜಕನಾದಡೇನು
ದಿವ್ಯಜ್ಞಾನದ ಠಾವನರಿಯಬೇಕು
ಈ ಭೇದಂಗಳ ತಿಳಿದರಿದಲ್ಲಿ
ಮನಸಂದಿತ್ತು ಮಾರೇಶ್ವರಾ. (೨೩೦)

೦

ಮಾದಾರ ಧೂಳಯ್ಯ

ಕಸುಬು : ಚರ್ಮವನ್ನು ಹದಮಾಡಿ ಪಾದರಕ್ಷೆಯನ್ನು ಹೊಲಿಯುವುದು.
ಅಂಕಿತನಾಮ : ಕಾಮಧೂಮ ಧೂಳೇಶ್ವರ
ದೊರೆತಿರುವ ವಚನಗಳು : ೧೦೬

ಎನ್ನ ತನುವ ನಿರ್ಮಲ ಮಾಡಿದನಯ್ಯಾ ಬಸವಣ್ಣನು
ಎನ್ನ ಮನವ ನಿರ್ಮಲ ಮಾಡಿದನಯ್ಯಾ, ಚೆನ್ನಬಸವಣ್ಣನು
ಎನ್ನ ಪ್ರಾಣವ ನಿರ್ಮಲ ಮಾಡಿದನಯ್ಯಾ ಪ್ರಭುದೇವರು
ಇಂತೆನ್ನ ತನು ಮನ ಪ್ರಾಣವ ನಿರ್ಮಲ ಮಾಡಿ
ತಮ್ಮೊಳಿಂಬಿಟ್ಟುಕೊಂಡ ಕಾರಣ
ಕಾಮಧೂಮ ಧೂಳೇಶ್ವರಾ
ನಿಮ್ಮ ಶರಣರ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು. (೨೩೧)

ಸತ್ಯ ಶುದ್ಧ ಕಾಯಕವ ಮಾಡಿ ತಂದು
ವಂಚನೆಯಿಲ್ಲದೆ ಪ್ರಪಂಚಳಿದು
ನಿಚ್ಚ ಜಂಗಮಕ್ಕೆ ದಾಸೋಹವ ಮಾಡುವ
ಸದ್ಭಕ್ತನ ಹೃದಯದೊಳಗೆ ಅಚ್ಚೊತ್ತಿದಂತಿಪ್ಪ
ಕಾಮಧೂಮ ಧೂಳೇಶ್ವರ. (೨೩೨)

○

ಮಾರೇಶ್ವರೊಡೆಯ

ಅಂಕಿತನಾಮ : ಮಾರೇಶ್ವರ
ದೊರೆತಿರುವ ವಚನಗಳು : ೧೩

ಅಪ್ಪುವಿನ ಶಿಲೆಯ
ಉಳಿಯ ಮೊನೆಯಲ್ಲಿ ಚಿತ್ರಿಸಬಹುದೆ
ಅರಗಿನ ಪಟವ
ಉಳಿಯ ಮೊನೆಯಲ್ಲಿ ಅಕ್ಷರವ ಬರೆಯಬಹುದೆ
ಮೃತ್ತಿಕೆಯ ಹರುಗೋಲನೇರಿ
ನದಿಯ ತಪ್ಪಲಿಗೆ ಹೋಗಬಹುದೆ
ನಿಜ ನಿಶ್ಚಯವನರಿಯದವನ ವಾಚಾರಚನೆ ಇಷ್ಟಲ್ಲದಿಲ್ಲ
ನಿಜತತ್ವವನರಿದವನ ವಾಚಾರಚನೆಯ ಕುರುಹೆಂತುಟೆಂದಡೆ
ಶಿಲೆಯೊಳಗಣ ಸುರಭಿಯಂತೆ
ಪ್ರಳಯದೊಳಗಾಗದ ನಿಜನಿವಾಸದಂತೆ
ಆಯದ ಗಾಯದಂತೆ
ಸಂಗಾಯದ ಸುಖದಂತೆ
ಇಂತೀ ಭಾವರಹಿತವಾದ ಭಾವಜ್ಞನ ತೆರ
ಕೂಗಿಂಗೆ ಹೊರಗು
ಮಹಾಮಹಿಮ ಮಾರೇಶ್ವರಾ. (೨೩೩)

ಊರೆಲ್ಲರೂ ನೆರೆದು ಕಳ್ಳನ ಬೆಳ್ಳನೆಂದಡೆ
ಅವ ಕಳ್ಳನೋ ಬೆಳ್ಳನೋ ನೀವು ಹೇಳಿರೆ
ಇವರೆಲ್ಲರೂ ಕೂಡಿ ಬಲ್ಲವನವನಲ್ಲ ಎಂದಡೆ
ಅವನೆಲ್ಲಿರ್ದಡೇನು ಮಾರೇಶ್ವರಾ. (೨೩೪)

ಮುಕ್ತಾಯಕ್ಕ

ಊರು : ಲಕ್ಕುಂಡಿ
ಅಂಕಿತನಾಮ : ಅಜಗಣ್ಣ/ಅಜಗಣ್ಣತಂದೆ
ದೊರೆತಿರುವ ವಚನಗಳು : ೩೭

ತನ್ನ ತಾನರಿದವಂಗೆ ಅರಿವೆ ಗುರು
ಅರಿವರತು ಮರಹು ನಷ್ಟವಾದಲ್ಲಿ
ದೃಷ್ಟನಷ್ಟವೆ ಗುರು
ದೃಷ್ಟನಷ್ಟವೆ ಗುರು ತಾನಾದಲ್ಲಿ
ಮುಟ್ಟಿ ತೋರಿದವರಿಲ್ಲದಡೇನು
ಸಹಜವ ನೆಲೆಗೊಳಿಸುವ
ನಿರ್ಣಯ ನಿಷ್ಪತ್ತಿಯೆ ಗುರು ನೋಡಾ.
ಗುರು ತಾನಾದಡೂ ಗುರುವಿಡಿದಿರಬೇಕು ಎನ್ನ ಅಜಗಣ್ಣನಂತೆ. (೨೩೫)

ತೊರೆಯ ಕಟ್ಟೆಯ ಕಟ್ಟಿ ನಿಲಿಸಲುಬಹುದೆ
ನೆರೆ ಮರುಳಿಗೆ ಬುದ್ಧಿಯ ಹೇಳಲುಬಹುದೆ
ತರಿಸಲುವೋದವನಿದಿರಿಚ್ಛೆಯನರಿಯದೆ ಮರೆದಿದ್ದಡೆ
ಹಗೆ ಇರಿವುದ ಮಾಣ್ಬನೆ
ದೂರದಲ್ಲಿ ಹೋದವ ಊರ ಸುದ್ದಿಯನರಿಯ
ಹೇಳದೆ ಬಯಲಾದ
ಕಾಣಾ ಎನ್ನ ಅಜಗಣ್ಣ ತಂದೆ. (೨೩೬)

ನುಡಿಯಲುಬಾರದು ಕೆಟ್ಟ ನುಡಿಗಳ
ನಡೆಯಲುಬಾರದು ಕೆಟ್ಟ ನಡೆಗಳ
ನುಡಿದಡೇನು ನುಡಿಯದಿರ್ದಡೇನು
ಹಿಡಿದ ವ್ರತ ಬಿಡದಿರಲು
ಅದೆ ಮಹಾ ಜ್ಞಾನದಾಚರಣೆ
ಎಂಬೆನು ಅಜಗಣ್ಣ ತಂದೆ. (೨೩೭)

○

ಮೆರೆಮಿಂಡಯ್ಯ

ಅಂಕಿತನಾಮ : ಐಘಟದೂರ ರಾಮೇಶ್ವರಲಿಂಗ
ದೊರೆತಿರುವ ವಚನಗಳು : ೧೯

ಅಶನದಾಸೆಗಾಗಿ ಆಚಾರವ ತಪ್ಪಿ
ವಿಷಯದಾಸೆಗಾಗಿ ವಿರಕ್ತಿಯ ಬಿಟ್ಟು
ಸಕಲರ ಕೂಟದಲ್ಲಿ ವಿಕಳತೆಗೊಂಬ
ಪ್ರಕೃತಿಭಾವಿಗುಂಟೆ ನಿಜಭಕ್ತಿ
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. (೨೩೮)

ಅಸಿಯಾಗಲಿ ಕೃಷಿಯಾಗಲಿ
ವಾಚಕ ವಾಣಿಜ್ಯ ಮಸಿಯಾಗಲಿ
ಮಾಡುವಲ್ಲಿ ಹುಸಿಯಿಲ್ಲದಿರಬೇಕು
ಅದು ಅಸಮಾಕ್ಷನ ಬರವು
ಪಶುಪತಿಯ ಇರವು
ಐಘಟದೂರ ರಾಮೇಶ್ವರಲಿಂಗ ತಾನೆ. (೨೩೯)

ಐಶ್ವರ್ಯವುಳ್ಳವಂಗೆ ನಿಜ ಭಕ್ತಿಯಿಲ್ಲ
ಡಂಬಕದ ವೇಷಧಾರಿಗೆ ನಿಜ ತತ್ವದ ಜ್ಞಾನವಿಲ್ಲ
ಕುಟಿಲರ ನೆಮ್ಮಿಗೆ ಘನಲಿಂಗದ ನೆಮ್ಮಿಗೆಯಿಲ್ಲ
ಐಘಟದೂರ ರಾಮೇಶ್ವರಲಿಂಗ. (೨೪೦)

ತನ್ನ ತಾನರಿದಡೆ ತನ್ನರಿವೆ ಗುರು
ತಾನೆ ಲಿಂಗ ತನ್ನ ನಿಷ್ಠೆಯೇ ಜಂಗಮ
ಇಂತೀ ತ್ರಿವಿಧವು ಒಂದಾದಡೆ
ಐಘಟದೂರ ರಾಮೇಶ್ವರಲಿಂಗವು ತಾನೆ. (೨೪೧)

ನರ ದೇಹವ ತೊಟ್ಟು
ತಾ ಗುರುವೆಂದು ಇದಿರಿಗೆ ಇಷ್ಟವ ಕೊಟ್ಟು
ಅವರ ಮನೆಯಲ್ಲಿ ಒಲ್ಲದೆ
ಅಕ್ಕಿ ತುಪ್ಪವ ನೀಡಿಸಿಕೊಂಡು
ಅಟ್ಟುಕೊಂಡುಂಬ ಮಿಟ್ಟೆಯ ಭಂಡರ
ಕೈಯಲ್ಲಿ ಕಟ್ಟಿಸಿಕೊಂಡ ಲಿಂಗ
ದೃಷ್ಟದಿ ಶ್ರವಕಾಯ
ಇದನರಿತು
ಅಲ್ಲಿ ಹೊಕ್ಕು ಉಂಡವಂಗೆ
ಕರಟನ ಕೈಯ ಕೀಟಕ ಆ ಕಾಕೂಳು
ಘಟಿತಮಯ ಐಘಟದೂರ ರಾಮೇಶ್ವರಲಿಂಗ
ಅವರ ಒಲ್ಲನಾಗಿ. (೨೪೨)

ವ್ರತಭ್ರಷ್ಟನ ಗುರುಘಾತಕನ
ವಂದಿಸಿ ನಿಂದಿಸುವವನ ದ್ರವ್ಯದಾಸೆಗೆ
ಅವನ ಮಂದಿರವ ಹೊಕ್ಕುಂಡಡೆ
ಜಂಬುಕ ತಿಂದ ಹಡಿಕವ ಮಿಕ್ಕು ಹುಳಿತವ
ತಾ ತಿಂದಂತೆ
ಐಘಟದೂರ ರಾಮೇಶ್ವರಲಿಂಗ. (೨೪೩)

ಮೇದರ ಕೇತಯ್ಯ

ಕಸುಬು : ಬಿದಿರಿನಿಂದ ಮೊರ ಬುಟ್ಟಿ ತೊಟ್ಟಿಲುಗಳನ್ನು ಹೆಣೆಯುವಿಕೆ.
ಅಂಕಿತನಾಮ : ಗವರೇಶ್ವರ
ದೊರೆತಿರುವ ವಚನಗಳು : ೧೮

ಎನ್ನ ಕಾಯದ ಕಳವಳವ ನಿಲಿಸಿ
ಗುರುಲಿಂಗವ ತೋರಿದ
ಎನ್ನ ಮನದ ವ್ಯಾಕುಳವ ನಿಲಿಸಿ
ಜಂಗಮಲಿಂಗವ ತೋರಿದ
ಇಂತು ಅಂತರರಂಗ ಬಹಿರಂಗದಲ್ಲಿ ತಾನೆಯಾಗಿ
ಎನ್ನ ಪಾವನವ ಮಾಡಿದ
ಅಮರಗಣಂಗಳು ಮುನಿದು ಎನ್ನ ಕೈಲಾಸಕ್ಕೆ ಒಯ್ದಡೆ
ಸದ್ಯೋನ್ಮುಕ್ತಿಯ ತೋರಲೆಂದು
ಮರ್ತ್ಯಕ್ಕೆ ಮರಳಿ ತಂದ
ಸಂಗನ ಬಸವಣ್ಣನೆ ಗುರುವೆನಗೆ
ಸಂಗನ ಬಸವಣ್ಣನೆ ಪರವೆನಗೆ
ಸಂಗನ ಬಸವಣ್ಣನ ಕರುಣದಿಂದ
ಘನಕ್ಕೆ ಘನಮಹಿಮ ಅಲ್ಲಮಪ್ರಭುವಿನ
ಶ್ರೀಪಾದವ ಕಂಡು ಬದುಕಿದೆನು
ಕಾಣಾ ಗವರೇಶ್ವರಾ. (೨೪೪)

೦

ಮೈದುನ ರಾಮಯ್ಯ

ಊರು : ಆಂಧ್ರಪ್ರದೇಶ
ಅಂಕಿತನಾಮ : ಮಹಾಲಿಂಗ ಚೆನ್ನರಾಮ
ದೊರೆತಿರುವ ವಚನಗಳು : 6

ಮಳಲಲ್ಲಿ ರಸ ಉಂಟೆ
ನೆಳಲಿಗೆ ತಡೆ ಉಂಟೆ
ರಣದಲ್ಲಿ ತಪ ಉಂಟೆ
ನೇಹ ತಪ್ಪಿದಲ್ಲಿ ಮೋಹವನರಸಲುಂಟೆ
ಮಹಾಲಿಂಗ ಚೆನ್ನರಾಮ
ಮನ ಮುರಿದ ಬಳಿಕ ಕಂಗಳಿಗೆ ವಿಷವಯ್ಯಾ. (೨೪೫)

೦

ಮೋಳಿಗೆ ಮಾರಯ್ಯ

ಊರು	:	ಹುಟ್ಟಿದ್ದು ಕಾಶ್ಮೀರ. ಅನಂತರ ಬಸವಣ್ಣನವರು ಇದ್ದ ಕಲ್ಯಾಣ ಪಟ್ಟಣಕ್ಕೆ ಬಂದು ನೆಲೆಸಿದರು.
ಕಸುಬು	:	ಸೌದೆ/ಕಟ್ಟಿಗೆ ಹೊರೆಯನ್ನು ಹೊತ್ತು ಮಾರುವುದು.
ಅಂಕಿತನಾಮ	:	ನಿಃಕಳಂಕ ಮಲ್ಲಿಕಾರ್ಜುನ
ದೊರೆತಿರುವ ವಚನಗಳು	:	೮೧೬

ಅದ್ವೈತವ ಹೇಳುವ ಹಿರಿಯರೆಲ್ಲರೂ
ದ್ವೈತಕ್ಕೊಳಗಾದರು
ನಿಸ್ಸಂಸಾರವ ಹೇಳುವ ಹಿರಿಯರೆಲ್ಲರೂ
ಸಂಸಾರದ ಸಾರವ ಚಪ್ಪರಿದು ಕೆಟ್ಟರು
ಭಕ್ತರಿಗೆ ನಿತ್ಯವಲ್ಲೆಂದು ಹೇಳಿ
ತಾವು ಅನಿತ್ಯವ ಹಿಡಿದು
ಪಾಶಕ್ಕೆ ಸಿಕ್ಕಿ ಸತ್ತುದನರಿಯದೆ
ನಾವು ಮುಕ್ತರಾದೆವೆಂಬ ಭ್ರಷ್ಟರ ನೋಡಾ
ನನಗಿನ್ನೆತ್ತಣ ಮುಕ್ತಿ ಎಂದಂಜಿದೆ
ನಿಃಕಳಂಕ ಮಲ್ಲಿಕಾರ್ಜುನಾ. (೨೪೬)

ಅರಿವ ಕತ್ತಿ
ಹರಣದ ಇರವ ಬಲ್ಲುದೆ
ಬಿರುನುಡಿಯ ನುಡಿವವ
ಮಾನ್ಯರ ಮನದ ಮನ್ನಣೆಯ ಬಲ್ಲನೆ
ಹೆತ್ತವರಿಗೆ ಕೂಸು ಹುಚ್ಚಾದರೆ
ಅದರರ್ತಿ ಹೆತ್ತವರಿಗಲ್ಲದೆ ಮಿಕ್ಕಾದವರಿಗುಂಟೆ
ನಿಃಕಳಂಕ ಮಲ್ಲಿಕಾರ್ಜುನಾ. (೨೪೭)

ಆದ್ಯರ ವಚನವ ನೋಡಿ
ಓದಿ ಹೇಳಿದಲ್ಲಿ ಫಲವೇನಿ ಭೋ
ತನ್ನಂತೆ ವಚನವಿಲ್ಲ

ವಚನದಂತೆ ತಾನಿಲ್ಲ
ನುಡಿಯಲ್ಲಿ ಅದ್ವೈತವ ನುಡಿದು
ನಡೆಯಲ್ಲಿ ಅಧಮರಾದಡೆ
ಶಿವಶರಣರು ಮೆಚ್ಚುವರೆ
ಇದು ಕಾರಣ
ಅವರ ನಡೆನುಡಿ ಶುದ್ಧವಿಲ್ಲವಾಗಿ
ಅವರಿಗೆ ಗುರು ಲಿಂಗ ಜಂಗಮ ಪಾದೋದಕ ಪ್ರಸಾದ
ವಿಭೂತಿ ರುದ್ರಾಕ್ಷಿ ಪಂಚಮ ಪಂಚಾಕ್ಷರವಿಲ್ಲ
ಇಂತಿವಿಲ್ಲದೆ ಬರಿಯ ಮಾತಿನಲ್ಲಿ ಬೊಮ್ಮವ ನುಡಿವ
ಬ್ರಹ್ಮೇತಿಕಾರರ ಮೆಚ್ಚ
ನಿಃಕಳಂಕ ಮಲ್ಲಿಕಾರ್ಜುನ. (೨೪೮)

ಕದ್ದ ಕಳವ ಮರೆಸಿಕೊಂಡು
ನಾ ಸಜ್ಜನನೆಂಬಂತೆ
ಇದ್ದ ಗುಣವ ನೋಡಿ ಹೊದ್ದಿ ಸೋದಿಸಲಾಗಿ
ಕದ್ದ ಕಳವು ಕೈಯಲ್ಲಿದ್ದ ಮತ್ತೆ ಸಜ್ಜನತನವುಂಟೆ
ಇಂತೀ ಸಜ್ಜನಗಳ್ಳರ ಕಂಡು
ಹೊದ್ದದೆ ಹೋದ
ನಿಃಕಳಂಕ ಮಲ್ಲಿಕಾರ್ಜುನ. (೨೪೯)

ತಾವು ಸತ್ಯರೆಂದು ನುಡಿಯದಿಪ್ಪುದೆ ಶೀಲ
ತಾವು ವ್ರತಿಗಳೆಂದು ಇದಿರಿಂಗೆ ಹೇಳದಿಹುದೆ ವ್ರತ
ಗುರು ಲಿಂಗ ಜಂಗಮವ ದೂಷಿಸದಿಹುದೆ ವ್ರತ
ಸಹಪಂಕ್ತಿಯಲ್ಲಿ ವಿಶೇಷವ ಕೊಳದಿಪ್ಪುದೆ ವ್ರತ
ಇಂತಪ್ಪ ವ್ರತಕ್ಕೆ ನಮೋ ನಮೋ ಎಂಬೆ
ಇಂತಲ್ಲದೆ ಜಗವ ಸಿಕ್ಕಿಸುವ ಬಹುಮುಖಿಗಳಿಗೆಲ್ಲಿಯದೊ ಮುಕ್ತಿ
ಮಾತಿನಲ್ಲಿ ಭಕ್ತಿ
ಮನದಲ್ಲಿ ಕತ್ತರಿ
ಭಕ್ತಿಯಲ್ಲಿ ಬಲೆ
ಚಿತ್ತದಲ್ಲಿ ಕತ್ತಲೆಯಿಪ್ಪವರಿಗೆಲ್ಲಿಯದೊ ಭಕ್ತಿಶೀಲ

ಇಂತಿವ ಬಲ್ಲೆನಾಗಿ ಭಕ್ತಿ ನನಗಿಲ್ಲ
ಇನ್ನೆತ್ತಣ ಮುಕ್ತಿಯೋ
ನಿಃಕಳಂಕ ಮಲ್ಲಿಕಾರ್ಜುನಾ. (೨೫೦)

ಭೂಮಿಯಲ್ಲಿ ಪೂಜಿಸಿಕೊಂಬ ಅರುಹಿರಿಯರೆಲ್ಲರೂ
ವೇದ ಶಾಸ್ತ್ರ ಪುರಾಣ ಆಗಮ
ಶ್ರುತಿ ಸ್ಮೃತಿ ತತ್ವದಿಂದ
ಇದಿರಿಗೆ ಬೋಧಿಸಿ ಹೇಳುವ
ಹಿರಿಯರೆಲ್ಲರೂ ಹಿರಿಯರಪ್ಪರೆ
ನುಡಿದಂತೆ ನಡೆದು
ನಡೆದಂತೆ ನುಡಿದು
ನಡೆನುಡಿ ಸಿದ್ಧಾಂತವಾಗಿಯಲ್ಲದೆ
ಅರುಹಿರಿಯರಾಗಬಾರದು
ಗೆಲ್ಲಸೋಲಕ್ಕೆ ಹೋರಿ ಬಲ್ಲಿದರಾದೆವೆಂದು
ತನ್ನಲ್ಲಿದ್ದ ಹುಸಿಯ ಹುಸಿವ
ಕಲ್ಲೆದೆಯವನ ನೋಡಾ
ಇವರೆಲ್ಲರ ಬಲ್ಲತನವ ಕಂಡು
ನಿಲ್ಲದೆ ಹೋದ
ನಿಃಕಳಂಕ ಮಲ್ಲಿಕಾರ್ಜುನ. (೨೫೧)

ಮಾತನಳಿವ ಮಾತು ಬಂದಡೆ
ಹೋತಿನಂತೆ ಹೋರಲೇಕೆ
ಮಾತಿಂಗೆ ಮಣಿದಡೆ
ಅಜಾತನ ಒಲುಮೆ
ನಿಃಕಳಂಕ ಮಲ್ಲಿಕಾರ್ಜುನಾ. (೨೫೨)

ಮಾತಿಗೆ ಮಾತು ಕೊಟ್ಟು
ನೀತಿ ನಿರ್ಣಯವನರಿಯದೆ
ಜ್ಞಾತೃ ಜ್ಞಾನ ಜ್ಞೇಯವೆಂಬ
ಭ್ರಾಂತಿನ ಕುಡಿಕೆಯಲ್ಲಿ ಸಿಕ್ಕಿ

ಕೂಗುತ್ತಿದ್ದವರ ಕಂಡು
ಅದೇತಕ್ಕೆ ಬಾತೆ ಎಂದೆ
ನಿಃಕಳಂಕ ಮಲ್ಲಿಕಾರ್ಜುನಾ. (೨೫೩)

ವೇದವ ಕಲಿತು ಶಾಸ್ತ್ರವನೋದಿ
ನಾನಾ ಪುರಾಣಂಗಳಲ್ಲಿ ಪರಿಣತೆಯಾದೆವೆಂದು
ಶ್ರುತಿ ಸ್ಮೃತಿಗಳಲ್ಲಿ ಪರತತ್ವವ ನೋಡಿ
ಕಂಡೆಹೆವೆಂದು ಹೇಳುತ್ತಿರ್ಪ ಹಿರಿಯರೆಲ್ಲರೂ
ಇಕ್ಕುವ ದಾತನ ಬಾಗಿಲ ಕಾಯ್ದು ಚಿಕ್ಕಮಕ್ಕಳಾದರು
ದೃಷ್ಟವ ಬೋಧಿಸುವ ಹಿರಿಯರೆಲ್ಲರೂ ಕೆಟ್ಟರಲ್ಲಾ
ಉತ್ತರದ ಬಲೆಗೆ ಸಿಕ್ಕಿದ ಮೂಷಕನಂತೆ
ಇವರ ದೃಷ್ಟವ ಕಂಡು
ಮತ್ತೆ ಹಿರಿಯರೆಂದು ಹೋರುತ್ತಿರ್ಪ
ಮಿಟ್ಟೆಯ ಭಂಡರ ನೋಡಾ
ನಿಃಕಳಂಕ ಮಲ್ಲಿಕಾರ್ಜುನಾ. (೨೫೪)

ಸದ್ಭಕ್ತಿಯೆ ದೈವವೆಂದು ಅರ್ಚಿಸುವ ಠಾವಿನಲ್ಲಿ
ಮತ್ತತ್ವ ದುಶ್ಚರಿತ್ರ ಪಗುಡಿ ಪರಿಹಾಸಕತನ
ಚೆಲ್ಲಾಟ ಗೆಲ್ಲ ಸೋಲತನ ಇವೆಲ್ಲವ ಬಿಡಬೇಕು
ಇದೇ ಸದ್ಭಕ್ತಿ ಸದಾತ್ಮ ಯುಕ್ತಿ
ನಿಃಕಳಂಕ ಮಲ್ಲಿಕಾರ್ಜುನಾ (೨೫೫)

○

ಲದ್ದೆಯ ಸೋಮಯ್ಯ

ಅಂಕಿತನಾಮ : ಲದ್ದೆಯ ಸೋಮ
ದೊರೆತಿರುವ ವಚನಗಳು : ೧

ಆವ ಕಾಯಕವಾದಡೂ
ಸ್ವಕಾಯಕವ ಮಾಡಿ
ಗುರು ಲಿಂಗ ಜಂಗಮದ ಮುಂದಿಟ್ಟು
ಒಕ್ಕುದ ಹಾರೈಸಿ ಮಿಕ್ಕುದ ಕೈಕೊಂಡು
ವ್ಯಾಧಿ ಬಂದಡೆ ನರಳು
ಬೇನೆ ಬಂದಡೆ ಒರಲು
ಜೀವ ಹೋದಡೆ ಸಾಯಿ
ಇದಕ್ಕಾ ದೇವರ ಹಂಗೇಕೆ
ಭಾಪು ಲದ್ದೆಯ ಸೋಮಾ. (೨೫೬)

ಶಂಕರ ದಾಸಿಮಯ್ಯ

ಊರು : **ಕಂದಗಲ್ಲು, ಹುನಗುಂದ ತಾಲ್ಲೂಕು,**
ವಿಜಾಪುರ ಜಿಲ್ಲೆ.
ಹೆಂಡತಿ : **ಶಿವದಾಸಿ**
ಅಂಕಿತನಾಮ : **ನಿಜಗುರು ಶಂಕರದೇವ**
ದೊರೆತಿರುವ ವಚನಗಳು : **೫**

ಎನ್ನ ಕಾಯಕ್ಕೆ ಗುರುವಾದನಯ್ಯಾ ಬಸವಣ್ಣನು
ಎನ್ನ ಜೀವಕ್ಕೆ ಲಿಂಗವಾದನಯ್ಯಾ ಚೆನ್ನಬಸವಣ್ಣನು
ಎನ್ನ ಪ್ರಾಣಕ್ಕೆ ಪ್ರಸಾದವಾದನಯ್ಯಾ ಮರುಳ ಶಂಕರದೇವನು
ಎನ್ನ ಜ್ಞಾನಕ್ಕೆ ಜಂಗಮವಾದನಯ್ಯಾ ಪ್ರಭುದೇವರು
ಇಂತಿವರ ಕರುಣದಿಂದಲಾನು ಬದುಕಿದೆನಯ್ಯಾ
ನಿಜ ಗುರು ಶಂಕರದೇವಾ. (೨೫೭)

೦

ಶಿವಲೆಂಕ ಮಂಚಣ್ಣ

ಅಂಕಿತನಾಮ : ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ
ದೊರೆತಿರುವ ವಚನಗಳು : ೧೩೨

ಗುರು ವೈಭವಕ್ಕೆ ಸಿಕ್ಕಿದಾಗಲೆ
ಶಿಷ್ಯಂಗೆ ನರಕ ಪ್ರಾಪ್ತಿ
ಲಿಂಗ ಭಜನೆಗೆ ಸಿಕ್ಕಿದಾಗಲೆ
ಮರಣಕ್ಕೊಳಗು
ಜಂಗಮ ಜಂಗುಳಿಯಾಗಿ
ಕಂಡಕಂಡವರಂಗಳಕ್ಕೆ ಜಂಘೆಯನಿಕ್ಕಲಾಗಿ
ನಿರಂಗಕ್ಕೆ ಹೊರಗು
ಇಂತೀ ಇವರು ನಿಂದುದಕ್ಕೆ
ಬಂಧವಿಲ್ಲದಿರಬೇಕು
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ. (೨೫೮)

ಪರಧನವನೊಲ್ಲದಿಪ್ಪುದೆ ವ್ರತ
ಪರಸ್ತ್ರೀಯರ ಕೂಡದಿಪ್ಪುದೆ ಶೀಲ
ಸರ್ವಜೀವವ ಕೊಲ್ಲದಿಪ್ಪುದೆ ನೇಮ
ತಥ್ಯಮಿಥ್ಯವನಳಿದಿಪ್ಪುದೆ ನೇಮ
ಇದು ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ
ಸಂದೇಹವಿಲ್ಲದ ವ್ರತ. (೨೫೯)

ಪರಸ್ತ್ರೀಯರ ಬಿಟ್ಟಾಗಲೆ
ಗುರುವಿನ ಇರವು ಸಾಧ್ಯವಾಯಿತ್ತು
ಪರಧನವ ಬಿಟ್ಟಾಗಲೆ
ಲಿಂಗದ ಇರವು ಅಂಗದಲ್ಲಿ ಸಲೆ ಸಂದಿತ್ತು
ನಿಂದೆಯೆಂಬುದು ನಿಂದಾಗಲೆ
ಜಂಗಮಭಕ್ತಿ ಸಾಧ್ಯವಾಯಿತ್ತು
ಇಂತೀ ತ್ರಿವಿಧದಲ್ಲಿ ತಟ್ಟದಿಪ್ಪಾತನು
ಈಶಾನ್ಯಮೂರ್ತಿ ಮಲ್ಲಿಕಾರ್ಜುಲಿಂಗವ ಮುಟ್ಟಿಪ್ಪನು (೨೬೦)

ಸಕಳೇಶ ಮಾದರಸ

ಅಂಕಿತನಾಮ : ಸಕಳೇಶ್ವರದೇವ
ದೊರೆತಿರುವ ವಚನಗಳು : ೧೩೪

ಇದಿರೆನ್ನ ಹಳಿವವರು ಮತಿಯ ಬೆಳಗುವರು
ಮನದ ಕಾಳಿಕೆಯ ಕಳೆವವರೆನ್ನ ನಂಟರು
ದುರಾಚಾರದಲ್ಲಿ ನಡೆವವರು ಕನ್ನಡಿ ಎನಗೆ
ಹೇಯೋಪಾದಿಯ ತೋರುವವರು
ಇದು ಕಾರಣ
ನಾನನ್ಯ ದೇಶಕ್ಕೆ ಹೋಗೆನು
ಸಕಳೇಶ್ವರದೇವರ ತೋರುವರೊಳರಿಲ್ಲಿಯೆ. (೨೬೧)

ಎನ್ನ ಮನದಲ್ಲಿ ದಿಟವಿಲ್ಲ
ಪೂಜಿಸಿ ಏವೆನು
ಹೃದಯದಲ್ಲೊಂದು
ವಚನದಲ್ಲೊಂದು
ಎನಗೆ ನೋಡಾ
ಎನ್ನ ಕಾಯ ಭಕ್ತ
ಮನ ಭವಿ
ಸಕಳೇಶ್ವರದೇವಾ. (೨೬೨)

ಕಂಡುದ ನುಡಿದಡೆ ಕಡುಪಾಪಿಯೆಂಬರು
ಸುಮ್ಮನಿದ್ದಡೆ ಮುಸುಕುರ್ಮಿಯೆಂಬರು
ಎನಲುಬಾರದು
ಎನದಿರಲುಬಾರದು
ಸಟೆ ಕುಹಕ ಪ್ರಪಂಚಿಂಗಲ್ಲದೆ ಭಜಿಸರು
ಸಕಳೇಶ್ವರದೇವಾ ನಿಮ್ಮಾಣೆ. (೨೬೩)

ಜನಮೆಚ್ಚೆ ಶುದ್ಧನಲ್ಲದೆ
ಮನಮೆಚ್ಚೆ ಶುದ್ಧನಲ್ಲವಯ್ಯಾ
ನುಡಿಯಲ್ಲಿ ಜಾಣನಲ್ಲದೆ
ನಡೆಯಲ್ಲಿ ಜಾಣನಲ್ಲವಯ್ಯಾ
ವೇಷದಲ್ಲಿ ಅಧಿಕನಲ್ಲದೆ
ಭಾಷೆಯಲ್ಲಿ ಅಧಿಕನಲ್ಲವಯ್ಯಾ
ಧನ ದೊರಕದಿದ್ದಡೆ ನಿಸ್ಪೃಹನಲ್ಲದೆ
ಧನ ದೊರಕಿ ನಿಸ್ಪೃಹನಲ್ಲವಯ್ಯಾ
ಏಕಾಂತದ್ರೋಹಿ ಗುಪ್ತಪಾತಕಿ ಯುಕ್ತಿಶೂನ್ಯಂಗೆ
ಸಕಳೇಶ್ವರದೇವ
ಒಲಿ ಒಲಿಯೆಂದೆಡೆ ಎಂತೊಲಿವನಯ್ಯಾ. (೨೬೪)

ಸಗರದ ಬೊಮ್ಮಣ್ಣ

ಊರು : ಸಗರ, ಗುಲ್ಬರ್ಗಾ ಜಿಲ್ಲೆ
ಅಂಕಿತನಾಮ : ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರ
ದೊರೆತಿರುವ ವಚನಗಳು : ೯೧

ಗೆಲ್ಲ ಸೋಲ
ಬಲ್ಲವರಿಗೇಕೆ
ಅದು ಬೆಳ್ಳರ ಗುಣ
ಪಥವೆಲ್ಲರಲಿ ನಿಹಿತನಾಗಿ
ಅತಿಶಯದ ವಿಷಯದಲ್ಲಿ ಗತನಾಗದೆ
ಸರ್ವವನರಿತು
ಗತಮಯಕ್ಕೆ ಅತೀತನಾಗು
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. (೨೬೫)

೦

ಸತ್ಯಕ್ಕ

ಊರು : ಹಿರೇಜಂಬೂರು, ಶಿವಾಳಕೊಪ್ಪದ ಹತ್ತಿರ, ಶಿವಮೊಗ್ಗ ಜಿಲ್ಲೆ.

ಕಸುಬು : ಶಿವಭಕ್ತರ ಮನೆಯ ಅಂಗಳದ ಕಸ ಗುಡಿಸುವುದು.

ಅಂಕಿತನಾಮ : ಶಂಭುಜಕ್ಕೇಶ್ವರ

ದೊರೆತಿರುವ ವಚನಗಳು : ೨೭

ಅರ್ಚನೆ ಪೂಜನೆ ನೇಮವಲ್ಲ
ಮಂತ್ರ ತಂತ್ರ ನೇಮವಲ್ಲ
ಧೂಪ ದೀಪಾರತಿ ನೇಮವಲ್ಲ
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ
ಶಂಭುಜಕ್ಕೇಶ್ವರನಲ್ಲಿ
ಇವು ಕಾಣಿರಣ್ಣಾ ನಿತ್ಯನೇಮ. (೨೬೬)

ಮೊಲೆ ಮುಡಿ ಇದ್ದುದೆ
ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕಠಾರವಿದ್ದುದೆ
ಗಂಡೆಂದು ಪ್ರಮಾಣಿಸಲಿಲ್ಲ
ಅದು ಜಗದ ಹಾಹೆ
ಬಲ್ಲವರ ನೀತಿಯಲ್ಲ
ಏತರ ಹಣ್ಣಾದಡೂ
ಮಧುರವೆ ಕಾರಣ
ಅಂದವಿಲ್ಲದ ಕುಸುಮಕ್ಕೆ
ವಾಸನೆಯೆ ಕಾರಣ
ಇದರಂದವ ನೀನೇ ಬಲ್ಲೆ
ಶಂಭುಜಕ್ಕೇಶ್ವರಾ. (೨೬೭)

ಲಂಚವಂಚನಕ್ಕೆ ಕೈಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈ ಮುಟ್ಟಿ ಎತ್ತಿದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ
ಅದೇನು ಕಾರಣವೆಂದರೆ
ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ. (೨೬೮)

ಸಿದ್ಧರಾಮೇಶ್ವರ

ಕಸುಬು : ಸೊನ್ನಲಿಗೆಯಲ್ಲಿ ಜನರನ್ನು ಒಗ್ಗೂಡಿಸಿಕೊಂಡು ಸಮುದಾಯದ ಬದುಕಿಗೆ ಒಳಿತನ್ನು ಉಂಟುಮಾಡುವ ಕೆರೆಕಟ್ಟೆಬಾವಿ, ಅರವಟ್ಟಿಗೆಗಳನ್ನು ಕಟ್ಟಿಸುವ ಮತ್ತು ಇನ್ನಿತರ ಜನಪರ ಕೆಲಸಗಳನ್ನು ಮಾಡುತ್ತಿದ್ದರು.

ಅಂಕಿತನಾಮ : ಕಪಿಲಸಿದ್ಧಮಲ್ಲಿಕಾರ್ಜುನ

ದೊರೆತಿರುವ ವಚನಗಳು : ೧೯೬೫

ಒಬ್ಬರ ಮನವ ನೋಯಿಸಿ
ಒಬ್ಬರ ಮನವ ಘಾತವ ಮಾಡಿ
ಗಂಗೆಯ ಮುಳುಗಿದಡೇನಾಗುವುದಯ್ಯಾ
ಚಂದ್ರನು ಗಂಗೆಯ ತಡಿಯಲ್ಲಿದ್ದಡೇನು
ಕಲಂಕ ಬಿಡದಾಯಿತ್ತಯ್ಯಾ
ಅದು ಕಾರಣ
ಮನವ ನೋಯಿಸಿದವನೆ
ಒಬ್ಬರ ಘಾತವ ಮಾಡದವನೆ
ಪರಮ ಪಾವನ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನ. (೨೬೯)

ಕುಲವೆಂದು ಹೋರಾಡುವ ಅಣ್ಣಗಳಿರಾ
ಕೇಳಿರೊ
ಕುಲವೇ ಡೋಹರನ
ಕುಲವೇ ಮಾದಾರನ
ಕುಲವೇ ದೂರ್ವಾಸನ
ಕುಲವೇ ವ್ಯಾಸನ
ಕುಲವೇ ವಾಲ್ಮೀಕನ
ಕುಲವೇ ಕೌಂಡಿಲ್ಯನ
ಕುಲವ ನೋಳ್ಪಡೆ ಹುರುಳಿಲ್ಲ

ಅವರ ನಡೆಯ ನೋಳ್ಪಡೆ ನಡೆಯುವರು
ತ್ರಿಲೋಕದಲ್ಲಿಲ್ಲ ನೋಡಾ
ಕಪಿಲಸಿದ್ಧಮಲ್ಲಿಕಾರ್ಜುನಾ. (೨೭೦)

ನಡೆನುಡಿಗಳೊಂದಾದವರಿಗೊಲಿವೆ ಕಂಡಯ್ಯಾ
ನುಡಿಯೆ ಬ್ರಹ್ಮವಾದವರ ನೀನೊಲ್ಲೆಯಯ್ಯಾ
ಮೃಡನೆ ಕಪಿಲಸಿದ್ಧಮಲ್ಲಿಕಾರ್ಜುನಲಿಂಗ
ನುಡಿಯ ಬ್ರಹ್ಮಂಗಳಿಂದಪ್ಪುದೇನೊ. (೨೭೧)

ನುಡಿಯಬಹುದು
ಅದ್ವೈತವನೊಂದುಕೋಟಿ ವೇಳೆ
ಒಮ್ಮೆ ನಡೆಯಬಹುದೆ
ನಿರ್ಧರವಾಗಿ ಸದ್ಭಕ್ತಿ ಸದಾಚಾರವ
ನುಡಿದಂತೆ ನಡೆವ
ನಡೆದಂತೆ ನುಡಿವ
ಸದ್ಭಕ್ತಿ ಸದಾಚಾರಯುಕ್ತ ಮಹಾತ್ಮರ
ಪಾದವ ಹಿಡಿದು ಬದುಕಿಸಯ್ಯಾ
ಪ್ರಭುವೆ ಕಪಿಲಸಿದ್ಧಮಲ್ಲಿಕಾರ್ಜುನಾ. (೨೭೨)

ಪುಣ್ಯವ ಮಾಡಬೇಕೆಂದು ಮರುಗಬೇಡ
ಪಾಪವ ಮಾಡದಿದ್ದಡೆ ಪುಣ್ಯ ದಿಟ
ಬೇರೆ ತೀರ್ಥ ಬೇಡ
ಸತ್ಯವ ನುಡಿವಲ್ಲಿ ಸಂದಿಲ್ಲದಿಹನು
ಕಪಿಲಸಿದ್ಧಮಲ್ಲಿಕಾರ್ಜುನ
ಹುಸಿಗೆ ಹುರುಡಿಗನು. (೨೭೩)

ಮನದ ಮಲಿನವನು ಕಳೆಯಾ ಅಯ್ಯಾ
ಮನವೇ ಶುದ್ಧನಾಗು
ಮನವೇ ಸಿದ್ಧನಾಗು
ಮನವೇ ಪ್ರಸಿದ್ಧನಾಗಯ್ಯಾ

ಮನದೊಡೆಯ ಮಹಾದೇವ ಕಪಿಲಸಿದ್ಧಮಲ್ಲಿನಾಥಾ
ಮನದ ಸರ್ವಾಂಗ ನೀನಾಗಯ್ಯಾ. (೨೭೪)

ವೇಷದಲ್ಲಿ ಭಕ್ತನಾದಡೇನು
ವೇಷದಲ್ಲಿ ಮಹೇಶನಾದಡೇನು
ಗುಣವಿಲ್ಲದನ್ನಕರ
ಕ್ಷೀರಕ್ಕೂ ತಕ್ರಕ್ಕೂ ಭೇದವೇನುಂಟು
ರುಚಿಯಿಂದಲ್ಲದೆ ರೂಪದಿಂದವೆ
ಕಪಿಲಸಿದ್ಧಮಲ್ಲಿಕಾರ್ಜುನಾ. (೨೭೫)

ಸುಂಕದ ಬಂಕಣ್ಣ

ಕಸುಬು : ಸುಂಕವನ್ನು ವಸೂಲು ಮಾಡುವುದು
ಅಂಕಿತನಾಮ : ಬಂಕೇಶ್ವರಲಿಂಗ
ದೊರೆತಿರುವ ವಚನಗಳು : ೧೦೭

ನಿಂದಿಸುವನೊಬ್ಬ
ಸ್ತುತಿಸುವನೊಬ್ಬ
ಇವರಿಬ್ಬರು ಪರಮ ಬಂಧುಗಳು
ಆ ಯೋಗಿಯ ಪುಣ್ಯವನೊಬ್ಬ ಕೊಂಬ
ಪಾಪವನೊಬ್ಬ ಕೊಂಬ
ಇದು ಕಾರಣ
ಗುರುಪ್ರಿಯ ಚೆನ್ನಬಂಕೇಶ್ವರನಲ್ಲಿ
ಸತ್ಯಶರಣರು ನಿತ್ಯ ಮುಕ್ತರು. (೨೭೬)

೦

ಸೂಳೆ ಸಂಕವ್ವೆ

ಅಂಕಿತನಾಮ : ನಿರ್ಲಜ್ಜೇಶ್ವರ
ದೊರೆತಿರುವ ವಚನಗಳು : ೧

ಒತ್ತೆಯ ಹಿಡಿದು
ಮತ್ತೊತ್ತೆಯ ಹಿಡಿಯೆ
ಹಿಡಿದಡೆ
ಬತ್ತಲೆ ನಿಲಿಸಿ ಕೊಲುವರಯ್ಯಾ
ವ್ರತಹೀನನನರಿದು ಬೆರೆದಡೆ
ಕಾದ ಕತ್ತಿಯಲ್ಲಿ
ಕೈ ಕಿವಿ ಮೂಗ ಕೊಯ್ವರಯ್ಯಾ
ಒಲ್ಲೆನೊಲ್ಲೆ ಬಲ್ಲೆನಾಗಿ
ನಿಮ್ಮಾಣೆ ನಿರ್ಲಜ್ಜೇಶ್ವರಾ. (೨೭೭)

○

ಸೊಡ್ಡಳ ಬಾಚರಸ

ಕಸುಬು	:	ಬಿಜ್ಜಳನ ಅರಮನೆಯ ಕಣಜದಿಂದ ಧಾನ್ಯವನ್ನು ಅಳೆದು ಕೊಡುವ ಮತ್ತು ಅಳೆದು ಕೊಟ್ಟಿದ್ದರ ಲೆಕ್ಕವನ್ನು ಬರೆಯುವುದು.
ಅಂಕಿತನಾಮ	:	ಮಹಾದಾನಿ ಸೊಡ್ಡಳಲಿಂಗ/ಸೊಡ್ಡಳದೇವ
ದೊರೆತಿರುವ ವಚನಗಳು	:	೧೦೮

ಈ ಪತ್ರೆಗೀ ಫಲ
ಈ ಪುಷ್ಪಕೀ ಫಲ
ಈ ಪೂಜೆಗೀ ಫಲವೆಂಬ
ಕೈಕೂಲಿಕಾರರೆಲ್ಲ ಕರ್ಮಿಗಳಯ್ಯಾ
ಸ್ವರ್ಗನರಕಗಳನುಂಬ ಕರ್ಮಿಗಳಯ್ಯಾ
ಒಡಲೊಡವೆ ಪಡೆದರ್ಥವ
ಮೃಡದೇವ ಸೊಡ್ಡಳಂಗರ್ಪಿತವೆಂದಾತ
ಬೆಡಗಿನ ಶಿವಪುತ್ರ
ಉಳಿದವರಂತಿರಲಿ. (೨೭೮)

ಉದ್ದವಾಗಿ ಕೂದಲು ನಿಮಿರ್ದು
ಗಡ್ಡಂಗಳು ಬೆಳದಡೇನು ಹೇಳಾ
ಗಡ್ಡಂಗಳು ಬೆಳೆಯವೆ ಹೇಳಿರಣ್ಣಾ
ದೊಡ್ಡದಾಗಿ ಬೆಳೆದ ಗಡ್ಡ ಹೋತುಗಳಿಗೆ
ಗಡ್ಡದ ವೃದ್ಧ ವೈಶಿಕರ ಮೆಚ್ಚ
ಮಹಾದೇವ ಸೊಡ್ಡಳ
ಭಕ್ತಿ ಸಜ್ಜನರಲ್ಲದವರ. (೨೭೯)

ಭಕ್ತರಲ್ಲದವರೊಡನೆ
ಆಡದಿರು ಆಡದಿರು
ಅರ್ಥದಾಸೆಗೆ ದುರ್ಜನರ ಸಂಗವ
ಮಾಡದಿರು ಮಾಡದಿರು

ಉತ್ತಮರ ಕೆಡೆನುಡಿಯದಿರು ನುಡಿಯದಿರು
ಮುಂದೆ ಹೊತ್ತ ಹೊರೆ ದಿಮ್ಮಿತ್ತಹುದು
ನಿತ್ಯವಲ್ಲದ ದೈವಕ್ಕೆರಗದಿರು ಎರಗದಿರು
ಕರ್ತು ಸೊಡ್ಡಳನ ನೆರೆ ನಂಬು
ಡಂಬಕ ಬೇಡ. (೨೮೦)

ವೇದದವರನೊಲ್ಲದೆ
ನಮ್ಮ ಮಾದಾರ ಚನ್ನಯ್ಯಂಗೊಲಿದ
ಶಾಸ್ತ್ರದವರನೊಲ್ಲದೆ
ಶಿವರಾತ್ರಿಯ ಸಂಕಣ್ಣಂಗೊಲಿದ
ಆಗಮದವರನೊಲ್ಲದೆ
ತೆಲುಗು ಜೊಮ್ಮಯ್ಯಂಗೊಲಿದ
ಪುರಾಣಕರ್ಮಿಗಳೆಂಬ ವಿಶಿಷ್ಟ ಬ್ರಹ್ಮರನೊಲ್ಲದೆ
ಉದ್ಭಟಯ್ಯಂಗೊಲಿದ
ಅಣ್ಣ ಕೇಳಾ ಸೋಜಿಗವ
ದಾಸದುಗ್ಗಳೆಯರಿಗೊಲಿದ
ಮುಕ್ಕಣ್ಣ ಸೊಡ್ಡಳ
ಹಾರುವಣ್ಣಗಳಿಗೆ ಹೇಸಿ ಕದವನಿಕ್ಕಿಕೊಂಡನು. (೨೮೧)

೦

ಹಡಪದ ಅಪ್ಪಣ್ಣ

ಹೆಂಡತಿ : ಲಿಂಗಮ್ಮ
ಕಸುಬು : ವೀಳ್ಯವನ್ನು ನೀಡುವುದು. ಕಲ್ಯಾಣ ಪಟ್ಟಣದಲ್ಲಿದ್ದ ಬಸವಣ್ಣನವರ ಮಹಾಮನೆಯಲ್ಲಿ ವೀಳ್ಯವನ್ನು ವಿತರಣೆ ಮಾಡುವುದು.
ಅಂಕಿತನಾಮ : ಬಸವಪ್ರಿಯ ಕೂಡಲ ಚೆನ್ನಬಸವಣ್ಣ
ದೊರೆತಿರುವ ವಚನಗಳು : ೨೫೧

ಅಯ್ಯಾ ನಿಮ್ಮ ಶರಣರು
ವೇಷವ ತೋರಿ ಗ್ರಾಸವ ಬೇಡುವರಲ್ಲ
ದೇಶವ ತಿರುಗಿ ಕಲಿತ ಮಾತ ನುಡಿವರಲ್ಲ
ಲೇಸಾಗಿ ನುಡಿವರು
ಆಶೆ ಇಲ್ಲದೆ ನಡೆವರು
ರೋಷವಿಲ್ಲದೆ ನುಡಿವರು
ಹರುಷವಿಲ್ಲದೆ ಕೇಳುವರು
ವಿರಸವಿಲ್ಲದೆ ಮುಟ್ಟುವರು
ಸರಸವಿದ್ದಲ್ಲಿಯೇ ವಾಸಿಸುವರು
ಇಂತಪ್ಪ ಬೆರಸಿ ಬೇರಿಲ್ಲದ ನಿಜೈಕ್ಯಂಗೆ
ನಮೋ ನಮೋ ಎಂಬೆ
ಬಸವಪ್ರಿಯ ಕೂಡಲ ಚೆನ್ನಬಸವಣ್ಣ
ಇಂತಪ್ಪ ಶರಣರ ನೆಲೆಯ ನಾನೆತ್ತ ಬಲ್ಲೆನಯ್ಯಾ (೨೮೨)

ಉಟ್ಟರೆ ತೊಟ್ಟರೇನಯ್ಯ ನಟ್ಟುವರಂತೆ
ಕೊಟ್ಟರೆ ಕೊಂಡರೇನಯ್ಯ ವೇಶಿಯರಂತೆ
ಬಿಟ್ಟರೆ ಕಟ್ಟಿದರೇನಯ್ಯ ಬೈರೂಪನಂತೆ
ಇವಾವಂಗವ ಮಾಡಿದರೇನಯ್ಯ
ಮುಟ್ಟಿ ನಮ್ಮ ಶರಣರೊಡನೆ ಒಡವೆರೆಯದಿದ್ದವರು
ಉಟ್ಟಿದ್ದರೇನು ಬಿಟ್ಟಿದ್ದರೇನು ಹೇಳಾ
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ (೨೮೩)

ತನ್ನ ತಾನರಿಯದೆ
ತನ್ನ ತಾ ನೋಡದೆ
ತನ್ನ ತಾ ನುಡಿಯದೆ
ಅನ್ಯರ ಸುದ್ದಿಯ ನುಡಿದಾಡುವ ಕುನ್ನಿಗಳಿಗೆ
ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ
ಪಾದೋದಕವಿಲ್ಲ ಪ್ರಸಾದವಿಲ್ಲ
ಅವನು ಸರ್ವಾಪರಾಧಿ
ಅವನ ಮುಖವ ನೋಡಲಾಗದು
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. (೨೮೪)

ನುಡಿದರೇನಯ್ಯ ನಡೆ ಇಲ್ಲದನ್ನಕ್ಕ
ನಡೆದರೇನಯ್ಯ ನುಡಿ ಇಲ್ಲದನ್ನಕ್ಕ
ಈ ನಡೆ ನುಡಿಯರಿದು ಏಕವಾಗಿ
ತಾವು ಮೃಡಸ್ವರೂಪರಾದ ಶರಣರಡಿಗೆರಗಿ
ನಾನು ಬದುಕಿದೆನಯ್ಯಾ
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. (೨೮೫)

ಪುರಾತರು ಪುರಾತರು ಎಂದು
ಪುರಾಣದೊಳಗಣ ಕಥೆಯನೆ ಕಲಿತುಕೊಂಡು
ಪುರದ ಬೀದಿಯೊಳಗೆ ಹರದರಂತೆ
ಮಾತಿನ ಹಸರವನಿಕ್ಕಿ ಮಾರುವ ಅಣ್ಣಗಳಿರಾ
ನೀವು ಕೇಳಿರೊ
ಅಂದು ಹೋದವರ ಸುದ್ದಿಯ ನುಡಿದರೆ
ಇಂದು ಬಂದರೊ ನಿಮಗೆ
ಅಂದು ಹೋದವರ ಇಂದು ಬಂದವರ
ಒಂದೇ ಎಂದರಿದ ಭಕ್ತರ
ಆಚರಣೆಯ ತೋರಿ ಬದುಕಿಸಯ್ಯಾ
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. (೨೮೬)

ಮನವನರಿದಂಗೆ ಮತದ ಹಂಗೇಕೊ
ನಿತ್ಯವನರಿದಂಗೆ ತೀರ್ಥದ ಹಂಗೇಕೊ
ಪರಮಾರ್ಥವನರಿದಂಗೆ ಪ್ರಸಾದದ ಹಂಗೇಕೊ
ಜ್ಯೋತಿಯನರಿದಂಗೆ ಕತ್ತಲೆಯ ಹಂಗೇಕೊ
ಲೋಕವನರಿದಂಗೆ ವ್ಯಾಕುಲದ ಹಂಗೇಕೊ
ಈ ತೆರನನರಿದಂಗೆ
ಮುಂದಾವ ಭೀತಿಯುಂಟು ಹೇಳಾ
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. (೨೮೭)

ವಂದನೆಗೆ ನಿಲ್ಲಬೇಡ
ನಿಂದೆಗಂಜಿ ಓಡಲಿಬೇಡ
ಹಿಂದು ಮುಂದು ಆಡಲಿಬೇಡ
ಸಂದೇಹಗೊಳಲಿಬೇಡ
ದ್ವಂದ್ವ ಬುದ್ಧಿಯ ಕಳೆದು ನಿಂದಿರೆ
ಬಸವಪ್ರಿಯ ಕೂಡಲ ಚೆನ್ನಬಸವಣ್ಣ. (೨೮೮)

ಸಾವಾಗ ದೇವನೆಂದರೆ
ಸಾವು ಬಿಡುವುದೇ
ಇದಾವ ಮಾತೆಂದು ನುಡಿವಿರಿ
ಎಲೆಯಣ್ಣಗಳಿರಾ
ಬಾಳುವಲ್ಲಿ ಬದುಕುವಲ್ಲಿ
ಗುರು ಲಿಂಗ ಜಂಗಮವನರಿಯದೆ
ಹಾಳುಹರಿಯ ತಿಂದ ಶುನಕನಂತೆ
ಕಾಲ್ಗೆಡೆದು ಓಡಾಡಿ ಏಳಲಾರದೆ ಬಿದ್ದಾಗ
ಶಿವ ಶಿವ ಎಂದರೆ
ಅಲ್ಲಿ ದೇವನಿಪ್ಪನೆಂದು
ಇದ ನೋಡಿ ನಾಚಿ ನಗುತಿರ್ದೆ
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. (೨೮೯)

ಹರಿವ ಜಲಧಿಯಂತೆ ಚರಿಸಿ ಬಹ ಮನವ
ನಿಲ್ಲೆಂದು ನಿಲಿಸುವ ಪುರುಷರುಂಟೆ
ಬಿರುಗಾಳಿ ಬೀಸಿದರೆ ಒಲಿ ಒಲಿದು ಉರಿವ
ಬಲುಗಿಚ್ಚಿನ ಉರಿಯ ನೆಲೆಗೆ ನಿಲಿಸುವರುಂಟೆ
ಮಹಾಬಯಲೊಳಗಣ ಸಂಚವನರಿದು ಅವಗಡಿಸುವರುಂಟೆ
ಇವ ಬಲ್ಲೆನೆಂಬವರೆಲ್ಲ
ಅನ್ನದ ಮದ ಅಹಂಕಾರದ ಮದ ಕುಲಮದ ಛಲಮದ
ಯೌವನಮದ ವಿದ್ಯಾಮದ ತಪದ ಮದ ಆತ್ಮದ ಮದ
ಇಂತೀ ಅಷ್ಟ ಮದವಿಡಿದು ಬಲ್ಲೆವೆಂಬರಲ್ಲದೆ
ದೃಷ್ಟನಷ್ಟವಾವುದೆಂದರಿಯದೆ
ಎಲ್ಲರೂ ಭ್ರಷ್ಟರಾಗಿಹೋದರು
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ
ನಿಮ್ಮ ನೆಲೆಯನರಿಯದ ಕಾರಣ. (೨೯೦)

ಹಾವ ಹಿಡಿವುದ ಹಾವಾಡಿಗ ಬಲ್ಲನಲ್ಲದೆ
ಕಡೆಯಲಿದ್ದ ಜಾವಳಿಗನೆತ್ತ ಬಲ್ಲನು
ನೋವು ಬಂದರೆ ವ್ಯಾಧಿಯಲ್ಲಿ ನರಳುವಾತ ಬಲ್ಲನಲ್ಲದೆ
ಕಡೆಯಲಿಪ್ಪ ದುರುಳನೆತ್ತಬಲ್ಲನು
ದೇವ ನಿಮ್ಮ ಶರಣನು ಬೆರೆದಿಪ್ಪ ಭೇದವ
ನೋವುತ್ತ ಬೇವುತ್ತ ಧಾವತಿಗೊಳುತಿಪ್ಪ
ಗಾವಿಲರೆತ್ತ ಬಲ್ಲರು ಲಿಂಗೈಕ್ಯರನುವ
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. (೨೯೧)

೦

ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ

ಗಂಡ : ಹಡಪದ ಅಪ್ಪಣ್ಣ
ಅಂಕಿತನಾಮ : ಅಪ್ಪಣ್ಣಪ್ರಿಯ ಚೆನ್ನಬಸವಣ್ಣ
ದೊರೆತಿರುವ ವಚನಗಳು : ೧೧೪

ಆಸೆಯುಳ್ಳನ್ನಕ್ಕ ರೋಷ ಬಿಡದು
ಕಾಮವುಳ್ಳನ್ನಕ್ಕ ಕಳವಳ ಬಿಡದು
ಕಾಯಗುಣವುಳ್ಳನ್ನಕ್ಕ ಜೀವನ ಬುದ್ಧಿ ಬಿಡದು
ಭಾವವುಳ್ಳನ್ನಕ್ಕ ಬಯಕೆ ಸವೆಯದು
ನಡೆಯುಳ್ಳನ್ನಕ್ಕ ನುಡಿಗೆಡದು
ಇವೆಲ್ಲವು ಮುಂದಾಗಿದ್ದು ಹಿಂದನರಿದೆನೆಂಬ
ಸಂದೇಹಿಗಳಿರಾ ನೀವು ಕೇಳಿರೋ
ನಮ್ಮ ಶರಣರು ಹಿಂದ ಹೇಗೆ ಅರಿದರೆಂದಡೆ
ಆಸೆಯನಳಿದರು ರೋಷವ ಹಿಂಗಿದರು
ಕಾಮನ ಸುಟ್ಟರು ಕಳವಳವ ಹಿಂಗಿದರು
ಕಾಯಗುಣವಳಿದರು ಜೀವನ ಬುದ್ಧಿಯ ಹಿಂಗಿದರು
ಭಾವವ ಬಯಲು ಮಾಡಿದರು ಬಯಕೆಯ ಸವೆದರು
ಹಿಂದನರಿದು ಮುಂದೆ ಲಿಂಗವೆ ಗೂಡಾದ ಶರಣರ
ಈ ಸಂದೇಹಿಗಳೆತ್ತ ಬಲ್ಲರು
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. (೨೯೨)

ಕಾಮವಿಲ್ಲ ಕ್ರೋಧವಿಲ್ಲ ಲೋಭವಿಲ್ಲ
ಮೋಹವಿಲ್ಲ ಮದವಿಲ್ಲ ಮತ್ಸರವಿಲ್ಲ
ಎಂಬ ಅಣ್ಣಗಳಿರಾ
ನೀವು ಕೇಳಿರೊ ಹೇಳಿಹೆನು
ಕಾಮವಿಲ್ಲದವಂಗೆ ಕಳವಳವುಂಟೆ
ಕ್ರೋಧವಿಲ್ಲದವಂಗೆ ರೋಷವುಂಟೆ
ಲೋಭವಿಲ್ಲದವಂಗೆ ಆಸೆವುಂಟೆ

ಮೋಹವಿಲ್ಲದವಂಗೆ ಪಾಶವುಂಟೆ
ಮದವಿಲ್ಲದವಂಗೆ ತಾಮಸವುಂಟೆ
ಮತ್ಸರವಿಲ್ಲದವನು ಮನದಲ್ಲಿ ಮತ್ತೊಂದ ನೆನೆವನೆ
ಇವು ಇಲ್ಲವೆಂದು ಮನವ ಕದ್ದು ನುಡಿವ
ಅಬದ್ಧರ ಮಾತ ಮೆಚ್ಚುವನೆ
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ. (೨೯೩)

ನೆನೆವುತ್ತಿದೆ ಮನ
ದುರ್ವಾಸನೆಗೆ ಹರಿವುತ್ತಿದೆ ಮನ
ಕೊನೆಗೊಂಬೆಗೆ ಎಳೆವುತ್ತಿದೆ ಮನ
ಕಟ್ಟಿಗೆ ನಿಲ್ಲದು ಮನ
ಬಿಟ್ಟಡೆ ಹೋಗದು ಮನ
ತನ್ನಿಚ್ಛೆಯಲಾಡುವ ಮನವ ಕಟ್ಟಿಗೆ ತಂದು ಗೊತ್ತಿಗೆ ನಿಲಿಸಿ
ಬಚ್ಚ ಬರಿಯ ಬಯಲಿನೊಳಗೆ ಓಲಾಡುವ
ಶರಣರ ಪಾದದಲ್ಲಿ ನಾ ಬೆಚ್ಚಂತಿದ್ದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ. (೨೯೪)

ಮದ ಮತ್ಸರ ಬಿಡದು
ಮನದ ಕನಲು ನಿಲ್ಲದು
ಒಡಲ ಗುಣ ಹಿಂಗದು
ಇವ ಮೂರನು ಬಿಡದೆ
ನಡಸುವನ್ನಕ್ಕ ಘನವ ಕಾಣಬಾರದು
ಘನವ ಕಾಂಬುದಕ್ಕೆ
ಮದ ಮತ್ಸರವನೆ ಬಿಟ್ಟು
ಮನದ ಕನಲನೆ ನಿಲಿಸಿ
ಒಡಲ ಗುಣ ಹಿಂಗಿ
ತಾ ಮೃಡರೂಪಾದಲ್ಲದೆ ಘನವ ಕಾಣಬಾರದೆಂದರು
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ. (೨೯೫)

ಮನವ ಗೆದ್ದೆಹೆನೆಂದು
ತನುವ ಕರಗಿಸಿ ಕಾಯವ ಮರುಗಿಸಿ
ನಿದ್ರೆಯ ಕೆಡಿಸಿ ವಿದ್ಯೆಯ ಕಲಿತೆಹೆನೆಂಬ
ಬುದ್ಧಿಹೀನರಿರಾ ನೀವು ಕೇಳಿರೋ
ನಮ್ಮ ಶರಣರು ಮನವನೆಂತು ಗೆದ್ದಹರೆಂದಡೆ
ಕಾಮ ಕ್ರೋಧವ ನೀಗಿ
ಲೋಭ ಮೋಹ ಮದ ಮತ್ಸರವ ಭೇದಿಸಿ
ಆಸೆ ರೋಷವಳಿದು ಜಗದ ಪಾಶವ ಬಿಟ್ಟು
ಆ ಮರುಗಿಸುವ ಕಾಯವನೆ ಪ್ರಸಾದಕಾಯವ ಮಾಡಿ ಸಲಹಿದರು
ಕೆಡಿಸುವ ನಿದ್ರೆಯನೆ ಯೋಗಸಮಾಧಿಯ ಮಾಡಿ
ಸುಖವನೇಡಿಸಿ ಜಗವನೆ ಗೆದ್ದ ಶರಣರ ಬುದ್ಧಿಹೀನರೆತ್ತಬಲ್ಲರೊ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. (೨೯೬)

೦

ಹಾವಿನಹಾಳ ಕಲ್ಲಯ್ಯ

ಕಸುಬು : ಅಕ್ಕಸಾಲಿಗ
ಅಂಕಿತನಾಮ : ಮಹಾಲಿಂಗ ಕಲ್ಲೇಶ್ವರ
ದೊರೆತಿರುವ ವಚನಗಳು : ೧೦೫

ಜಾತಿಯಲ್ಲಿ ಅಧಿಕವೆಂದು ನುಡಿವರು ವಿಪ್ರ ಜನರು
ಶ್ವಪಚ ಮಚ್ಚಿಗ ಬೋಯ ಕುಲಜರೆ ದ್ವಿಜರು
ಅಗಸ ಕಮ್ಮಾರ ನಾವಿದ ಕುಲಜರೆ ದ್ವಿಜರು
ಸರ್ವವೇದೇಷು ಶಾಸ್ತ್ರೇಷು ಸರ್ವಯಜ್ಞೇಷು ದೀಕ್ಷಿತಃ
ಮಹಾಪಾತಕಕೋಟಿಘ್ನಃ ಶ್ವಪಚೋ ಲಿಂಗಪೂಜಕಃ
ತತ್ಸಂಭಾಷಣತೋ ಮುಕ್ತಿಃ ಗಣಮುಖ್ಯಂ ಸುಖಂ ಭವೇತ್
ಇಂತೆಂದುದಾಗಿ
ಲಿಂಗಭಕ್ತನೆ ಕುಲಜನು
ಮಹಾಲಿಂಗ ಕಲ್ಲೇಶ್ವರನನಾರಾಧಿಸಿ ಪಡೆದರೆಲವೊ
ಮರೆದಡೆ ಹುಳುಗೊಂಡದಲ್ಲಿಪ್ಪಿರೆಲವೊ. (೨೯೭)

ತನ್ನ ಗುಣವ ಹೊಗಳಬೇಡ
ಇದರ ಗುಣವ ಹಳಿಯಬೇಡ
ಕೆಮ್ಮನೊಬ್ಬರ ನುಡಿಯಬೇಡ
ನುಡಿದು ನುಂಪಿತನಾಗಬೇಡ
ಇದಿರ ಮುನಿಯಿಸಬೇಡ
ತಾ ಮುನಿಯಬೇಡ
ತಾನು ಬದುಕವೈಸುದಿನ
ಸಮತೆ ಸಮಾಧಾನ ತುಂಬಿ ತುಳುಕದಿರಬೇಕು
ಮಹಾಲಿಂಗ ಕಲ್ಲೇಶ್ವರದೇವರ ನಿಚ್ಚಳ ನಿಜವನರಿದಡೆ
ಬಚ್ಚಬರಿಯ ಸಹಜ ಸಮಾಧಾನವಳವಟ್ಟಿರಬೇಕು. (೨೯೮)

ಬ್ರಾಹ್ಮಣ ಮೊದಲಾಗಿ ಶ್ವಪಚ ಕಡೆಯಾಗಿ
ಎಲ್ಲರಿಗೆಯೂ ಜನನವೊಂದೆ
ಆಹಾರ ನಿದ್ರೆ ಭಯ ಮೈಥುನವೊಂದೆ
ಪುಣ್ಯ ಪಾಪವೊಂದೆ ಸ್ವರ್ಗವೊಂದೆ
ಬೇರೆಂಬ ಭಂಗಿತರು ನೀವು ಕೇಳಿರೆ
ಅರಿವೇ ಸತ್ಕುಲ ಮರವೇ ದುಃಕುಲ
ಅರಿವುವಿಡಿದು ಮನಪಕ್ಷ
ಆಗಮವಿಡಿದು ಆಚಾರ
ಆಚಾರವಿಡಿದು ಸಮಯ
ಅರಿದಡೆ ಶರಣ
ಮರೆದಡೆ ಮಾನವ
ವಿಚಾರಿಸಿದಡೆ ಸಚರಾಚರವೆಲ್ಲವೂ ಪಂಚಭೂತಮಯ
ಚಂದಿರಾದಿಗಳೊಳಗೊಂದು ಮನುಷ್ಯಜನ್ಮ
ಸಪ್ತಧಾತು ಸಮಪಿಂಡಂ ಸಮಯೋನಿ ಸಮುದ್ಭವಂ
ಆತ್ಮಾ ಜೀವನಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ
ಎಂದುದಾಗಿ ಇದು ಕಾರಣ ಮಹಾಲಿಂಗ ಕಲ್ಲೇಶ್ವರಾ
ನಿಮ್ಮ ಶರಣರು ಅಜಾತಚರಿತ್ರರಾಗಿ
ಆವ ಜಾತಿಯನೂ ಹೊದ್ದರು. (೨೯)

೦

ಹುಂಜಿನ ಕಾಳಗದ ದಾಸಯ್ಯ

ಅಂಕಿತನಾಮ : ಚಂದ್ರಚೂಡೇಶ್ವರಲಿಂಗ
ದೊರೆತಿರುವ ವಚನಗಳು : ೧

ಹುಂಜ ಸೋತಡೆ ಹಿಡಿವೆ
ವ್ರತ ಹೋದವರ ನೋಡೆನು
ಚಂದ್ರಚೂಡೇಶ್ವರಲಿಂಗವೆ. (೩೦೦)

೦

ಹೆಂಡದ ಮಾರಯ್ಯ

ಅಂಕಿತನಾಮ : ಧರ್ಮೇಶ್ವರಲಿಂಗ
ದೊರೆತಿರುವ ವಚನಗಳು : ೧೨

ಶಾಸ್ತ್ರ ಮದ ಸಂಪದ ಮದ
ಉಭಯಕೂಡಿಕೊಂಡಾತ್ಮಮದವ
ಅರಿದು ಎಲ್ಲರಿಗೆ ಹೇಳಿದೆನೆಂಬ
ಗೆಲ್ಲ ಸೋಲದ ಮದ
ಇಂತೀ ಎಲ್ಲಾ ಮದವ ಸೇವಿಸುತ್ತ
ಅರಿಯದ ಮದವನೊಂದು ನುಡಿದಡೆ
ಬಿರುನುಡಿಯೆಂದೆಂಬರು
ಅರಿಯದವ ಇಂತಿವ ಅರಿಯದಂತೆ
ಸಂಚದಲ್ಲಿ ಸಂಚದಂತಿರಬೇಕು
ಧರ್ಮೇಶ್ವರಲಿಂಗ ಹೀಂಗಲ್ಲದೆ ಅರಿಯಬಾರದು. (೩೦೧)

O

¸À

ಪದಕೋಶ

ಅಂಗಸೋಂಕು=ಲಿಂಗವನ್ನು ಧರಿಸಿರುವ ಎದೆಯ ಭಾಗ
ಅಂದಳ=ಪಲ್ಲಕ್ಕಿ, ಡೋಲಿ, ಮೇನೆ
ಅಂಬಿಗ=ದೋಣಿಯನ್ನು ನಡೆಸುವವನು
ಅಚ್ಚುಗ=ಕಳವಳ, ಶ್ರಮ, ಅಪಾಯ, ತೀವ್ರವಾದ ವ್ಯಥೆ
ಅಜಾತ=ಶಿವ, ಇನ್ನೂ ಹುಟ್ಟದಿರುವ
ಅಪ್ಪು=ನೀರು, ತಬ್ಬಿಕೊಳ್ಳು
ಅರತು=ಬತ್ತಿಹೋಗಿ, ನಾಶವಾಗಿ
ಅರುಹಿರಿಯರು=ದೊಡ್ಡವರು, ಜ್ಞಾನಿಗಳು
ಅವಸರದವನು=ರಾಜನಿಗೆ ಅಥವಾ ಒಡೆಯನಿಗೆ ತುರ್ತಾಗಿ ಒದಗಿಬಂದ ಕಾರ್ಯವನ್ನು ಮಾಡಲು ಕೂಡಲೇ ಮುಂದಾಗುವವನು
ಅಶನ=ಆಹಾರ
ಅಷ್ಟಾಷಷ್ಠಿ=ಅರವತ್ತೆಂಟು
ಅಸಮಾಕ್ಷ=ಶಿವ
ಅಸಿ=ಕತ್ತಿ, ಸೈನಿಕ ವೃತ್ತಿ
ಅಹಿ=ಹಾವು
ಅಳುಪು=ಬಯಸು, ಆಸೆಪಡು
ಅಳೆ=ಮಜ್ಜಿಗೆ, ಅಳತೆ ಮಾಡು
ಆಗುಚೇಗು=ಲಾಭ-ನಷ್ಟ, ನೋವು-ನಲಿವು, ಆಗು-ಹೋಗು
ಆತ್ಮವಿತ್ತು=ಆತ್ಮಜ್ಞಾನಿ
ಆವು=ಹಸು, ಆಕಳು
ಇಂಬಿಡು=ಆಶ್ರಯ ಕೊಡು
ಇಟ್ಟಂಗಿ=ಇಟ್ಟಿಗೆ
ಇಷ್ಟಲಿಂಗ=ದೇಹದ ಮೇಲೆ ತೊಡುವುದಕ್ಕಾಗಿ ದೀಕ್ಷೆಯ ಕಾಲದಲ್ಲಿ ಭಕ್ತನಿಗೆ ಗುರು ನೀಡುವ ಲಿಂಗ
ಈಶಣತ್ರಯ=ಹೆಂಡತಿ, ಮಕ್ಕಳು, ಹಣ ಎಂಬ ಈ ಮೂರರ ಮೇಲಣ ಮೋಹ
ಉಂಕೆ=ನೆಯ್ಗೆಯ ಮಗ್ಗದಲ್ಲಿ ಉದ್ದುದ್ದವಾಗಿ ಹಾಸಿರುವ ನೂಲಿನ ಹಾಸು
ಉಗ್ಘಡಿಸು=ಗಟ್ಟಿಯಾಗಿ ಕೂಗಿ ಹೇಳು
ಉದ್ದಂಡ=ದರ್ಪ, ಗರ್ವ, ಅಹಂಕಾರ
ಉಪಾಧಿ=ತೋರಿಕೆ, ವೇಷ, ಯುಕ್ತಿ, ಮೋಸ

ಎಕ್ಕಲಕೊಂಡ=ನರಕದ ಒಂದು ಅಗ್ನಿಕುಂಡ

ಎಳಕು=ಚಿಗುರು

ಒಚ್ಚತ=ಚೆನ್ನಾಗಿ, ಹೆಚ್ಚಾಗಿ, ಅತಿಶಯವಾಗಿ, ಎಡೆಬಿಡದೆ

ಓಗರ=ಅನ್ನ, ಆಹಾರ, ಬೋನ

ಓಸರಿಸು=ಹಿಂಜರಿ, ಹಿಮ್ಮೆಟ್ಟು, ಉದಾಸೀನ ಮಾಡು

ಕಂಡಿಕೆ=ಲಾಳಿಯಲ್ಲಿ ಸೇರಿಸುವ ನೂಲಿನ ಉಂಡೆ

ಕಂಥೆ=ಜೋಳಿಗೆ, ಸಂನ್ಯಾಸಿಗಳು ಮತ್ತು ಭಿಕ್ಷುಕರು ಮೈಮೇಲೆ ಹೊದೆಯುವ ಬಟ್ಟೆ

ಕಕ್ಕುಲತೆ=ಪ್ರೀತಿ, ಮೋಹ, ಮಮಕಾರ, ಚಿಂತೆ, ಕಳವಳ, ಸಂಕಟ

ಕಣಕ=ನೀರಿನಲ್ಲಿ ಕಲಸಿ ಮಿದ್ದಿರುವ ಅಕ್ಕಿ/ರಾಗಿ/ಜೋಳದ ಹಿಟ್ಟು

ಕದಿರು=ಮರದಿಂದ ಅಥವಾ ಲೋಹದಿಂದ ಮಾಡಿರುವ ನೂಲು ತೆಗೆಯುವ ಕಡ್ಡಿಯಾಕಾರದ ಉಪಕರಣ

ಕನ್ನಡಿ ಕಾಯಕ=ಕ್ಷೌರ ಮಾಡುವ ಕೆಲಸ

ಕಪಿಲೆ=ಕಂದು ಬಣ್ಣದ ಹಸು

ಕಪ್ಪಡ=ಅರಿವೆ, ಬಟ್ಟೆ, ವಸ್ತ್ರ

ಕರಟ=ಕಾಗೆ, ಕಪ್ಪೆ

ಕರ್ಮಕಾಂಡಿ=ಯಜ್ಞ ಯಾಗಾದಿಗಳ ಆಚರಣೆಗಳನ್ನು ಮಾಡುವವನು

ಕಳತ್ರ=ಹೆಂಡತಿ, ಮಡದಿ

ಕಳವೆ=ಬತ್ತ, ನೆಲ್ಲು

ಕಾಕೂಳು=ಹಳಸಿದ ಅನ್ನ

ಕಾಬರು=ಕಾಣುವರು, ನೋಡುವರು

ಕಾಯಕ=ಕಸುಬು, ದುಡಿಮೆ

ಕಾರ್ಮಿಕ ಮಲ=ಜೀವನಿಗೆ ಅಂಟಿಕೊಳ್ಳುವ ಮೂರು ಬಗೆಯ ಮಲಗಳಲ್ಲಿ ಒಂದು ಬಗೆಯದು.

ಕಾಷಾಂಬರ=ಕಾವಿ ಬಣ್ಣದ ಬಟ್ಟೆ, ಕೆಂಪು ಬಣ್ಣದ ವಸ್ತ್ರ

ಕಾಸೆ=ಲಂಗೋಟಿ, ಕಚ್ಚೆಪಡೆ, ಕೌಪೀನ

ಕಾಳಿಕೆ=ಕಪ್ಪು, ಕತ್ತಲೆ, ಕುಂದು, ದೋಷ

ಕಿಸುಕುಳ=ಕೊಳೆ, ಹೊಲಸು, ಹೇಸಿಗೆ

ಕಿಸುಕುಳನು=ನೀಚ ವ್ಯಕ್ತಿ, ಕೆಟ್ಟ ಮನುಷ್ಯ

ಕುಂಭ=ಕೊಡ, ಗಡಿಗೆ, ಕಲಶ

ಕುಂಭೀಪಾತಕ=ಭಯಂಕರವಾದ ದಂಡನೆಯನ್ನು ನೀಡುವ ಒಂದು ನರಕದ ಹೆಸರು

ಕುಕ್ಕುರ=ನಾಯಿ

ಕುತ್ತ=ತಪ್ಪು, ಕೊರತೆ, ರೋಗ, ತೊಂದರೆ, ಕೇಡು
ಕೂಪರು=ಪ್ರೀತಿಸುವವರು, ಕಾದಲಿಗರು
ಕೂರಲಗು=ಹರಿತವಾದ ಕತ್ತಿ, ಚೂಪಾದ ಬಾಣ
ಕೆಯ್=ಹೊಲ ಗದ್ದೆ ತೋಟ ಮುಂತಾದ ಸಾಗುವಳಿ ಭೂಮಿ
ಕೈದು=ಆಯುಧ, ಶಸ್ತ್ರ
ಕೊರಚು=ಕಿರಿಚು, ಚೀರು, ಚುಚ್ಚು ಮಾತಿನಿಂದ ಅಣಕಿಸು
ಕೊಲ್ಲಿ=ತೊಂಡು, ಪೋಲಿ
ಕೌಪೀನ=ಲಂಗೋಟಿ, ಕಚ್ಚೆಪಡೆ
ಕ್ರೀ=ಕ್ರಿಯೆ, ಕಾರ್ಯ, ಕೆಲಸ
ಖಗ=ಪಕ್ಷಿ, ಹಕ್ಕಿ
ಗಡಣ=ಗುಂಪು, ಸಮೂಹ, ರಾಶಿ
ಗಸಣಿ=ತೊಂದರೆ, ಕೋಟಲೆ, ಹಿಂಸೆ, ಕಾಟ
ಗಿಳಿಲು=ಸಣ್ಣ ಪಾತ್ರೆ, ಗಿಂಡಿ, ಮಿಳ್ಳೆ
ಗೊತ್ತು=ದನಗಳನ್ನು ಕಟ್ಟುವ ಗೊಂತು, ನಿಶ್ಚಿತವಾದ ಒಂದು ಜಾಗ, ನೆಲೆ
ಗೊಂಟು=ಮೂಲೆ, ದಿಕ್ಕು
ಗ್ರಾಸ=ತುತ್ತು, ಕವಳ, ಆಹಾರ, ಊಟ
ಘಟ=ಮಣ್ಣಿನ ದೊಡ್ಡ ಪಾತ್ರೆ, ಮಡಕೆ, ಕೊಡ, ದೇಹ, ಶರೀರ
ಚೊಕ್ಕೆಹ=ಚಾತುರ್ಯ, ಯುಕ್ತಿ, ಬಿನ್ನಾಣ
ಚೌಷಷ್ಠಿ=ಅರವತ್ತ ನಾಲ್ಕು
ಜಂಗುಳಿ=ಗುಂಪು, ಸಮೂಹ, ರಾಶಿ
ಜಂಘೆ=ಮೊಣಕಾಲ ಕೆಳ ಭಾಗ, ಕೆಳದೊಡೆ
ಜಂಬುಕ=ನರಿ
ಜಾರ=ಹಾದರ ಮಾಡುವವನು
ಜಾರೆ=ಹಾದರ ಮಾಡುವವಳು
ಜಾವಳಿಗ=ಸಾಮಾನ್ಯ ವ್ಯಕ್ತಿ, ಸಾಧಾರಣ ಮನುಷ್ಯ
ಜ್ಞಾತೃ=ಅರಿತುಕೊಳ್ಳುವವನು, ತಿಳಿಯುವವನು
ಜ್ಞೇಯ=ತಿಳಿಯಬೇಕಾದ ವಿಷಯ ಅಥವಾ ವಸ್ತು
ಡಂಬ=ಮೋಸ, ವಂಚನೆ
ಡಂಭಕ=ಮೋಸಗಾರ, ವಂಚಕ, ಕಪಟಿ
ಡೋಹರ=ಚಂಡಾಲ ಜಾತಿಯವನು
ಢಾಳಕ=ತೋರಿಕೆಯ ನಡೆನುಡಿಯುಳ್ಳವನು, ಕಪಟಿ

ತಂಡುಲ=ಅಕ್ಕಿ
ತಕ್ರ=ಮಜ್ಜಿಗೆ
ತಗಹು=ಆತಂಕ, ಅಡ್ಡಿ, ತಡೆ, ನಿಲ್ಲಿಸು
ತಪ್ಪಲು=ಬಯಲು
ತರಿಸಲ್=ನಿಶ್ಚಯಿಸು, ದೃಢ ಸಂಕಲ್ಪಮಾಡು
ತಿತ್ತಿ=ನೀರು, ಎಣ್ಣೆ ಮುಂತಾದ ದ್ರವ ಪದಾರ್ಥಗಳನ್ನು ತುಂಬಿಡುವ ಚರ್ಮದ ಚೀಲ
ತೂಬರ=ತುಂಬರದ ಗಿಡ
ತೊತ್ತು=ದಾಸ, ದಾಸಿ, ಸೇವಕ, ಸೇವಕಿ
ದಗ್ಧ=ಸುಟ್ಟ, ಬೆಂದ, ದಹಿಸಿದ, ಬಾಡಿದ, ಒಣಗಿದ
ದಾಸೋಹ=ಕಿಂಕರಭಾವದಿಂದ ಮಾಡುವ ಗುರು ಲಿಂಗ ಜಂಗಮ ಸೇವೆ
ದಿಬ್ಯ=ಆಣೆ ಪ್ರಮಾಣ, ಅಪರಾಧವನ್ನು ಹೊತ್ತ ವ್ಯಕ್ತಿಯು ತಾನು ನಿರಪರಾಧಿ ಎಂಬುದನ್ನು ಸಾಬೀತು ಪಡಿಸುವಾಗ ಇಕ್ಕುವ ಆಣೆ ಮತ್ತು ಮಾಡುವ ಪ್ರಮಾಣ.
ದೀಪ್ತಿ=ಪ್ರಕಾಶ, ಬೆಳಕು, ಹೊಳಪು, ಕಾಂತಿ
ದೇಹಾರ=ಊಟ, ಭೋಜನ, ಎಡೆ, ನೈವೇದ್ಯ
ದೋಹಳ=ಇಚ್ಛೆ, ಬಯಕೆ, ಅಪೇಕ್ಷೆ
ಧಾವತಿ=ದಣಿವು, ಬಳಲಿಕೆ, ಆಯಾಸ
ನಟ್ಟುವ=ನಟ, ನರ್ತಕ, ನಾಟ್ಯವನ್ನು ಕಲಿಸುವ ಗುರು
ನಿಃಕಂಪನ=ಕಂಪನವಿಲ್ಲದಿರುವುದು
ನಿಃಕರಿಸಿ=ತಿರಸ್ಕರಿಸು, ನಿರಾಕರಿಸು
ನಿಃಕಳಂಕ=ಕಳಂಕವಿಲ್ಲದಿರುವುದು
ನಿಕ್ಷೇಪ=ಹೂಳಿಟ್ಟ ಸಂಪತ್ತು, ಗುಪ್ತ ಧನ, ಒತ್ತೆಯಿಡುವುದು
ನಿಚ್ಚಣಿಕೆ=ಏಣಿ
ನಿರಂಗ=ಮುಕ್ತಿ, ಶರೀರ ಧರ್ಮವನ್ನು ಮೀರಿದವನು
ನಿರಾಭಾರಿ=ವಿರಾಗಿ, ವಿರಕ್ತ, ಸಂನ್ಯಾಸಿ
ನಿರುತ=ಸತ್ಯ, ದಿಟ, ನಿಶ್ಚಯ
ನಿಹಿತ=ಇರಿಸಿದ, ಇಟ್ಟ, ತುಂಬಿದ, ಸಂಗ್ರಹವಾದ
ನೆಲ್ಲು=ಬತ್ತ
ಪಗುಡಿ=ಕುಚೋದ್ಯ, ಹಾಸ್ಯ, ಲೇವಡಿ
ಪಟ=ಚಿತ್ರವನ್ನು ಬರೆಯಲು ಸಿದ್ಧಪಡಿಸಿದ ಬಟ್ಟೆ ಅಥವಾ ಹಲಗೆ
ಪಡಿಹಾರಿಕೆ=ಬಾಗಿಲು ಕಾಯುವಿಕೆ, ದ್ವಾರಪಾಲಕ ವೃತ್ತಿ

ಪನ್ನಗಧರ=ಕೊರಳಲ್ಲಿ ಹಾವನ್ನು ಧರಿಸಿರುವ ಶಿವ
ಪಸರ=ಹರಡುವಿಕೆ, ವ್ಯಾಪ್ತಿ, ಗುಂಪು, ಅಂಗಡಿ
ಪಾಕುಳ=ಅಮೇಧ್ಯ, ಮಲ
ಪಾರದ್ವಾರ=ಪರಸ್ತ್ರೀ ಗಮನ, ಪರಪುರುಷ ಗಮನ, ವ್ಯಭಿಚಾರ, ಜಾರತನ
ಪಾಷಾಣ=ಕಲ್ಲು, ಶಿಲೆ, ಮಣಿ, ರತ್ನ, ಒಂದು ಬಗೆಯ ವಿಷ
ಪಿಶಿತ=ಮಾಂಸ, ಬಾಡು, ಅಡಗು
ಪಿಸುಣ=ಚಾಡಿಕೋರ, ನೀಚ
ಬಚ್ಚಣಿ=ಕಪಟ ಪ್ರೇಮಿ, ಸೋಗಿನ ನಡೆನುಡಿಯುಳ್ಳವನು
ಬಟ್ಟೆ=ಮಾರ್ಗ, ಹಾದಿ, ವಸ್ತ್ರ, ಅರಿವೆ
ಬಣಬೆ=ಹುಲ್ಲಿನ ಮೆದೆ, ಗುಂಪು, ರಾಶಿ
ಬಾಚಿ=ಮರವನ್ನು ಕೆತ್ತಲು ಬಡಗಿಗಳು ಬಳಸುವ ಅಗಲವಾದ ಬಾಯಿಯ ಕಬ್ಬಿಣದ ಉಪಕರಣ
ಬಾತೆ=ಉಪಯೋಗ, ಪ್ರಯೋಜನ, ಬದುಕು, ಬಾಳ್ವೆ
ಬೀತಕುಂಭ=ಒಡೆದ ಮಡಕೆ
ಬೀಸರ=ಕೇಡು, ನಾಶ, ಹಾಳು, ವ್ಯರ್ಥವಾದುದು
ಬೆಳ್ಳ=ಏನೂ ಅರಿಯದವನು, ಮುಗ್ಧ, ಬೆಪ್ಪ, ದಡ್ಡ
ಬೈರೂಪ=ಬಹುರೂಪ, ಸೋಗು ಹಾಕುವವನು, ವೇಷಧಾರಿ
ಬೊಂತೆ=ಕೌದಿ
ಬೋಸರಿಗ=ಮೋಸಗಾರ, ವಂಚಕ
ಬೋಸರಿಸು=ವಂಚಿಸು, ಮೋಸಗೊಳಿಸು
ಬ್ರಹ್ಮೇತಿಕಾರ=ಬ್ರಾಹ್ಮಣನನ್ನು ಕೊಂದವನು
ಭರಿತಾರ್ಪಣ=ಪರಿಪೂರ್ಣವಾದ ಸಮರ್ಪಣೆ, ಎಲ್ಲವನ್ನೂ ದೇವರಲ್ಲಿ ಅರ್ಪಿಸುವುದು
ಭವಭಾರಿ=ಜನ್ಮ ಜನ್ಮಾಂತರಗಳಲ್ಲಿ ಸುತ್ತುವವ
ಭವಿ=ವೀರಶೈವ ದೀಕ್ಷೆಯನ್ನು ಪಡೆಯದವನು
ಭುಂಜಕ=ತಿನ್ನುವವನು, ಉಣ್ಣುವವನು
ಮಣಿಹ=ಮಾಡಲೇಬೇಕಾದ ಕೆಲಸ, ಕಾರ್ಯ, ಉದ್ಯೋಗ
ಮತ್ತತ್ವ=ಸೊಕ್ಕು, ಉನ್ಮತ್ತತೆ
ಮಥನ=ಕಡೆಯುವಿಕೆ, ತಿಕ್ಕಾಟ, ಘರ್ಷಣೆ
ಮರ್ಕಟ=ಕೋತಿ, ಮಂಗ, ಕಪಿ
ಮರ್ತ್ಯ=ಭೂಲೋಕ
ಮಲತ್ರಯ=ಆಣವ, ಮಾಯಾ, ಕಾರ್ಮಿಕ–ಎನ್ನುವ ಮೂರು ಬಗೆಯ ಮಲ.
ಮಸಿ=ಕಪ್ಪು, ಇದ್ದಿಲು, ಬರೆಯಲು ಬಳಸುವ ಕಪ್ಪು/ನೀಲಿ ಬಣ್ಣದ ದ್ರವ

ಮಾಘ=ಚಳಿಗಾಲ
ಮಾದಾರ=ಮಾದಿಗರ ಜಾತಿಯವನು
ಮಾಯಾ ಮಲ=ಜೀವನಿಗೆ ಅಂಟಿಕೊಂಡಿರುವ ಮೂರು ಮಲಗಳಲ್ಲಿ ಒಂದು ಬಗೆಯದು
ಮಿಟ್ಟೆ=ಮಣ್ಣಿನ ಹೆಂಟೆ, ಮಣ್ಣಿನ ಮುದ್ದೆ
ಮುಸುಕುರ್ಮಿ=ಇತರರಿಗೆ ತಿಳಿಯದಂತೆ ಜನರಿಗೆ ಮೋಸಮಾಡುವವನು, ಯಾರಿಗೂ ಗೊತ್ತಾಗದಂತೆ ಕೇಡನ್ನು ಬಗೆಯುವವನು
ಮೃಡ=ಶಿವ
ಮೃತ್ತಿಕೆ=ಮಣ್ಣು
ಮೋಳಿಗೆ=ಸೌದೆಯ ಹೊರೆ, ಕಟ್ಟಿಗೆಯ ತುಂಡುಗಳು
ಯಜ್ಞೋಪವೀತ=ಜನಿವಾರ
ರೌರವ=ಭಯಂಕರವಾದ, ಭೀಕರವಾದ, ಒಂದು ನರಕದ ಹೆಸರು
ಲಂದಣಗಾರ=ಅಡುಗೆ ಕೆಲಸ ಮಾಡುವವನು, ಬಾಣಸಿಗ
ಲಚ್ಚಣ=ಗುರುತು, ಚಿಹ್ನೆ
ಲದ್ದೆ=ಹೊರೆ, ಹೇರು, ಭಾರ
ಲಾಂಛನ=ಗುರುತು, ಚಿಹ್ನೆ
ಲೊಟ್ಟೆ=ಸುಳ್ಳು, ಸಟೆ, ಹುರುಳಿಲ್ಲದಿರುವುದು
ವಕ್ತ್ರ=ಮುಖ, ವದನ
ವರ್ಮ=ರಹಸ್ಯ, ಒಳಾರ್ಥ, ಗೂಢಾರ್ಥ
ವಾಗದ್ವೈತ=ಮಾತಿನಲ್ಲಿ ಮಾತ್ರ ಇರುವ ಅದ್ವೈತ
ವಾಯ=ಮೋಸ, ಕಪಟ, ಭ್ರಮೆ, ಭ್ರಾಂತಿ
ವಿತ್ತು=ತಿಳಿದಿರುವುದು, ಅರಿತಿರುವುದು
ವಿರತ=ವಿರಕ್ತಿಯನ್ನು ಹೊಂದಿದ, ವಿರಾಗಿ
ವಿಹಂಗ=ಹಕ್ಕಿ
ವೆಗ್ಗಳ=ಹಿರಿಮೆ, ಅಗ್ಗಳಿಕೆ
ವೇದವಿತ್ತು=ವೇದವನ್ನು ಬಲ್ಲವನು
ವೈಶಿಕ=ಬೆಡಗು, ಬಿನ್ನಾಣ, ಮೋಸ
ಶಕಟ=ಬಂಡಿ, ರಥ, ಗಾಡಿ
ಶಬ್ದವಿತ್ತು=ಶಬ್ದ ಪಾಂಡಿತ್ಯವನ್ನು ಪಡೆದವನು
ಶಾಸ್ತ್ರವಿತ್ತು=ಶಾಸ್ತ್ರವನ್ನು ಅರಿತವನು
ಶುನಕ=ನಾಯಿ, ಸೊಣಗ
ಶ್ವಾನ=ನಾಯಿ

ಷಟ್ ಸ್ಥಲ=ಅಧ್ಯಾತ್ಮ ಸಾಧಕನು ಏರಬೇಕಾದ ಭಕ್ತ/ಮಹೇಶ/ಪ್ರಸಾದಿ/ ಪ್ರಾಣಲಿಂಗಿ/ಶರಣ/ಐಕ್ಯ ಎಂಬ ಮೋಕ್ಷ ಸಾಧನೆಯ ಆರು ನೆಲೆಗಳು

ಷೋಡಶೋಪಚಾರ=ದೇವತೆಗಳನ್ನು ಮತ್ತು ಪೂಜ್ಯರನ್ನು ಉಪಚರಿಸುವ ಹದಿನಾರು ಬಗೆಯ ಆಚರಣೆಗಳು

ಸಂಚ=ರಹಸ್ಯ, ಕೂಟ, ಗುಂಪು

ಸಗ್ಗಳೆ=ನೀರನ್ನು ತುಂಬಿಡಲು ಬಳಸುವ ಚರ್ಮದ ಚೀಲ

ಸಠಗ=ಸುಳ್ಳು ಹೇಳುವವನು, ಕಪಟಿ, ವಂಚಕ

ಸದೆ=ಕಸ, ಕಳೆ, ಸೆತ್ತೆ

ಸಮಯ=ಆಚಾರ, ಸಂಪ್ರದಾಯ, ಮತ, ಸಿದ್ಧಾಂತ, ಧರ್ಮ

ಸರಿಗೆ=ಚಿನ್ನ ಬೆಳ್ಳಿ ಮುಂತಾದ ಲೋಹಗಳಿಂದ ಮಾಡಿದ ತೆಳುವಾದ ತಂತಿ

ಸಿದ್ದಲಿಕೆ=ತುಪ್ಪ ಮೊದಲಾದ ದ್ರವ ಪದಾರ್ಥಗಳನ್ನು ತುಂಬುವ ಚರ್ಮದ ಚೀಲ

ಸುನಿ=ಹೆಣ್ಣು ನಾಯಿ

ಸುರಭಿ=ಹಸು, ಗೋವು, ಕಾಮಧೇನು

ಸುರೆ=ಹೆಂಡ, ಮದ್ಯ

ಸುಷುಪ್ತಿ=ಗಾಢ ನಿದ್ರೆ

ಸೂಳ್ನುಡಿ=ಸರದಿಯ ಪ್ರಕಾರ ಆಡಿದ ಮಾತು

ಸೌರಂಭ=ಸಂಭ್ರಮ, ಸಡಗರ

ಸೌರಾಷ್ಟ್ರ=ಗುಜರಾತ್ ರಾಜ್ಯ

ಸ್ಥಲ=ಭಕ್ತನ ಸಾಧನೆಯ ಮುಖ್ಯ ಹಂತ, ಜಾಗ, ಸ್ಥಳ

ಸ್ಥಾವರಲಿಂಗ=ದೇವಸ್ಥಾನದಲ್ಲಿ ಪೂಜೆಗಾಗಿ ಪ್ರತಿಷ್ಠಿತವಾದ ಶಿವಲಿಂಗ

ಸ್ವಾನುಭಾವ=ಸ್ವಪ್ರಯತ್ನದಿಂದ ಗಳಿಸಿಕೊಂಡ ಅರಿವು

ಹರದ=ವ್ಯಾಪಾರಿ

ಹಲ್ಲಣ=ಜೀನು, ಕುದುರೆ ಮೇಲೆ ಸವಾರಿಗಾಗಿ ಹಾಕುವ ಉಪಕರಣ

ಹಸರ=ಅಂಗಡಿ, ಪ್ರಸಾರ

ಹುಗತೆ=ಪ್ರವೇಶ

ಹುಗು=ಪ್ರವೇಶಿಸು

ಹುದುಗು=ಅಡಗು, ಗೌಪ್ಯವಾಗಿರು

ಹುಲ್ಲೆ=ಜಿಂಕೆ

ಹೂಣು=ಬಲವಾಗಿ ನಾಟು

ಹೊಡವಡು=ಸಾಷ್ಟಾಂಗ ನಮಸ್ಕಾರ ಮಾಡು

ಹೊಲಬು=ಮಾರ್ಗ, ದಾರಿ, ಆಶ್ರಯ

ಹೊಳ್ಳು=ಜೊಳ್ಳು, ಪೊಳ್ಳು

೦

ವಚನಗಳ ಓದಿಗೆ ನೆರವಾದ ಪುಸ್ತಕಗಳು

೧) **ಎಂ.ಎಂ. ಕಲಬುರ್ಗಿ**
ಪ್ರಧಾನ ಸಂಪಾದಕರು
ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿಯ ಮಹಾ ಸಂಪುಟಗಳು
ಬಸವಯುಗದ ವಚನ ಮಹಾ ಸಂಪುಟ: ಒಂದು
ಬಸವೋತ್ತರಯುಗದ ವಚನ ಮಹಾ ಸಂಪುಟ: ಎರಡು
ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ತೃತೀಯ ಆವೃತ್ತಿ (ಬೈಬಲ್ ಮುದ್ರಣ ಮಾದರಿ). ೨೦೧೬

೨) **ಬಾ.ರಂ. ಸುಂಠನಕರ್** (ಮೂಲ)
ಚಂದ್ರಕಾಂತ ಪೋಕಳೆ (ಕನ್ನಡಕ್ಕೆ):
ಸಂತ ಚಳುವಳಿ
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು. ೨೦೧೯

೩) **ಜಿ.ಎಸ್.ಶಿವರುದ್ರಪ್ಪ**
ಸಮಗ್ರ ಗದ್ಯ–೧
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು. ೨೦೦೯–ನಾಲ್ಕನೆಯ ಮುದ್ರಣ

೪) **ಎಂ. ಚಿದಾನಂದಮೂರ್ತಿ**
ವಚನ ಸಾಹಿತ್ಯ
ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು. ೧೯೭೫

೫) **ಕೆ.ವಿ. ನಾರಾಯಣ**
ತೊಂಡು ಮೇವು–ಕಂತೆ ಎರಡು
ಬರಹ ಪಬ್ಲಿಷಿಂಗ್ ಹೌಸ್
ಬೆಂಗಳೂರು. ೨೦೧೦

ಬರಹಗಾರ

ಹೆಸರು: ಸಿ.ಪಿ. ನಾಗರಾಜ (1945)

ತಾಯಿ: ಲಕ್ಷ್ಮೀದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

ತಂದೆ: ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಓದು: ಎಂ.ಎ., ಪಿಎಚ್.ಡಿ.,

ಕೆಲಸ: ಕನ್ನಡ ಅಧ್ಯಾಪಕ

1971–72 ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ

1972–2003 ಭಾರತಿ ಕಾಲೇಜು, ಕಾಳಮುದ್ದನ ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

2006–2021 ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ಬರಹ: 1. **ಮುದ್ರಿತ ಪುಸ್ತಕಗಳು**

ನಾಟಕ: ಭಾಗೀರಥಿ ಅಂಬೆ ಹಾವು
ಅಂಗಿಬಟ್ಟೆ ಒಂದು ರೂಪಾಯಿ ಕಳ್ಳರಿದ್ದಾರೆ ಎಚ್ಚರಿಕೆ
ಹೆಣದ ಹಣ. ಮೂರು ಸಾಮಾಜಿಕ ನಾಟಕಗಳು

ಗದ್ಯ: ಕರಿಯನ ಪುರಾಣ ಕನಕನ ಅವ್ವ ಹಳ್ಳಿಗಾಡಿನ ರೂವಾರಿ
ಡಾ. ಬಂದೀಗೌಡ ಬಯ್ಗುಳ
ಸರ್ವಜ್ಞ ವಚನಗಳ ಓದು ಅಲ್ಲಮ ವಚನಗಳ ಓದು
ಶಿವಶರಣೆಯರ ವಚನಗಳ ಓದು ಶಿವಶರಣರ ವಚನಗಳ ಓದು
ಬಸವಣ್ಣ ವಚನಗಳ ಓದು ಮುದ್ದೆ ಗಂಟು
ಶಿವಶರಣಶರಣೆಯರ ವಚನಗಳ ಓದು
ಪಂಪ ಭಾರತ ಓದು ಸರ್ವಜ್ಞ ಮತ್ತು ಅಲ್ಲಮ ವಚನಗಳ ಓದು
ಕನ್ನಡ ಬಯ್ಗುಳ ಓದು ವಚನದಿಂದ ಆಯ್ದ ಸಾಲುಗಳ ಓದು
ರಾಮಧಾನ್ಯ ಪ್ರಸಂಗ ಓದು ಆಣೆ ಪ್ರಮಾಣಗಳು
ಬಸವಯುಗದ ವಚನಕಾರರು

2. ಮೈಲಾಂಗ್ ಡಿಜಿಟಲ್ ಪುಸ್ತಕಗಳು

https://mylang.in/collection/cpnagaraja

ಏಳು ನಾಟಕಗಳು (ಇಬುಕ್); ಭಾಗೀರಥಿ (ನಾಟಕ–ಇಬುಕ್); ಅಂಬೆ (ನಾಟಕ–ಇಬುಕ್); ಹಾವು (ನಾಟಕ–ಇಬುಕ್); ಅಂಗಿ ಬಟ್ಟೆ (ನಾಟಕ–ಇಬುಕ್); ಒಂದು ರೂಪಾಯಿ (ನಾಟಕ–ಇಬುಕ್); ಕಳ್ಳರಿದ್ದಾರೆ.. ಎಚ್ಚರಿಕೆ (ನಾಟಕ–ಇಬುಕ್); ಹೆಣದ ಹಣ(ನಾಟಕ–ಇಬುಕ್); ಶಿವಶರಣಶರಣೆಯರ ವಚನಗಳ ಓದು(ಇಬುಕ್);

ಬಯ್ಗುಳ (ಆಡಿಯೋ ಬುಕ್); ಸರ್ವಜ್ಞನ ವಚನಗಳ ಓದು (ಆಡಿಯೋ ಬುಕ್); ಅಲ್ಲಮನ ವಚನಗಳ ಓದು (ಆಡಿಯೋ ಬುಕ್); ಬಸವಣ್ಣನ ವಚನಗಳ ಓದು (ಆಡಿಯೋ ಬುಕ್); ಶಿವಶರಣಶರಣೆಯರ ವಚನಗಳ ಓದು–1–(ಆಡಿಯೋ ಬುಕ್); ಶಿವಶರಣಶರಣೆಯರ ವಚನಗಳ ಓದು–2–(ಆಡಿಯೋ ಬುಕ್); ವಚನದಿಂದ ಆಯ್ದ ಸಾಲುಗಳ ಓದು–1–(ಆಡಿಯೋ ಬುಕ್); ವಚನದಿಂದ ಆಯ್ದ ಸಾಲುಗಳ ಓದು–2–(ಆಡಿಯೋ ಬುಕ್); ಮುದ್ದೆಗಂಟು (ಆಡಿಯೋ ಬುಕ್).

3. **C P Nagaraj-You Tube**

PLAY LISTS

ಸರ್ವಜ್ಞನ ವಚನಗಳ ಓದು– 13 ಎಪಿಸೋಡ್

ಅಲ್ಲಮನ ವಚನಗಳ ಓದು– 36 ಎಪಿಸೋಡ್

ಬಸವಣ್ಣನ ವಚನಗಳ ಓದು– 26 ಎಪಿಸೋಡ್

ಶಿವಶರಣಶರಣೆಯರ ವಚನಗಳ ಓದು– 52 ಎಪಿಸೋಡ್

ವಚನದಿಂದ ಆಯ್ದ ಸಾಲುಗಳ ಓದು– 162 ಎಪಿಸೋಡ್

ಮುದ್ದೆಗಂಟು– 60 ಎಪಿಸೋಡ್

ವಿಳಾಸ: ಸಿ.ಪಿ.ನಾಗರಾಜ, 75, 'ಎ' ಬ್ಲಾಕ್, 5ನೆಯ ಕ್ರಾಸ್, ಕ್ರಿಷ್ಣ ಗಾರ್ಡನ್, ಆರ್.ವಿ. ಕಾಲೇಜು ಪೋಸ್ಟ್, ಬೆಂಗಳೂರು–560059, ಮೊ: 9986347521.
e-mail : ngy7777@gmail.com

❖❖❖

ಡಾ.ಸಿ.ಪಿ.ನಾಗರಾಜ ಅವರು ಸಂಪಾದಿಸಿರುವ 'ಬಸವಯುಗದ ವಚನಕಾರರು–ಆಯ್ದ ವಚನಗಳ ಕಟ್ಟು' ಗಮನಾರ್ಹವೆನಿಸುತ್ತದೆ. ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ – ಈ ಮೂವರನ್ನು ಹೊರತುಪಡಿಸಿ, ಉಳಿದ ಬಸವಯುಗದ ವಚನಕಾರರ ವಚನಗಳು ಇಲ್ಲಿ ಸೇರ್ಪಡೆಯಾಗಿವೆ. ಈ ಕಾಲದ ಅರವತ್ತ ನಾಲ್ಕು ಶರಣರು ಮತ್ತು ಹದಿನೆಂಟು ಶರಣೆಯರ ಒಟ್ಟು ಮುನ್ನೂರ ಒಂದು ವಚನಗಳು ಇಲ್ಲಿವೆ. ಅನುಭಾವ ಮತ್ತು ಸಾಹಿತ್ಯ – ಈ ಎರಡು ನೆಲೆಯಿಂದ ಇಲ್ಲಿ ಸೇರ್ಪಡೆಯಾಗಿರುವ ವಚನಗಳಿಗೆ ಮಹತ್ವವಿದೆ. ಈ ಸಂಕಲನದ ಹಿನ್ನೆಲೆ ಮತ್ತು ವೈಶಿಷ್ಟ್ಯವನ್ನು ನಾಗರಾಜ್ ವಿವೇಚಿಸಿದ್ದಾರೆ.

ಡಾ.ಸಿ.ಪಿ.ನಾಗರಾಜ ಅವರು ಕನ್ನಡ ಅಧ್ಯಾಪಕರಾಗಿ ನಿವೃತ್ತಿಯಾದ ಮೇಲೆ ನಿರಂತರವಾಗಿ ಕನ್ನಡ ಸಾಹಿತ್ಯದ ಓದು ಮತ್ತು ವ್ಯಾಖ್ಯಾನದಲ್ಲಿ ತೊಡಗಿಸಿಕೊಂಡಿದ್ದಾರೆ. ನಾಟಕಕಾರ ಮತ್ತು ಅಂಕಣಕಾರರಾಗಿದ್ದ ಇವರು ನಿವೃತ್ತಿಯ ಬಳಿಕ ಸಂಪೂರ್ಣವಾಗಿ ಸಾಹಿತ್ಯ ವಿಮರ್ಶೆ ಮತ್ತು ವ್ಯಾಖ್ಯಾನದಲ್ಲಿ ನಿರತರಾಗಿದ್ದಾರೆ. ಪಂಪ, ಕುವೆಂಪು, ವಚನಕಾರರನ್ನು ಕುರಿತು ಹಲವು ಕೃತಿಗಳನ್ನು ರಚಿಸಿದ್ದಾರೆ. ವಿದ್ವಾಂಸರಿಗಿಂತ ಸಾಮಾನ್ಯ ಓದುಗರನ್ನು, ವಿದ್ಯಾರ್ಥಿಗಳನ್ನು ಮತ್ತು ಅಧ್ಯಾಪಕರನ್ನು ಲಕ್ಷ್ಯದಲ್ಲಿಟ್ಟುಕೊಂಡು ಕನ್ನಡ ಸಾಹಿತ್ಯ ಪ್ರಚಾರ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ.

ಕೆ. ಮರುಳಸಿದ್ದಪ್ಪ

ರೂ. 200/-

ನಾಗು ಸ್ಮಾರಕ ಪ್ರಕಾಶನ, ಬೆಂಗಳೂರು